ಸಂಪುಟ: 05 ಸಂಚಿಕೆ: 93 ಪುಟಗಳು: 08 ಸೋಮವಾರ 16 ಜೂನ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಹಣವಂತರ ಜೊತೆ ನೂರಾರು ವರ್ಷ ಬದುಕುವದಕ್ಕಿಂತಲು, ಹೃದಯವಂತರ ಜೊತೆ ಮೂರು ದಿನ ಬದುಕಿದರು ಜೀವನ ಸಾರ್ಥಕ....

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮುಖ್ಯಮಂತ್ರಿ ಬದಲಾವಣೆ ಮಹತ್ವದ ಹೇಳಿಕೆ ಕೊಟ್ಟ ಸಚಿವ ಮಹದೇವಪ್ಪ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಬದಲಾವಣೆ ಯಾವುದೇ ಪ್ರಸ್ತಾಪ, ಸರ್ಕಾರ ಅಥವಾ ಪಕ್ಷದ ಮುಂದಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಕಾಂಗ್ರೆಸ್ ಹೈಕಮಾಂಡ್ ಯಾವಾಗ ವಿಷಯ ತಿಳಿಸಿದೆಯೋ ಗೊತ್ತಿಲ್ಲ. ಮುಖ್ಯಮಂತ್ರಿಯಾಗಿದ್ದಾರೆ. ಮುಖ್ಯಮಂತ್ರಿಯಾಗಿಯೇ ಮುಂದುವರೆಯುತ್ತಾರೆ ಎಂದರು. ಸರ್ಕಾರದ ನಡುವೆ ಹೊಂದಾಣಿಕೆ ಇದೆ. ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ಸಮಸ್ಯೆ ಇಲ್ಲ ಎಂಬುದಕ್ಕೆ ನಿನ್ನೆ ಯಾದಗಿರಿಯಲ್ಲಿ ನಡೆದ ಕಾರ್ಯಕ್ರಮವೇ ಸಾಕ್ಷಿ. ಲಕ್ಷಾಂತರ ಜನ ಅಭಿವೃದ್ಧಿ ಕಾರ್ಯಗಳಿಗೆ ಸಾಕ್ಷಿಯಾಗಿದ್ದರು. ವಿರೋಧಪಕ್ಷಗಳು ರಾಜಕೀಯಕ್ಕಾಗಿ ಸುಳ್ಳು ಹೇಳುತ್ತಿವೆ ಎಂದು ಆರೋಪಿಸಿದರು. ಇದೇ ತಿಂಗಳ 23ಕ್ಕೆ ರಾಯಚೂರಿನಲ್ಲಿ ಮತ್ತೊಂದು ಬೃಹತ್ ಸಮಾವೇಶ ನಡೆಯಲಿದೆ.
ಅಲ್ಲಿಯೂ ನೂರಾರು ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತದೆ ಎಂದರು.

## ವೈದ್ಯ ಹಾಗೂ ಸಿಬ್ಬಂದಿಗಳಿಗೆ ಮೊಬೈಲ್ ಹಾಜರಾತಿ ಕಡ್ಡಾಯ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಸಿಬ್ಬಂದಿಗಳು ಜು.1 ರಿಂದ ಮೊಬೈಲ್ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ ಎಂದು ಆರೋಗ್ಯ, ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಹಲವು ದಿನಗಳಿಂದ ಚಾಲನೆಯಲ್ಲಿದ್ದ ಪ್ರಕ್ರಿಯೆಗಳು ಅಂತಿಮ ಹಂತಕ್ಕೆ ಬಂದಿದ್ದು, ಕೊನೆಗೂ ಸರ್ಕಾರಿ ಆದೇಶ ಹೊರಬಿದ್ದಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸಿಗುವುದಿಲ್ಲ ಎಂಬ ದೂರಿಗೆ ಹಿತೈಷಿ ಹಾಡಲು ನೂತನ ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಇದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಸಚಿವರು ಮನವಿ ಮಾಡಿದ್ದಾರೆ. ಪ್ರಸ್ತುತ ಬಳಸಲ್ಪಡುತ್ತಿರುವ ಹಾಜರಾತಿ ನಿರ್ವಹಣಾ ವ್ಯವಸ್ಥೆಯ ಹಾರ್ಡ್‌ವೇರ್, ಸಾಫ್ಟವೇರ್‌ಗಳೂ ಆಧಾರ್ ಆಧಾರಿತ ಬಯೋಮೆಟ್ರಿಕ್ ಪ್ರಮಾಣಿಕರಣವನ್ನು ಅವಲಂಬಿಸಿದೆ. ಹಾರ್ಡ್‌ವೇರ್ ಸಾಧನಗಳಿಗೆ ಆಗಾಗ್ಗೆ ದುರಸ್ತಿ, ಆವರ್ತಕ ಬದಲಾವಣೆಗಳ ಅಗತ್ಯವಿದೆ. ಇದು ಗಣನೀಯ ವೆಚ್ಚಗಳಿಗೆ ಕಾರಣವಾಗಿತ್ತು. ಬಯೋಮೆಟ್ರಿಕ್ ಸಾಧನಗಳ ಸ್ಥಿರ ಸ್ವರೂಪದಿಂದ ಹಾಜರಾತಿ ಗುರುತಿಸುವಿಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಸೀಮಿತಗೊಳಿಸಿದೆ. ಕ್ಷೇತ್ರ ಸಂಬಂಧಿ ದೂರ ಪ್ರದೇಶ ಗಳಲ್ಲಿ ಕೆಲಸ ಮಾಡುವವರಿಗೆ ಇದು ಸಹಕಾರಿಯಾಗಿರಲಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

## ಕಾಲ್ತುಳಿತ ದುರಂತ: ತುರ್ತು ಅಧಿವೇಶನ ಕರೆಯಲು ಅಶೋಕ್ ಆಗ್ರಹ

• ಉದಯವಾಹಿನಿ, ಬೆಂಗಳೂರು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಾದ ಕಾಲ್ತುಳಿತ ದುರಂತದ ಕುರಿತು ಚರ್ಚಿಸಲು ವಿಧಾನಮಂಡಲದ ತುರ್ತು ಅಧಿವೇಶನ ಕರೆಯುವಂತೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಈ ಕುರಿತು ಸಿದ್ದರಾಮಯ್ಯ ಅವರಿಗೆ ಆರ್. ಅಶೋಕ್ ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ ಈ ದುರ್ಘಟನೆಯು ಸಾರ್ವಜನಿಕ ಸುರಕ್ಷತೆ, ಗುಂಪು ನಿಯಂತ್ರಣ, ಕ್ರೀಡಾ, ಇತರೇ ಕಾರ್ಯಕ್ರಮಗಳ ಆಯೋಜನೆಗೆ ಸಂಬಂಧಿಸಿದಂತೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಈ ದುರಂತ ಜನರಲ್ಲಿ ಆತಂಕ ಮತ್ತು ಕಳವಳ ಉಂಟುಮಾಡಿದೆ ಎಂದಿದ್ದಾರೆ. **ಸತ್ಯ ಮರೆಮಾಚಲು 3 ರೀತಿಯ ತನಿಖೆ:** ಘಟನೆಗೆ ಸಂಬಂಧಿಸಿದಂತೆ ಆಡಳಿತದಲ್ಲಿ ಆಗಿರುವ ಲೋಪಗಳು, ಘಟನೆ ನಂತರ ಸರ್ಕಾರದ ಕ್ರಮಗಳು ಅನೇಕ ಸಂಶಯಗಳನ್ನು ಹುಟ್ಟುಹಾಕಿದೆ. ಕಾಲ್ತುಳಿತಕ್ಕೆ ಕಾರಣರಾದ ಬಲಾಢ್ಯರನ್ನು ರಕ್ಷಿಸಲಾಗುತ್ತಿದೆ. ಸತ್ಯವನ್ನು ಮರೆಮಾಚಲು 3 ರೀತಿಯ ತನಿಖೆಗಳನ್ನು ಮಾಡಲಾಗುತ್ತಿದೆ. ಅಸಹಾಯಕ ಅಧಿಕಾರಿಗಳನ್ನು ಬಲಿಪಶು ಮಾಡಲಾಗಿದೆ ಎಂಬ ಚರ್ಚೆಗಳು ಸಾರ್ವಜನಿಕ ವಲಯದಲ್ಲಿ ನಡೆಯುತ್ತಿವೆ ಎಂದು ದೂರಿದ್ದಾರೆ.

## ನಗರಕ್ಕೆ ಸಂಬಂಧಿಸಿದಂತೆ 72 ಪ್ರಶ್ನೆ ಕೇಳಿದ ಪಿ.ಸಿ.ಮೋಹನ್

• ಉದಯವಾಹಿನಿ, ಬೆಂಗಳೂರು



ನಗರಕ್ಕೆ ಸಂಬಂಧಿಸಿದಂತೆ 72 ಪ್ರಶ್ನೆಗಳನ್ನು ಬೆಂಗಳೂರು ಕೇಂದ್ರ ಕ್ಷೇತ್ರದ ಸದಸ್ಯ ಪಿ.ಸಿ. ಮೋಹನ್ ಲೋಕಸಭೆಯಲ್ಲಿ ಕೇಳಿದ್ದಾರೆ.ಬೆಂಗಳೂರು ನಗರದಿಂದ ಆಯ್ಕೆಯಾಗಿರುವ ನಾಲ್ವರು ಸಂಸದರ ಒಂದು ವರ್ಷದ ಸಾಧನೆ, 32 ಶಾಸಕರ ಎರಡು ವರ್ಷದ ಸಾಧನೆಯ ವರದಿಯಲ್ಲಿ ಪಿ.ಸಿ. ಮೋಹನ್ ಒಂದು ಪ್ರಶ್ನೆ ಕೇಳಿದ್ದಾರೆ ಎಂದು ಭಾನುವಾರದ ಸಂಚಿಕೆಯಲ್ಲಿ ವರದಿಯಾಗಿತ್ತು. ಇದು ತಪ್ಪು ಮಾಹಿತಿ ಎಂದು ಪಿ.ಸಿ. ಮೋಹನ್ ತಿಳಿಸಿದ್ದಾರೆ. ಬೆಂಗಳೂರಿಗೆ ಸಂಬಂಧಿಸಿದಂತೆ 72 ಪ್ರಶ್ನೆಗಳನ್ನು ಕೇಳಿರುವ ಅವರು, ಚರ್ಚೆಯೊಂದರಲ್ಲಿ ಪಾಲ್ಗೊಂಡಿದ್ದಾರೆ. ಅಧಿವೇಶನದಲ್ಲಿ ಶೇ 98.5 ಹಾಜರಾತಿ ಹೊಂದಿದ್ದಾರೆ.



■ ಜೆಡಿಎಸ್ ಬೇರು ಗಟ್ಟಿ
■ ನಾನು ಇಲ್ಲದಿದ್ದರೂ ಜೆಡಿಎಸ್ ಪಕ್ಷ ಇದ್ದೇ ಇರುತ್ತೆ.. ಇದ್ಯಾಕೆ ಹೀಗಂದ್ರು ದೇವೇಗೌಡ್ರು...?
■ ಜೆಡಿಎಸ್ ಸಮಾವೇಶಕ್ಕೆ ಮಗನ ಜೊತೆ ದೇವೇಗೌಡರ ಎಂಟ್ರಿ..! ದೇವೇಗೌಡ್ರ ಖಡಕ್ ಸಂದೇಶ
■ ಜಿಲ್ಲಾ, ತಾಲ್ಲೂಕು ಪಂಚಾಯಿತಿ, BBMP ಚುನಾವಣೆಗೆ JDS ಪಕ್ಷಕ್ಕೆ ಟಾರ್ಗೆಟ್
■ ನಿಖಿಲ್ ಪಟ್ಟಾಭಿಷೇಕಕ್ಕೂ ಮುನ್ನ ರಾಜ್ಯ ಪ್ರವಾಸದ ಪರೀಕ್ಷೆ

# ಮೈತ್ರಿ ಸಂಬಂಧ ವೃದ್ಧಿ ಮೋದಿ ಬುನಾದಿ

**ಮಾಜಿ ಪ್ರಧಾನಿಗಳು ತಿರುಗೇಟು**

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ಪಕ್ಷ ರಾಜ್ಯದಾದ್ಯಂತ ತನ್ನ ಬಲ ವೃದ್ಧಿಸಲು ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಸಂಘಟನಾ ಚಟುವಟಿಕೆಗಳನ್ನು ಚುರುಕುಗೊಳಿಸಿದೆ.
ಮಿಸ್ ಕಾಲ್ ಮೂಲಕ ಸದಸ್ಯತ್ವ ನೋಂದಣಿ ಎಂಬ ಹೊಸ ಕಾರ್ಯಕ್ರಮ ಆರಂಭಿಸಿದ್ದು, ಈ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಚಾಲನೆ ನೀಡಿದ್ದಾರೆ.
ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಸುರೇಶ್ ಬಾಬು, ಅನೇಕ ಶಾಸಕರು ಈ ಸಂದರ್ಭದಲ್ಲಿ ಹಾಜರಿದ್ದರು.
ಕಾರ್ಯಕ್ರಮದಲ್ಲಿ ದೇವೇಗೌಡರು ಮಾತನಾಡುತ್ತಾ, ಜೆಡಿಎಸ್ ಮುಕ್ತಾಯವಾಗಿದೆ ಎಂಬವರು ತಪ್ಪು ಊಹ ಮಾಡುತ್ತಿದ್ದಾರೆ ಎಂದು ಖಡಕ್ ಸಂದೇಶ ನೀಡಿದರು. ಅವರು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ, ಭದ್ರಾವತಿ ಕಾರ್ಖಾನೆ ಹಾಗೂ ಹೆಚ್‌ಎಂಟಿ ಪ್ರಾಜೆಕ್ಟ್‌ಗಳಿಗೆ ಅನುಮತಿ ನೀಡುವಲ್ಲಿ ರಾಜ್ಯ ಸರ್ಕಾರ ಹಿಂದೂ ಮುಂದು ನೋಡುತ್ತಿದೆ ಎಂದು ಟೀಕಿಸಿದರು. ಯಾರನ್ನೂ ನೇರವಾಗಿ ಟೀಕಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.
ಸ್ವತಃ ದೇವೇಗೌಡರು ತಮ್ಮ ಆರೋಗ್ಯದ ಕುರಿತು ಮಾತನಾಡುತ್ತಾ, ನನಗೆ ಕಾಲಿಗೆ ತೊಂದರೆ ಇದ್ದರೂ ಬುದ್ದಿಗೆ ಏನೂ ತೊಂದರೆ ಇಲ್ಲ ಎಂದು ಹೇಳಿದರು. ಪಕ್ಷದ ಭವಿಷ್ಯ ಕುರಿತು ದೇವೇಗೌಡರು ದೃಢ ನಿಲುವು ಹೊಂದಿದ್ದು, ''ನಾನು ಇಲ್ಲದಿದ್ದರೂ ಜೆಡಿಎಸ್ ಮುಂದುವರಿಯುತ್ತದೆ ಎಂದು ಹೇಳಿದರು. ನಿಖಿಲ್ ಕುಮಾರಸ್ವಾಮಿ ಅವರು 58 ದಿನಗಳ ರಾಜ್ಯ ಪ್ರವಾಸ ಆರಂಭಿಸಲು ಸಜ್ಜಾಗಿದ್ದು, ಜನರು ಕುಮಾರಸ್ವಾಮಿ ಅವರನ್ನು ಮತ್ತೆ ಮುಖ್ಯಮಂತ್ರಿ ಆಗಬೇಕೆಂದು ಬಯಸುತ್ತಿದ್ದಾರೆ ಎಂದು ಹೇಳಿದರು. ಕುಮಾರಸ್ವಾಮಿ ಸಹಕಾರ ಮರೀಬೇಡಿ: ಕಾಂಗ್ರೆಸ್‌ನ ಆಡಳಿತದ ಬಗ್ಗೆ ಅಸೂಯೆಯಿಂದ ಮಾತಾಡಲ್ಲ. ಅವರು ಎರಡು ವರ್ಷ ಪೂರೈಸಿದ್ದಾರೆ. ಇನ್ನೂ 3 ವರ್ಷ ಪೂರ್ಣಗೊಳಿಸಬೇಕೆಂದು ಅವರ ಬಯಕೆ ಇದೆ. ಅದರ ಬಗ್ಗೆ ನಾನು ಚರ್ಚೆ ಮಾಡೋಕೆ ಹೋಗಲ್ಲ. ಕುಮಾರಸ್ವಾಮಿಯವರಿಗೆ ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳು ಶಕ್ತಿ ಕೊಡಲು ಸಹಕಾರ ಕೊಡ್ತಿದ್ದಾರೆ. ಅದೇ ರೀತಿ ಕರ್ನಾಟಕ ಸರ್ಕಾರ ಕೂಡ ಕುಮಾರಸ್ವಾಮಿಯವರ ಸಹಕಾರ ಕೊಡುವ ಬಗ್ಗೆ ನೆನಪಲ್ಲಿ ಇಟ್ಟುಕೊಳ್ಳಬೇಕು ಎಂದು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ದೇವೇಗೌಡ್ರು ಸಲಹೆ ನೀಡಿದ್ರು.
**ಕಾಲಿಗಷ್ಟೇ ಸಮಸ್ಯೆ, ನನ್ನ ಬುದ್ದಿಗೆ ತೊಂದರೆ ಇಲ್ಲ:** ದೇವೇಗೌಡರ ಕಾಲದ ನಂತರ ಜೆಡಿಎಸ್ ಉಳಿಯಲ್ಲ ಎಂಬ ಮಾತಿಗೆ ಖಡಕ್ ಸಂದೇಶ ನೀಡಿದ್ರು. ಸೋಲು, ಗೆಲುವಿಗೆ ಬುನಾದಿ ಆಗುತ್ತದೆ ಎಂಬುದನ್ನು ಮರೆಯಬಾರದು.
ಎದೆಗುಂದ ಬಾರದು, ನನಗೆ ಇಷ್ಟು ವರ್ಷ ಆದ್ರೂ ಕಾಲಿನ ಸಮಸ್ಯೆಯಿಂದ ಸ್ವಲ್ಪ ನಡೆಯೋಕೆ ಆಗಲ್ಲ. ಕಾಲಿಗೆ ತೊಂದರೆ ಬಿಟ್ಟರೆ ನನ್ನ ಬುದ್ದಿಗೆ ತೊಂದರೆ ಇಲ್ಲ. ನಾನು ಯಾವುದನ್ನು ಮರೆಯೋದಿಲ್ಲ ಎಂದು ದೇವೇಗೌಡ್ರು ಎಚ್ಚರಿಕೆ ನೀಡಿದ್ದಾರೆ.
**ಸರ್ಕಾರದ ವಿರುದ್ಧ ಅಸಮಾಧಾನ ಹೆಚ್‌ಡಿಡಿ ಅಸಮಾಧಾನ:** ಕಾರ್ಯಕ್ರಮದಲ್ಲಿ ಮಾತಾಡಿದ ದೇವೇಗೌಡ್ರು, ನಾನು ಇಲ್ಲಿ ಯಾರನ್ನು ಟೀಕೆ ಮಾಡಲ್ಲ ಎಂದ್ರು. ಟೀಕೆಯಿಂದ ಏನು ಪ್ರಯೋಜನ ಆಗಲ್ಲ. ಭದ್ರಾವತಿ ಕಾರ್ಖಾನೆ, ಹೆಚ್‌ಎಂಟಿ, ಸೇರಿ ಅನೇಕ ಸಂಸ್ಥೆಗಳಿಗೆ ರಾಜ್ಯ ಸರ್ಕಾರದ ಅನುಮತಿಬೇಕು. ಇದರ ಬಗ್ಗೆ ಸೂಕ್ಷ್ಮವಾಗಿ ಹೇಳ್ತೇನೆ ಎಂದು ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿದ್ರು.

**1** ಜೆಡಿಎಸ್ ಕಚೇರಿಗೆ ಜಾಗಕೊಟ್ಟ ಮಹಿಳೆ ಬಗ್ಗೆ ಮಾತನಾಡಿದ ಎಚ್‌ಡಿ ದೇವೇಗೌಡರು.

**2** ಪಕ್ಷವು ಯಾವುದೇ ಕುಟುಂಬಕ್ಕೆ ಸೀಮಿತವಾಗಿಲ್ಲ ಎಂದು ಪ್ರತಿಪಾದಿಸಿದ ಎಚ್‌ಡಿಡಿ.

**3** ದೇಶದಲ್ಲಿ ಮೋದಿಗೆ ಎದುರಾಗಿ ನಿಲ್ಲುವ ನಾಯಕರಿಲ್ಲದ ಕಾರಣ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದೇವೆ ಎಂದ ಮಾಜಿ ಪ್ರಧಾನಿ.



### ಮೋದಿಗೆ ಎದುರು ನಿಲ್ಲಬಲ್ಲ ಇನ್ನೊಬ್ಬ ನಾಯಕ ಇಲ್ಲ

ಬಿಜೆಪಿ, ಕಾಂಗ್ರೆಸ್ ಬಿಟ್ಟರೆ ಉಳಿದ ಎಲ್ಲಾ ಪಕ್ಷಗಳು ಪ್ರಾದೇಶಿಕ ಪಕ್ಷಗಳು. ಅನೇಕ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಆಡಳಿತ ನಡೆಸುತ್ತಿವೆ. ಮೋದಿ ಅವರು ದೊಡ್ಡ ನಾಯಕರು, ಪ್ರಧಾನಿಯಾಗಿ, ವಿಶ್ವನಾಯಕರಾಗಿ ಅವರು ಬೆಳೆದಿದ್ದಾರೆ. ಅವರಿಗೆ ಎದುರು ನಿಲ್ಲುವ ಮತ್ತೊಬ್ಬ ನಾಯಕ ಇಡೀ ದೇಶದಲ್ಲಿ ಯಾರೂ ಇಲ್ಲ. ಯಾವ ಪಕ್ಷದಲ್ಲಿಯೂ ಇಲ್ಲ. ಈ ಕಾರಣಕ್ಕಾಗಿ ನಾವು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದೇವೆ. ನಾವು ಪ್ರಧಾನಿಗಳ ಜತೆ ಕೈ ಜೋಡಿಸಿದ್ದೇವೆ. ಅವರ ವಿಶ್ವಾಸಗಳಿಸಿದ್ದೇವೆ. ಕುಮಾರಸ್ವಾಮಿ ಅವರನ್ನು ಸಚಿವರನ್ನಾಗಿ ಮಾಡಿ ಎಂದು ಕೇಳಿದವನಲ್ಲ. ಆದರೆ, ಮೋದಿ ಅವರೇ ಅವರನ್ನು ತಮ್ಮ ಸಂಪುಟದಲ್ಲಿ ಸಚಿವರನ್ನಾಗಿ ಮಾಡಿ ಉತ್ತಮ ಖಾತೆಗಳನ್ನು ನೀಡಿದ್ದಾರೆ ಎಂದು ದೇವೇಗೌಡರು ಹೇಳಿದರು.

### ನಾನು ಹೋದ್ಮೇಲೂ ಈ ಪಕ್ಷ ಇರುತ್ತೆ



ನಿಖಿಲ್ ಕುಮಾರಸ್ವಾಮಿ ಅವರನ್ನು ನಾನು ಮೆಚ್ಚುತ್ತೇನೆ ಎಂದ ದೇವೇಗೌಡ್ರು. ಕಾಲಭೈರೇಶ್ವರನ ಬಳಿ ಹೋಗಿ ಶಕ್ತಿ ಬೇಡಿ ಬಂದಿದ್ದಾರೆ. ಮೊರಾರ್ಜಿಯವರು ನನಗೆ ಪಕ್ಷವನ್ನು ಕೊಟ್ರು. ಜನತಾದಳ ಎಷ್ಟೇ ಭಾಗ ಆದ್ರೂ ಈ ಪಕ್ಷ ಉಳಿದಿದೆ. ನಾನು ಹೋದ್ಮೇಲೂ ಪಕ್ಷ ಉಳಿಯುತ್ತದೆ. ಇದನ್ನು ಬರೆದಿಟ್ಟುಕೊಳ್ಳಿ, ಈ ಪಕ್ಷವನ್ನು ಮುಗಿಸ್ತೀನಿ ಅನ್ನೋ ಮಹಾನುಭವರ ಎಂದಿಗೂ ಹುಟ್ಟಲು ಸಾಧ್ಯವಿಲ್ಲ ಎಂದು ದೇವೇಗೌಡ್ರು ಸವಾಲಿನ ಮಾತಾಡಿದ್ದಾರೆ. ಜೆಡಿಎಸ್ ಒಂದು ಕುಟುಂಬದ ಪಕ್ಷ ಅಲ್ಲ. ಈ ಮಾತನ್ನು ಆಡುವರು ಅವ್ರ ಮನಸ್ಸಿಗೆ ಪ್ರಶ್ನೆ ಹಾಕಿಕೊಳ್ಳಬೇಕು. ಎಷ್ಟು ಜನರು ಈ ಪಕ್ಷಕ್ಕೆ ಬಂದು ಅಧಿಕಾರ ಅನುಭವಿಸಿ ಹೋಗಿದ್ದಾರೆ. ಇದರ ಇತಿಹಾಸವನ್ನ ನಾನು ಹೇಳೋಕೆ ಹೋಗಲ್ಲ. ಕುಮಾರಸ್ವಾಮಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದ ಕಾಂಗ್ರೆಸ್‌ಗೆ ದೇವೇಗೌಡರು ತಿರುಗೇಟು ನೀಡಿದ್ರು. ಮೊದಲ ಹಂತದಲ್ಲಿ 58 ದಿನ ಪ್ರವಾಸಕ್ಕೆ ನಿಖಿಲ್ ಕುಮಾರಸ್ವಾಮಿ ಮುಂದಾಗಿದ್ದಾರೆ. ಇದೇ ವೇಳೆ ಮಾತಾಡಿದ ನಿಖಿಲ್, ನಾಡಿನ ಜನರು ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿ ಆಗಬೇಕೆಂದು ಬಯಸ್ತಿದ್ದಾರೆ. ಅದಕ್ಕಾಗಿ ಕುಮಾರಸ್ವಾಮಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರಬೇಕು ಎಂದ್ರು.

### ಜೆಡಿಎಸ್ ಒಂದು ಕುಟುಂಬದ ಪಕ್ಷವಲ್ಲ

ಜೆಡಿಎಸ್ ಕುಟುಂಬದ ಪಕ್ಷ ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಇದು ಒಂದು ಕುಟುಂಬದ ಪಕ್ಷವಲ್ಲ. ಇದು ಕಾರ್ಯಕರ್ತರ ಪಕ್ಷ. ಎಷ್ಟೋ ಮಹಾನುಭಾವರು ಈ ಪಕ್ಷದಲ್ಲಿ ಅಧಿಕಾರ ಅನುಭವಿಸಿ ಹೋಗಿದ್ದಾರೆ, ಇನ್ನೂ ಅನುಭವಿಸುತ್ತಿದ್ದಾರೆ, ಎಲ್ಲಾ ಅಧಿಕಾರ ಅನುಭವಿಸಿ ಪಕ್ಷ ಬಿಟ್ಟು ಹೋಗಿದ್ದಾರೆ. ಆದರೆ ಪಕ್ಷ ಮಾತ್ರ ಹಾಗೆಯೇ ಇದೆ. ಎರಡು ರಾಷ್ಟ್ರೀಯ ಪಕ್ಷಗಳ ನಡುವೆ ಜೆಡಿಎಸ್ ಇನ್ನೂ ಸದೃಢವಾಗಿ ಬದುಕಿದೆ. ಇದು ಹೇಗೆ ಎಂಬ ಪ್ರಶ್ನೆಯನ್ನು ಟೀಕೆ ಮಾಡುವವರು ಕೇಳಿಕೊಳ್ಳಬೇಕು ಎಂದು ಮಾಜಿ ಪ್ರಧಾನಿಗಳು ತಿರುಗೇಟು ನೀಡಿದರು.

## ಬಿಎಂಟಿಸಿ ಸಿಬ್ಬಂದಿ ಮೇಲೆ ಹಲ್ಲೆ, ಅವಮಾನಕಾರಿ ಘಟನೆ ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ಬಿಎಂಟಿಸಿ ಸಿಬ್ಬಂದಿ ಮೇಲೆ ಪದೇ ಪದೆ ನಡೆಯುತ್ತಿರುವ ಹಲ್ಲೆ ಮತ್ತು ಅವಮಾನಕರ ಘಟನೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ. ಇತ್ತೀಚೆಗೆ ಸಾರಿಗೆ ಸಿಬ್ಬಂದಿ ಮೇಲೆ ಹಲ್ಲೆಯಂತಹ ಪ್ರಕರಣಗಳು ಹೆಚ್ಚಾಗಿವೆ. ಈ ಹಿಂದೆ ನಗರದಲ್ಲಿ ಇಂತಹ ಪ್ರಕರಣಗಳು ನಡೆದಿದ್ದು, ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆಯಲಾಗಿತ್ತು. ಅಲ್ಲದೆ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿ ಮಾಹಿತಿ ಒದಗಿಸಿದ್ದರು.
ಅದರ ನಂತರವೂ ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾರಿಗೆ ಸಿಬ್ಬಂದಿ ಮೇಲೆ ಹಲ್ಲೆ ನಡೆದಿದೆ ಎಂದು ಸಚಿವರು ಪತ್ರದಲ್ಲಿ ಆಘಾತ ವ್ಯಕ್ತಪಡಿಸಿದ್ದಾರೆ.
ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಸೇರಿದಂತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ಮೇಲೆ ನಡೆಯುವ ಹಲ್ಲೆ ಮತ್ತು ಅವಮಾನ ಸಹಿಸಲಾಗದು. ಈ ಹಿಂದೆ ಕೆಲ ಕಿಡಿಗೇಡಿಗಳು ಚಾಕುವಿನಿಂದ ಹಲ್ಲೆ ನಡೆಸಿ, ಸಾರಿಗೆ ಸಿಬ್ಬಂದಿ ಪ್ರಾಣಕ್ಕೆ ಸಂಚಕಾರ ತಂದ ಘಟನೆಯೂ ನಡೆದಿವೆ.



**ಚಪ್ಪಲಿಯಿಂದ ಬಸ್ ಚಾಲಕನಿಗೆ ಥಳಿಸಿದ ಮಹಿಳೆ:** ಬೆಂಗಳೂರಿನ ಸರ್ಜಾಪುರ ರಸ್ತೆಯಲ್ಲಿ ಮಹಿಳೆಯೊಬ್ಬರು ಬಿಎಂಟಿಸಿ ಬಸ್ ಚಾಲಕನಿಗೆ ಚಪ್ಪಲಿಯಿಂದ ಹೊಡೆದಿದ್ದ ಘಟನೆ ನಡೆದಿತ್ತು. ಆ ಬೆನ್ನಲ್ಲೇ ಎಚ್ಚೆತ್ತ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಡಾ.ಜಿ ಪರಮೇಶ್ವರ್ ಅವರಿಗೆ ಪತ್ರ ಬರೆದಿದ್ದಾರೆ. ಕಾವ್ಯಾ ಎಂಬ ಸಾಫ್ಟ್‌ವೇರ್ ಎಂಜಿನಿಯರ್ ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ ಮಾಡಿದ್ದಾರೆ. ಈ ಸಂಬಂಧ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾವ್ಯಾ ಅವರು ಬಿಎಂಟಿಸಿ ಬಸ್ ಚಾಲಕ ಹುಸೇನ್ ಅವರಿಗೆ ಚಪ್ಪಲಿಯಿಂದ ಹೊಡೆದಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಹುಸೇನ್ ದೂರು ದಾಖಲಿಸಿದ್ದಾರೆ. ಪೊಲೀಸರ ಪ್ರಕಾರ, ಹುಸೇನ್ ಅವರು ಟಿನ್ ಫ್ಯಾಕ್ಟರಿಯಿಂದ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ಬಸ್ ಚಲಾಯಿಸುತ್ತಿದ್ದರು. ಕಾವ್ಯಾ ಕೈಕೊಂಡ್ರಹಳ್ಳಿಗೆ ಟಿಕೆಟ್ ತೆಗೆದುಕೊಂಡಿದ್ದರು. ಕೈಕೊಂಡ್ರಹಳ್ಳಿ ತಲುಪುವ ಮುನ್ನ ಕಾವ್ಯಾ ತನ್ನ ಕಚೇರಿ ಮುಂದೆ ಬಸ್ ನಿಲ್ಲಿಸುವಂತೆ ಚಾಲಕನಿಗೆ ಕೇಳಿದ್ದಾರೆ. ಆದರೆ, ಅದು ನಿಲುಗಡೆ ಸ್ಥಳವಾಗಿರದ ಕಾರಣ ಚಾಲಕ ಹುಸೇನ್ ಬಸ್ ನಿಲ್ಲಿಸಲಿಲ್ಲ. ಇದರಿಂದ ಕೋಪಗೊಂಡ ಕಾವ್ಯಾ, ಹುಸೇನ್ ಜೊತೆ ವಾಗ್ವಾದಕ್ಕಿಳಿದು ಕೆಟ್ಟದಾಗಿ ಮಾತನಾಡಿದ್ದಾರೆ. ಇತರ ಪ್ರಯಾಣಿಕರ ಎದುರೇ ಹುಸೇನ್ ಅವರಿಗೆ ಚಪ್ಪಲಿಯಿಂದ ಹೊಡೆದಿದ್ದಾರೆ. ಆಕೆಯ ಪತಿ ಠಾಣೆಗೆ ಬಂದು ಕ್ಷಮೆ ಕೇಳಿದರು. ಕಾವ್ಯಾ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆಕೆಯ ಪತಿ ತಿಳಿಸಿದರು.

### ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಒತ್ತಾಯ

ಪದೇ ಪದೆ ನಡೆಯುತ್ತಿರುವ ಇಂತಹ ಘಟನೆಗಳಿಂದ ಸಾರಿಗೆ ಸಿಬ್ಬಂದಿ ಭಯದ ವಾತಾವರಣದಲ್ಲಿ ಕೆಲಸ ಮಾಡುವಂತಾಗಿದೆ. ಆದ್ದರಿಂದ ಪೊಲೀಸ್ ಇಲಾಖೆಯು ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ತಪ್ಪಿತಸ್ಥ ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಯಲು ಶಾಶ್ವತ ಪರಿಹಾರ ರೂಪಿಸುವಂತೆ ಗೃಹ ಸಚಿವರಲ್ಲಿ ಮನವಿ ಮಾಡಿದ್ದಾರೆ.

## ಕರಾವಳಿಯಲ್ಲಿ ರೆಡ್ ಅಲರ್ಟ್ ಘೋಷಣೆ



• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಶನಿವಾರ ಹಗುರದಿಂದ ಸಾಧಾರಣ ಮಳೆಯಾಗಿದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಜೂನ್ 16 ರವರೆಗೆ ಮಧ್ಯಂತರ ಮಳೆಯಾಗುವ ಸಾಧ್ಯತೆಯಿದೆ ಭಾರತ ಹವಾಮಾನ ಇಲಾಖೆ (ಐಎಂಡಿ) ಮಾಹಿತಿ ನೀಡಿದೆ. ರಾಜ್ಯದಲ್ಲಿ ನೈಋತ್ಯ ಮಾನ್ಸೂನ್ ಸಕ್ರಿಯವಾಗಿರುವುದರಿಂದ, ನಗರದಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಕರಾವಳಿ ಭಾಗದಲ್ಲಿ ಜೂನ್ 15ರಂದು ಭಾರೀ ಮಳೆಯಾಗುವ ಸಾಧ್ಯತೆಗಳಿರುವುದರಿಂದ ರೆಡ್ ಅಲರ್ಟ್ ಘೋಷಣೆ ಮಾಡಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬರುವ ಸಾಧ್ಯತೆಯಿದೆ.
ಜೂನ್ 17 ರಿಂದ ಮಳೆಯ ತೀವ್ರತೆ ಸ್ವಲ್ಪ ಕಡಿಮೆಯಾಗುವ ನಿರೀಕ್ಷೆಯಿದ್ದು, ಜೂನ್ 18 ರವರೆಗೆ ಹಗುರದಿಂದ ಮಧ್ಯಮ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಮತ್ತು ಅಲ್ಲಲ್ಲಿ ಮಳೆಯಾಗಲಿದೆ ಎಂದು ಮಾಹಿತಿ ನೀಡಿದೆ. ಕರ್ನಾಟಕದ ಇತರ ಸ್ಥಳಗಳಿಗೆ, ವಿಶೇಷವಾಗಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದಂತಹ ಕರಾವಳಿ ಜಿಲ್ಲೆಗಳಿಗೆ ಭಾರೀ ಮಳೆಯಾಗಲಿದ್ದು, ರೆಡ್ ಅಲರ್ಟ್ ಘೋಷಿಸಿದೆ. ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ಅತಿ ಹೆಚ್ಚು 11 ಸೆಂ.ಮೀ ಮಳೆಯಾಗಿದೆ. ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

# ಅಹಮದಾಬಾದ್ ಬೆನ್ನಲ್ಲೇ ಮತ್ತೊಂದು ದುರಂತ....!

### ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೆಲಿಕಾಪ್ಟರ್ ಪತನಕ್ಕೆ ಸಂಬಂಧಿಸಿದಂತೆ ಕಠಿಣ ಕ್ರಮ ತೆಗೆದುಕೊಳ್ಳುವ ಬಗ್ಗೆ ಸೂಚನೆ

• ಉದಯವಾಹಿನಿ, ಡೆಹ್ರಾಡೂನ್

ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ವಿಮಾನದ ಭೀಕರ ಅಪಘಾತ ಇನ್ನೂ ದೇಶದ ಜನರ ಕಣ್ಣಂಚಿನಿಂದ ಸರಿದಿಲ್ಲ. ಅದರ ಬೆನ್ನಲ್ಲೇ ದೇಶದಲ್ಲಿ ಮತ್ತೊಂದು ದುರಂತ ಸಂಭವಿಸಿದೆ.
ಉತ್ತರಾಖಂಡದ ಕೇದಾರನಾಥ ಧಾಮದಲ್ಲಿ ಮತ್ತೊಮ್ಮೆ ದೊಡ್ಡ ಅಪಘಾತ ಸಂಭವಿಸಿದೆ. ಕೇದಾರನಾಥ ಮಾರ್ಗದಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದ್ದು, ಈ ಹೆಲಿಕಾಪ್ಟರ್‌ನಲ್ಲಿ ಒಟ್ಟು 7 ಜನರಿದ್ದರು ಎಂದು ತಿಳಿದು ಬಂದಿದ್ದು, ಅದರಲ್ಲಿದ್ದ ಏಳು ಮಂದಿ ಕೂಡ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗ್ತಿದೆ. ತಕ್ಷಣಕ್ಕೆ ಬಂದಿರುವ ಮಾಹಿತಿಯ ಪ್ರಕಾರ, ಆರ್ಯನ್ ಕಂಪನಿಯ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದ್ದು, ಗೌರಿಕುಂಡ್ ಮತ್ತು ತ್ರಿಜುಗಿನಾರಾಯಣ ನಡುವೆ ಈ ಅಪಘಾತ ಸಂಭವಿಸಿದೆ.
ಪ್ರಾಥಮಿಕ ಮಾಹಿತಿಗಳ ಪ್ರಕಾರ ಕೆಟ್ಟ ಹವಾಮಾನವೇ ಈ ಹೆಲಿಕಾಪ್ಟರ್ ಅಪಘಾತಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಮಾಹಿತಿ ನೀಡಿರುವ ಉತ್ತರಾಖಂಡದ ಎಡಿಜಿ ಕಾನೂನು ಮತ್ತು ಸುವ್ಯವಸ್ಥೆ, ಡಾ ವಿ ಮುರುಗೇಶನ್ ಅವರು ಡೆಹ್ರಾಡೂನ್‌ನಿಂದ ಕೇದಾರನಾಥಕ್ಕೆ ತೆರಳುತ್ತಿದ್ದ ಹೆಲಿಕಾಪ್ಟರ್ ಗೌರಿಕುಂಡ್‌ನಲ್ಲಿ ನಾಪತ್ತೆಯಾಗಿದೆ. ತ್ರಿಜುಗಿನಾರಾಯಣ ಮತ್ತು ಗೌರಿಕುಂಡ್ ನಡುವೆ ಹೆಲಿಕಾಪ್ಟರ್ ನಾಪತ್ತೆಯಾಗಿದೆ ಎಂದು ಹೇಳಿದ್ದಾರೆ. ಉತ್ತರಾಖಂಡದ ಕೇದಾರನಾಥ ಮಾರ್ಗದಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದ ಮಾಹಿತಿ ಸಿಕ್ಕ ಬೆನ್ನಲ್ಲೇ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳನ್ನು ಸ್ಥಳಕ್ಕೆ ರವಾನಿಸಲಾಗಿದೆ.
ಇದಕ್ಕೂ ಮೊದಲು ಮೇ 8 ರಂದು ಗಂಗೋತ್ರಿ ಧಾಮ್‌ಗೆ ಹೋಗುತ್ತಿದ್ದ ಹೆಲಿಕಾಪ್ಟರ್ ಉತ್ತರಕಾಶಿ ಜಿಲ್ಲೆಯಲ್ಲಿ ಪತನಗೊಂಡಿತ್ತು. ಆ ದುರಂತದಲ್ಲಿ ಆರು ಜನರು ಸಾವನ್ನಪ್ಪಿದ್ದರು. ಉತ್ತರಾಖಂಡದಲ್ಲಿ ಪದೇ ಪದೇ ಹೆಲಿಕಾಪ್ಟರ್ ಅಪಘಾತಗಳು ಸಂಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸಿಎಂ ಧಾಮಿ ಕಠಿಣ ಕ್ರಮ ಕೈಗೊಂಡಿದ್ದಾರೆ. ಹೆಲಿಕಾಪ್ಟರ್ ಸೇವೆಗಳಿಗೆ ಕಟ್ಟುನಿಟ್ಟಾದ ತಯಾರಿಸಲು ಆದೇಶಿಸಿದ್ದಾರೆ. ಪ್ರತಿ ವಿಮಾನದ ಮೊದಲು ವಿಮಾನದ ತಾಂತ್ರಿಕ ತಪಾಸಣೆ ಕಡ್ಡಾಯವಾಗಿ ಮಾಡಬೇಕು. ನಿಖರವಾದ ಹವಾಮಾನ ಮಾಹಿತಿಯನ್ನು ಪಡೆಯಬೇಕು ಎಂದು ಅವರು ಹೇಳಿದ್ದಾರೆ.
ಉತ್ತರಾಖಂಡದ ಗೌರಿಕುಂಡ್ ಬಳಿ ಪತನಗೊಂಡ ಹೆಲಿಕಾಪ್ಟರ್‌ನ ಪೈಲಟ್ ಕ್ಯಾಪ್ಟನ್ ರಾಜ್‌ವೀರ್ ಸಿಂಗ್ ಚೌಹಾಣ್ (37) ಭಾರತೀಯ ವಾಯು ಸೇನೆಯಲ್ಲಿ 15ಕ್ಕೂ ಹೆಚ್ಚು ವರ್ಷಗಳ ಕಾಲ ಸೇವೆಸಲ್ಲಿಸಿದ್ದರು. ಅವರಿಗೆ ವಿವಿಧ ಭೂ ಪ್ರದೇಶಗಳ ಮೇಲೆ ಹೆಲಿಕಾಪ್ಟರ್ ಹಾರಾಟ ನಡೆಸಿದ್ದ ಅನುಭವ ಇತ್ತು ಎಂದು ತಿಳಿದು ಬಂದಿದೆ.



■ ಉತ್ತರಾಖಂಡದ ಕೇದಾರ್‌ನಾಥ್ ಬಳಿ ಹೆಲಿಕಾಪ್ಟರ್ ಪತನಗೊಂಡು ಕನಿಷ್ಠ ಏಳು ಜನರು ಮೃತಪಟ್ಟಿದ್ದಾರೆ.
■ ಕೇದಾರನಾಥದಲ್ಲಿ ಹೆಲಿಕಾಪ್ಟರ್ ಪತನ 7 ಮಂದಿ ಸಾವು
■ ಉತ್ತರಾಖಂಡದಲ್ಲಿ ಹೆಲಿಕಾಪ್ಟರ್ ದುರಂತಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಸರ್ಕಾರವು ಈ ಕುರಿತು ತಜ್ಞರ ಸಮಿತಿಯನ್ನು ರಚಿಸಲು ನಿರ್ಧರಿಸಿದೆ.



### ಹೆಲಿಕಾಪ್ಟರ್ ಸರಣಿ ಅವಘಡಗಳು

ಒಂದೂವರೆ ತಿಂಗಳ ಅಂತರದಲ್ಲೇ ಐದನೇ ಬಾರಿಗೆ ಹೆಲಿಕಾಪ್ಟರ್ ಅವಘಡ ನಡೆದಿದೆ. ಜೂನ್ 7ರಂದು ಕೇದಾರನಾಥಕ್ಕೆ ಹಾರಾಟ ಶುರು ಮಾಡಿದ್ದ ಹೆಲಿಕಾಪ್ಟರ್ ಟೇಕಾಫ್ ವೇಳೆ ಎದುರಾದ ತಾಂತ್ರಿಕ ಕಾರಣಗಳಿಂದಾಗಿ ಉತ್ತರಾಖಂಡದ ಹೈವೇನಲ್ಲಿ ಲ್ಯಾಂಡ್ ಮಾಡಿದ ಘಟನೆ ನಡೆದಿತ್ತು. ಕಟ್ಟಡಗಳಿಗೆ ತೀರಾ ಸಮೀಪದಲ್ಲಿ ಇಳಿದ ಹೆಲಿಕಾಪ್ಟರ್‌ನ ಬಾಲ ರೋಟರ್ ಕಾರಿಗೆ ಅಪ್ಪಳಿಸಿದ ಅವಘಡದಲ್ಲಿ ಪೈಲೆಟ್ ಗಾಯಗೊಂಡಿದ್ದರು, ಐದು ಮಂದಿ ಯಾತ್ರಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದರು. ಇದೀಗ ಅಹಮದಾಬಾದ್ ಭಾರೀ ವಿಮಾನ ದುರಂತ ಘಟಿಸಿದ ಕೆಲವೇ ದಿನದಲ್ಲಿ ಹೆಲಿಕಾಪ್ಟರ್ ಪತನ ಆಗಿದೆ.

**ಈ ದಿನದ ದರ**

| | | | |
|---|---|---|---|
| ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,168/Gram24ct ₹9,320/Gram22ct | ಬೆಳ್ಳಿ: ₹110 /Gram |

## ಶ್ರೀಮದ್ಭಾಗವತ ಸಪ್ತಮ ಸ್ಕಂದ (ಪ್ರವಚನ)

• ಉದಯವಾಹಿನಿ, ಬೆಂಗಳೂರು



ಶ್ರೀ ರಾಘವೇಂದ್ರ ಸೇವಾ ಸಮಿತಿಯವತಿಯಿಂದ ಜೂನ್ 16 ರಿಂದ 29ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಶ್ರೀ ಹರೀಶಾಚಾರ್ಯ ಆರಣಿ ಇವರಿಂದ ಶ್ರೀಮದ್ಭಾಗವತ ಸಪ್ತಮ ಸ್ಕಂದ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಬೆಂಗಳೂರು-560003

## ಭೈರಪ್ಪರ ಬದುಕು, ಸಾಹಿತ್ಯ ಒಂದೇ

• ಉದಯವಾಹಿನಿ, ಬೆಂಗಳೂರು

ಸಾಹಿತಿ ಎಸ್. ಎಲ್. ಭೈರಪ್ಪ ಅವರ ಜೀವನ, ಸಾಹಿತ್ಯಕ್ಕೆ ಎರಡು ವಿಶ್ಲೇಷಣೆ ಅಗತ್ಯವಿಲ್ಲ. ಎರಡೂ ಒಂದೇ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು. ಸಾಹಿತಿ ಎಸ್.ಎಲ್ ಭೈರಪ್ಪ ಪ್ರತಿಷ್ಠಾನ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಭೈರಪ್ಪನವರ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ನಾನು ಪರ್ವ ಕಾದಂಬರಿಯನ್ನು ಕಾಲೇಜು ಜೀವನದಲ್ಲಿಯೇ ಓದಲು ಪ್ರಯತ್ನ ಮಾಡಿದ್ದೆ. ಅಷ್ಟು ಸುಲಭವಾಗಿ ಅರ್ಥವಾಗಿರಲಿಲ್ಲ. ಕೆಲವು ವರ್ಷಗಳ ನಂತರ ಮತ್ತೆ ಓದಿದೆ. ಪ್ರತಿ ಸಾರಿ ಓದಿದಾಗ ಹೊಸ ಆಯಾಮ ಸಿಗುತ್ತದೆ. ನನಗೆ ಕಾಡಿರುವ 2 ಪುಸ್ತಕಗಳು. ಒಂದು ಭೈರಪ್ಪನವರ ಪರ್ವ, ಇನ್ನೊಂದು ಸ್ವಾಮಿ ವಿವೇಕಾನಂದರ ಲೈಫ್ ಅಫ್ಟರ್ ಡೆತ್ ಎಂದು ಹೇಳಿದರು. ನಮಗೆ ಸಮಾಜ ಏನು ಕೊಟ್ಟಿದೆಯೋ ಅದನ್ನು ನಾವು ಸಮಾಜಕ್ಕೆ ವಾಪಸ್ ಕೊಟ್ಟಾಗ ನಮ್ಮ ಬದುಕಿನ ಬ್ಯಾಲೆನ್ಸ್ ಶೀಟ್ ಪೂರ್ತಿಯಾಗುತ್ತದೆ. ಭೈರಪ್ಪನವರು ಸಮಾಜ ಕೊಟ್ಟಿರುವುದನ್ನು ಸಮಾಜಕ್ಕೆ ವಾಪಸ್ ಕೊಟ್ಟಿದ್ದಾರೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು. ಕಾರ್ಯಕ್ರಮದಲ್ಲಿ ಸಾಹಿತಿ ಎಸ್.ಎಲ್. ಭೈರಪ್ಪ, ಶತಾವಧಾನಿ ಆರ್. ಗಣೇಶ್, ವಿಶ್ವವಾಣಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್, ಸಹನಾ ವಿಜಯಕುಮಾರ್, ಅರುಣ್ ಹಾಜರಿದ್ದರು.

## ವಿದೇಶಿಯರ ವಿವರ ಕಲೆ ಹಾಕಿ: ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

• ಉದಯವಾಹಿನಿ, ಬೆಂಗಳೂರು

ವಿದೇಶಿಯರನ್ನು ಹೊಂದಿರುವ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು, ಅಂತಹವರ ಬಗ್ಗೆ, ವಿದೇಶಿಯರ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಸೂಕ್ತ ಮಾಹಿತಿ ಒದಗಿಸುವನಿಟ್ಟಿನಲ್ಲಿ ಸುತ್ತೋಲೆಯೊಂದನ್ನು ಹೊರಡಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.ವೀಸಾ ವಿಸ್ತರಣೆ ಕೋರಿ ಸಿರಿಯಾದ ಪ್ರಜೆ ಮೌಝುಲ್ ಖ್ಯಾಮ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಈ ಸಂಬಂಧ ಎರಡು ವಾರಗಳಲ್ಲಿ ಸುತ್ತೋಲೆ ಹೊರಡಿಸಿ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ತಾಕೀತು ಮಾಡಿದೆ. 'ಇತ್ತೀಚಿನ ದಿನಗಳಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸದ ಹೆಸರಿನಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಚಿಕಿತ್ಸೆ ಪಡೆಯುವುದು ಮತ್ತು ಕಂಪನಿಗಳು ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಉದ್ಯೋಗದ ಹೆಸರಿನಲ್ಲಿ ದೊಡ್ಡ ಸಂಖ್ಯೆಯ ವಿದೇಶಿಯರು ಭಾರತಕ್ಕೆ ಆಗಮಿಸುತ್ತಿದ್ದಾರೆ. ಇವರಲ್ಲಿ ಅನೇಕರು ತಮ್ಮ ವೀಸಾ ಅವಧಿ ಮೀರಿದ್ದರೂ ತಂತಮ್ಮ ದೇಶಗಳಿಗೆ ಮರಳುತ್ತಿಲ್ಲ' ಎಂಬ ಕೇಂದ್ರ ಸರ್ಕಾರದ ಆತಂಕವನ್ನು ನ್ಯಾಯಪೀಠ ಪರಿಗಣಿಸಿ ಈ ಆದೇಶ ಹೊರಡಿಸಿದೆ. ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರು, 'ರಾಜ್ಯದಲ್ಲಿ ವೀಸಾ ಅವಧಿ ಮುಗಿದರೂ ಅನಧಿಕೃತವಾಗಿ ನೆಲೆಯೂರಿರುವ ವಿದೇಶಿಯರು ಅನಗತ್ಯ ಮತ್ತು ಅನಪೇಕ್ಷಿತ ನೆಪಗಳನ್ನೊಡ್ಡಿ ವೀಸಾ ಅವಧಿ ವಿಸ್ತರಣೆ ಕೋರುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಅರ್ಜಿದಾರರ ವೀಸಾ ಅವಧಿ 2015ರಲ್ಲೇ ಮುಗಿದಿರುವುದು ಇದಕ್ಕೆ ಜ್ವಲಂತ ನಿದರ್ಶನ. ಇಂತಹ ಪ್ರಕರಣಗಳಿಂದ ಹಲವು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

## ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೇವೆಗೆ ಆಧಾರ್ ಕಡ್ಡಾಯ...!

• ಉದಯವಾಹಿನಿ, ಬೆಂಗಳೂರು

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆ ಪಡೆಲು ಆಧಾರ್ ದೃಢೀಕರಣವನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪ್ರಧಾನಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮ ಯೋಜನೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಇದರಡಿ ಯಾವುದೇ ಡಿಬಿಟಿ ಹಣ ವರ್ಗಾವಣೆಗೆ ಆಧಾರ್ ಸಂಖ್ಯೆ ಅಗತ್ಯವಿರುವ ಹಿನ್ನೆಲೆಯಲ್ಲಿ ಡಯಾಲಿಸಿಸ್ ಸೇವೆಯ ಪ್ರಯೋಜನ ಪಡೆಯಲು ಬಯಸುವವರು ಆಧಾರ್ ದೃಢೀಕರಣಕ್ಕೆ ಒಳಗಾಗಬೇಕು ಎಂದು ತಿಳಿಸಿದೆ. ಆದಾಗ್ಯೂ, ಆಧಾರ್ ಇಲ್ಲದ ಕಾರಣ ಯಾವುದೇ ವ್ಯಕ್ತಿ, ವಯಸ್ಕ ಅಥವಾ ಮಗುವಿಗೆ ಚಿಕಿತ್ಸೆಯನ್ನು ನಿರಾಕರಿಸುವಂತಿಲ್ಲ ಎಂದೂ ಸರ್ಕಾರ ಸ್ಪಷ್ಟಪಡಿಸಿದೆ. ಅಂತಹ ಸಂದರ್ಭಗಳಲ್ಲಿ ಇತರ ಗುರುತಿನ ದಾಖಲೆಗಳನ್ನು ಸ್ವೀಕರಿಸಲಾಗುತ್ತದೆ ಎಂದು ಹೇಳಿದೆ. ಇತರೆ ದಾಖಲೆಗಳ ಆಧಾರದ ಮೇಲೆ ಸೌಲಭ್ಯ ನೀಡಿದ ಸಂದರ್ಭದಲ್ಲಿ ಅದನ್ನು ದಾಖಲಿಸಲು ಪ್ರತ್ಯೇಕ ರಿಜಿಸ್ಟಾರ್ ನಿರ್ವಹಿಸಬೇಕು. ಅನುಷ್ಠಾನ ಏಜೆನ್ಸಿಯ ಮೂಲಕ ನಿಯಮಿತವಾಗಿ ಪರಿಶೀಲಿಸಿ ಲೆಕ್ಕಪರಿಶೋಧನೆ ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಯಾವುದೇ ವ್ಯಕ್ತಿ ಆಧಾರ್ ಹೊಂದಿಲ್ಲದ್ದರೆ ಅಥವಾ ಈವರೆಗೆ ಆಧಾರ್‌ಗೆ ನೋಂದಣಿ ಆಗದಿದ್ದು, ಆಧಾರ್ ಕಾಯ್ದೆಯ ಸೆಕ್ಷನ್ 3ರ ಪ್ರಕಾರ ಆಧಾರ್ ಪಡೆಯಲು ಅರ್ಹರಾಗಿದ್ದರೆ ಅವರು ಆಧಾರ್‌ಗೆ ಅರ್ಜಿ ಸಲ್ಲಿಸಬೇಕು. ಒಂದು ವೇಳೆ ಫಲಾನುಭವಿಗಳು ಮಕ್ಕಳಾಗಿದ್ದರೆ ತನ್ನ ತಂದೆ, ತಾಯಿ ಅಥವಾ ಪೋಷಕರ ಒಪ್ಪಿಗೆಗೆ ಒಳಪಟ್ಟು ಆಧಾರ್ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ಒಂದೊಮ್ಮೆ ಅವರ ಸಮೀಪದಲ್ಲಿ ಆಧಾರ್ ನೋಂದಣಿ ಕೇಂದ್ರ ಇಲ್ಲದಿದ್ದರೆ ಇಲಾಖೆಯು ಯೋಜನೆ ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಯ ಮೂಲಕ ಆಧಾರ್ ನೋಂದಣಿ ಕೇಂದ್ರದ ಸೌಲಭ್ಯವನ್ನು ಅನುಕೂಲಕರ ಸ್ಥಳಗಳಲ್ಲಿ ನೀಡಬೇಕು. ಆಧಾರ್ ಸಿಗುವವರೆಗೆ 5 ವರ್ಷದೊಳಗಿನ ಮಕ್ಕಳು ಆಧಾರ್ ದಾಖಲಾತಿ ಗುರುತಿನ ಚೀಟಿ ಅಥವಾ ಬಯೋಮೆಟ್ರಿಕ್ ನವೀಕರಣ ಗುರುತಿನ ಚೀಟಿ ನೀಡುವ ಷರತ್ತಿನೊಂದಿಗೆ ಜನನ ಪ್ರಮಾಣ ಪತ್ರ ಅಥವಾ ಸಕ್ಷಮ ಪ್ರಾಧಿಕಾರದಿಂದ ವಿತರಿಸಿರುವ ಜನನ ದಾಖಲೆ ಅಥವಾ ಶಾಲೆಯ ಮುಖ್ಯಸ್ಥರಿಂದ ಸಹಿ ಮಾಡಿರುವ ಶಾಲಾ ಗುರುತಿನ ಚೀಟಿ ನೀಡಬಹುದು.

## ಜಾತಿ ಜನಗಣತಿ ನಡೆಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ: ಕೇಂದ್ರ ಸಚಿವ ರಾಮದಾಸ್ ಅಠವಳೆ

• ಉದಯವಾಹಿನಿ, ಬೆಂಗಳೂರು

ಜಾತಿ ಜನಗಣತಿ ನಡೆಸುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೇ ಹೊರತು ರಾಜ್ಯ ಸರ್ಕಾರಕ್ಕಲ್ಲ ಎಂದು ಕೇಂದ್ರ ಸಚಿವ ರಾಮದಾಸ್ ಅಠವಳೆ ಅವರು ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಜನಗಣತಿಯನ್ನು ನಡೆಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದ್ದು, ಕೇಂದ್ರ ಸರ್ಕಾರ ಅದನ್ನು ಮಾಡುತ್ತಿದೆ. ಹೀಗಾಗಿ, ಕರ್ನಾಟಕ ಸರ್ಕಾರ ಜಾತಿಗಣತಿ ನಡೆಸುವ ಅಗತ್ಯವಿಲ್ಲ. ಬದಲಿಗೆ ಕೇಂದ್ರ ಸರ್ಕಾರಕ್ಕೆ ಸಹಕಾರ ನೀಡಲಿ ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರಕ್ಕೆ ಜಾತಿ ಜನಗಣತಿ ನಡೆಸುವ ಅಧಿಕಾರವಿಲ್ಲ. ಅದನ್ನು ನಡೆಸುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೆ ಮಾತ್ರ. ಆದರೆ ಕರ್ನಾಟಕದಂತಹ ಕೆಲವು ರಾಜ್ಯಗಳಲ್ಲಿ ಜಾತಿ ಜನಗಣತಿ ನಡೆಸಲು ಪ್ರಯತ್ನಗಳು ನಡೆಯುತ್ತಿವೆ.



ಉದಯವಾಹಿನಿ ಚಿತ್ರ

ಕೇಂದ್ರವು ಜನಗಣತಿ ನಡೆಸಲು ಯೋಜಿಸುತ್ತಿರುವುದರಿಂದ ರಾಜ್ಯ ಸರ್ಕಾರದಿಂದ ಪ್ರತ್ಯೇಕ ಜನಗಣತಿ ಅಗತ್ಯವಿಲ್ಲ ಎಂದು ಹೇಳಿದರು. ಇದೇ ವೇಳೆ ವಿಪಕ್ಷಗಳ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ಜಾತಿಗಣತಿಗೆ ಮುಂದಾಗಿದೆ ಎಂಬ ವರದಿಗಳನ್ನೂ ಅವರು ನಿರಾಕರಿಸಿದ್ದಾರೆ. ಜಾತಿಗಣತಿ ನಡೆಸುವ ನಿರ್ಧಾರ ಪ್ರಧಾನಿ ಮೋದಿಯವರ ಸ್ವಂತ ನಿರ್ಧಾರವಾಗಿದೆ. ರಾಹುಲ್ ಗಾಂಧಿಯವರ ಒತ್ತಡಕ್ಕೆ ಮಣಿದು ತೆಗೆದುಕೊಂಡ ನಿರ್ಧಾರವಲ್ಲ ಎಂದು ಸ್ಪಷ್ಟಪಡಿಸಿದರು.

ಬಳಿಕ ಬಿಜೆಪಿ ಮತ್ತು ಜೆಡಿಎಸ್ ತಮ್ಮ ಪಕ್ಷವಾದ ಆರ್‌ಪಿಐ ಅನ್ನು ಮೈತ್ರಿಕೂಟದ ಭಾಗವಾಗಿ ಸೇರಿಕೊಳ್ಳುವಂತೆ ಹಾಗೂ ಕಾಂಗ್ರೆಸ್ ದುರಾಡಳಿತದ ವಿರುದ್ಧ ಹೋರಾಡುವಂತ ಮನವಿ ಮಾಡಿದರು, ಕಾಂಗ್ರೆಸ್ ಪಕ್ಷ ಕರ್ನಾಟಕದ ಮುಖ್ಯಮಂತ್ರಿಯಾಗಿ ಮಲ್ಲಿಕಾರ್ಜುನ ಖರ್ಗೆಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕಿತ್ತು. ಖರ್ಗೆ ಒಬ್ಬ ಬಲಿಷ್ಠ ದಲಿತ ನಾಯಕ. ಅವರು ನನ್ನ ಉತ್ತಮ ಸ್ನೇಹಿತ ಕೂಡ ಹೌದು. ನಾವಿಬ್ಬರೂ ಸಂಸತ್ತಿನಲ್ಲಿ ಪರಸ್ಪರ ಭೇಟಿಯಾಗುತ್ತಲೇ ಇರುತ್ತೇವೆಂದು ಹೇಳಿದರು.

ಇದೇ ವೇಳೆ ಕಲಬುರಗಿಯಲ್ಲಿ ಬುದ್ಧವಿಹಾರ ಸ್ಥಾಪಿಸಿದ್ದಕ್ಕೆ ಖರ್ಗೆಯವರನ್ನು ಶ್ಲಾಘಿಸಿದರು. ಇದು ನಾಗಪುರದ ದೀಕ್ಷಾ ಭೂಮಿಯಷ್ಟೇ ಮಹತ್ವದ್ದಾಗಿದೆ ಎಂದು ಹೇಳಿದರು. ನಾನು ಈ ಹಿಂದೆ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡಿದ್ದೆ, ಈಗ ಎರಡು ಅವಧಿಗೆ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದೇನೆ, ರಾಜ್ಯಸಭಾ ಸದಸ್ಯನಾಗಿದ್ದೇನೆ. ನಾವೆಲ್ಲರೂ ಭಾರತೀಯರು ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ ಉತ್ತಮ ಸೌಹಾರ್ದತೆಯಿಂದ ಇರಬೇಕು ಎಂದು ತಿಳಿಸಿದರು. ರಾಜ್ಯ ಆರ್‌ಪಿಐ ಅಧ್ಯಕ್ಷ ಎಂ. ವೆಂಕಟಸ್ವಾಮಿ ಅವರು ಮಾತನಾಡಿ, ಒಂದು ವೇಳೆ ಸಿಎಂ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದರೆ ಮುಂದಿನ ಮುಖ್ಯಮಂತ್ರಿಯಾಗಿ ದಲಿತ ವ್ಯಕ್ತಿಯ ಹೆಸರನ್ನು ಪ್ರಸ್ತಾಪಿಸುತ್ತಾರೆಂಬ ಭರವಸೆಯಿದೆ ಎಂದು ಹೇಳಿದರು.

# ಕಸ ಟೆಂಡರ್‌ನಲ್ಲಿ ನಿಯಮ ಉಲ್ಲಂಘನೆ

### ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ

• ಉದಯವಾಹಿನಿ, ಬೆಂಗಳೂರು

ತ್ಯಾಜ್ಯ ವಿಲೇವಾರಿಗೆ 33 ಪ್ಯಾಕೇಜ್‌ನಲ್ಲಿ ಕರೆಯಲಾಗಿರುವ ಟೆಂಡರ್‌ನಲ್ಲಿ. ಪ್ರೀ-ಬಿಡ್ ಪ್ರಕ್ರಿಯೆ ಮುಗಿದ ಮೇಲೆ ನಿಯಮ ಮೀರಿ ಹೊಸ ಷರತ್ತು, ವಿನಾಯಿತಿಗಳನ್ನು ಸೇರಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, 2ನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು 33 ವಿಭಾಗವಾರು ಟೆಂಡರ್ ಅನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) ಮೇ 28ರಂದು ಆಹ್ವಾನಿಸಲಾಗಿತ್ತು. ಜೂನ್ 9ರಂದು ನಡೆದ ಪ್ರೀ-ಬಿಡ್ ಸಭೆಯಲ್ಲಿ ಚರ್ಚಿಸಲಾಗದಂತಹ ವಿನಾಯಿತಿ. ಷರತ್ತುಗಳನ್ನು ವಿಧಿಸಿ ಹೊಸ ಅನುಬಂಧವನ್ನು ಇಂಜಿನಿಯರ್‌ಗಳು ಸೇರಿಸಿದ್ದಾರೆ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ.

ತ್ಯಾಜ್ಯ ವಿಲೇವಾರಿ ಟೆಂಡರ್ ಪಡೆಯಲು ಐದು ವರ್ಷಗಳ ಸೇವೆಯನ್ನು 2019-20ನೇ ಆರ್ಥಿಕ ಸಾಲಿನಿಂದ 2023-24ನೇ ಸಾಲಿನವರೆಗೆ ಪರಿಗಣಿಸಲಾಗುತ್ತದೆ ಎಂದು ನಮೂದಿಸಲಾಗಿತ್ತು. ಇದನ್ನು ಮಾರ್ಪಾಟು ಮಾಡಿ, 2019-20ನೇ ಆರ್ಥಿಕ ಸಾಲನ್ನು ಬಿಟ್ಟು 2024-25ನೇ ಸಾಲನ್ನು ಸೇರಿಸಲಾಗಿದೆ. ಕೋವಿಡ್‌ನಿಂದ ಲಾಕ್‌ಡೌನ್ ಆಗಿ 2019-20ನೇ ಸಾಲಿನಲ್ಲಿ ಹೆಚ್ಚು ಕಾಮಗಾರಿ ನಡೆದಿರಲಿಲ್ಲ. ಆರ್ಥಿಕ ವಹಿವಾಟು ಕಡಿಮೆಯಾಗಿತ್ತು. ಆದರೂ ನಿರ್ವಹಣೆ ಕಾರ್ಯವನ್ನು ಗುತ್ತಿಗೆದಾರರು ಕಷ್ಟಪಟ್ಟು ನಿರ್ವಹಿಸಿದ್ದರು. ಈ ಗುತ್ತಿಗೆದಾರರನ್ನು ಈಗ ಪರಿಗಣಿಸಲಾಗುತ್ತಿಲ್ಲ.

ಹೊಸದಾಗಿ ಗುತ್ತಿಗೆ ನೋಂದಣಿಯನ್ನು ಪಡೆದಿರುವವರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದಲೇ ಬಿಎಸ್‌ಡಬ್ಲ್ಯುಎಂಎಲ್ ಎಂಜಿನಿಯರ್‌ಗಳನ್ನು 2024-25ನೇ ಆರ್ಥಿಕ ಸಾಲಿಗೆ ಸೇರಿಸಿದ್ದಾರೆ. ಆರ್ಥಿಕ ವಹಿವಾಟನ್ನು ಈ ಸಾಲಿನಲ್ಲಿ ಪರಿಗಣಿಸುವುದಿಲ್ಲ ಎಂದು ಹೇಳಲಾಗಿದೆ. ಆದರೆ ಸೇವೆಯನ್ನು ಪರಿಗಣಿಸುತ್ತೇವೆ ಎಂದು ಹೊಸ ಅನುಬಂಧದಲ್ಲಿ ತಿಳಿಸಿರುವುದು ಕಾನೂನು, ನಿಯಮ



ಉದಯವಾಹಿನಿ ಚಿತ್ರ

ಉಲ್ಲಂಘನೆ ಎಂದು ಗುತ್ತಿಗೆದಾರರು ದೂರಿದ್ದಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ (ಕೆಟಿಪಿಪಿ) ಕಾಯ್ದೆಯಂತೆ 33 ಪ್ಯಾಕೇಜ್‌ಗಳ ಟೆಂಡರ್ ಆಹ್ವಾನಿಸಲಾಗಿದೆ.

ಕೆಪಿಪಿ ಪೋರ್ಟಲ್‌ನಲ್ಲೇ ಪ್ಯಾಕೇಜ್‌ನ ಪೂರ್ಣ ಮೊತ್ತದ ಆರ್ಥಿಕ ಬಿಡ್ ಸಲ್ಲಿಸಬೇಕು. ಆದರೆ, ಪ್ರತಿ ವಾಹನದ ತಿಂಗಳ ಬಳಕೆ ಶುಲ್ಕವನ್ನು ಟೆಂಡರ್‌ನ ಅಂತಿಮ ದಿನದ ಮೂರು ದಿನ ಮುನ್ನ ಬಿಎಸ್‌ಡಬ್ಲ್ಯುಎಂಎಲ್ ಎಂಜಿನಿಯರ್‌ಗಳಿಗೆ ಮುಚ್ಚಿದ ಲಕೋಟೆಯಲ್ಲಿ ನೀಡಬೇಕೆಂಬ ಹೊಸ ನಿಯಮ ಸೇರಿಸಿರುವುದು ಕೆಟಿಪಿಪಿ ಕಾಯ್ದೆಯ ಉಲ್ಲಂಘನೆ ಎಂದು ಆರೋಪಿಸಲಾಗಿದೆ. ಏಳು ವರ್ಷದ ಟೆಂಡರ್ ಗುತ್ತಿಗೆ ಪಡೆಯುವ ಪಾಲುದಾರಿಕೆಯ ಗುತ್ತಿಗೆದಾರರಲ್ಲಿ ಉಂಟಾಗುವ ಸಮಸ್ಯೆಗೆ ಬಿಎಸ್‌ಡಬ್ಲ್ಯುಎಂಎಲ್ ಎಂಜಿನಿಯರ್‌ಗಳನ್ನು ನೀಡುವ ತೀರ್ಪೇ ಅಂತಿಮ ಎಂದು ಹೇಳಿದ್ದಾರೆ. ಆದರೆ, ಪಾಲುದಾರರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳದೆ ಎಂಜಿನಿಯರ್‌ಗಳಿಗೆ ಅಧಿಕಾರಿ ನೀಡಿದರೆ, ಪಕ್ಷಪಾತ ಉಂಟಾಗುತ್ತದೆ. ಯಾರನ್ನು ಬೇಕಾದರೂ ಕಪ್ಪು ಪಟ್ಟಿಗೆ ಸೇರಿಸಬಹುದಾಗಿದೆ' ಎಂದು ಗುತ್ತಿಗೆದಾರರು ಆತಂಕ ವ್ಯಕ್ತಪಡಿಸಿದರು.

**ಗೊಂದಲ ಸೃಷ್ಟಿ:** ಬಿಎಸ್‌ಡಬ್ಲ್ಯುಎಂಎಲ್ ತ್ಯಾಜ್ಯ ನಿರ್ವಹಣೆಗೆ 2022ರ ಪ್ಟೆಂಬರ್‌ನಲ್ಲಿ 89 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿತ್ತು. ತಾಂತ್ರಿಕ ಬಿಡ್ ಅರ್ಹತೆ ಸಮಸ್ಯೆಯಿಂದ ಟೆಂಡರ್ ರದ್ದಾಗಿತ್ತು. 2023ರ ಜನವರಿಯಲ್ಲಿ ಎರಡನೇ ಬಾರಿಗೆ ಟೆಂಡರ್ ಆಹ್ವಾನಿಸಿದ್ದಾಗ, ಅರ್ಹತಾ ಸುತ್ತಿನಲ್ಲಿ ಕೆಲವರನ್ನು ಅನರ್ಹಗೊಳಿಸಿದ್ದರಿಂದ ವಿಷಯ ಕೋರ್ಟ್ ಹಂತಕ್ಕೆ ತಲುಪಿತು.

ಹೊಸ ಟೆಂಡರ್ ಪ್ರಕ್ರಿಯೆ ನಡೆಸುವುದಾಗಿ, ನ್ಯಾಯಾಲಯಕ್ಕೆ ಸರ್ಕಾರ ಹೇಳಿತ್ತು. ಅದರಂತೆ, ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, 33 ಪ್ಯಾಕೇಜ್‌ಗೆ ಟೆಂಡರ್ ಆಹ್ವಾನಿಸಲಾಗಿದೆ. ಈಗ ಮತ್ತೊಮ್ಮೆ ಗೊಂದಲ ಸೃಷ್ಟಿಯಾಗಿದೆ.

**ಕಾನೂನು ಸಲಹೆ ಪಡೆಯಲಾಗಿದೆ ಲೋಕೇಶ್**

**ಆರ್ಥಿಕ ಸಾಮರ್ಥ್ಯವನ್ನು ಪರಿಶೀಲಿಸುವಾಗ ಹಿಂದಿನ ಆರ್ಥಿಕ ವರ್ಷ ಮುಗಿದು ಮೂರು ತಿಂಗಳಾಗಿರಬೇಕು ಎಂದು ನ್ಯಾಯಾಲಯ ಆದೇಶಿಸಿದೆ. ತ್ಯಾಜ್ಯ ಪ್ಯಾಕೇಜ್‌ನಲ್ಲಿ ನಾವು 2019-20ನೇ ಸಾಲಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಸೇವೆಯನ್ನು ಪರಿಗಣಿಸುವ ಬದಲು 2024-25ನೇ ಸಾಲನ್ನು ನಮ್ಮ ಕಾನೂನು ತಜ್ಞರಿಂದ ಅಭಿಪ್ರಾಯ ಪಡೆದುಕೊಂಡೇ ಸೇರಿಸಿದ್ದೇವೆ. ಘನತ್ಯಾಜ್ಯ ನಿರ್ವಹಣೆ ಕೆಲಸವನ್ನು ನಿರ್ವಹಿಸಿರುವ ಪ್ರಮಾಣದಲ್ಲೂ 2024-25ನೇ ಸಾಲನ್ನು ಸೇರಿಸಿದ್ದೇವೆ. ಇದರಿಂದ ನಿಯಮ ಉಲ್ಲಂಘನೆಯಾಗಿಲ್ಲ. ಸಚಿವರ ಆಪ್ತರು ಅಥವಾ ಯಾರೊಬ್ಬರಿಗೆ ಅನುಕೂಲ ಕಲ್ಪಿಸಲು ನಾವು ಹೀಗೆ ಮಾಡಿಲ್ಲ. 33 ಪ್ಯಾಕೇಜ್‌ಗೂ ಇದು ಅನ್ವಯವಾಗುತ್ತದೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಲೋಕೇಶ್ ತಿಳಿಸಿದರು.**

## ಅಕ್ಷಯ ವಿಪ್ರ ಮಹಾಸಭಾಗೆ ನೂತನ ಪಧಾಧಿಕಾರಿಗಳು

• ಉದಯವಾಹಿನಿ, ಬೆಂಗಳೂರು

ಅಧ್ಯಕ್ಷರಾಗಿ ಎನ್. ಕೆ. ರಾಮಾಚಂದ್ರ ರಾವ್, ಗೌರವಾಧ್ಯಕ್ಷರಾಗಿ ಡಾ, ಎನ್. ಕೀರ್ತಿರಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 2025-28ನೇ ಸಾಲಿಗೆ ನೆಡೆದ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಯಲ್ಲಿ 45ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದು, ಭಾನುವಾರ ಸಂಘದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡ ನೂತನ ಪಧಾಧಿಕಾರಿಗಳ ಆಯ್ಕೆಯನ್ನು ಅವಿರೋಧ ವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎನ್. ಕೆ. ರಾಮಾಚಂದ್ರ ರಾವ್, ಗೌರವಾಧ್ಯಕ್ಷರಾಗಿ ಡಾ, ಎನ್. ಕೀರ್ತಿರಾಜ್, ಉಪಾಧ್ಯಕ್ಷರಾಗಿ ಡಾ, ಕೆ. ರಘುನಾಥರಾವ್, ಡಾ, ಕಿರಣ್. ಎಸ್. ಮೂರ್ತಿ, ಕೆ. ಆನಂದರಾವ್, ಲಕ್ಷ್ಮೀಶ ಸತ್ಯವಾರ ಮತ್ತು ವಿ. ಶ್ರೀಪ್ರಕಾಶ್, ಪ್ರಧಾನ ಕಾರ್ಯದರ್ಶಿಯಾಗಿ ಕೆ. ರಾಘವೇಂದ್ರ ರಾವ್, ಕಾರ್ಯದರ್ಶಿಯಾಗಿ ಎನ್.ಎಸ್. ಸುಧೀಂದ್ರ ರಾವ್ ಜಂಟಿಕಾರ್ಯದರ್ಶಿಯಾಗಿ ಎನ್ ಪಿ. ಮಂಜುನಾಥ್, ಟಿ. ಎನ್ ಶಾಂತಕುಮಾರ್, ಎಲ್. ಜಗನಾಥ್, ಆರ್. ಶ್ರೀನಿವಾಸ, ಮಹೇಶ್ ಕುಮಾರ್ ಖಜಾಂಚಿಯಾಗಿ ಎನ್. ರಾಘವೇಂದ್ರ ರಾವ್, ಅಂತರೀಕಾ ಲೆಕ್ಕ ಪರಿಶೋಧಕರಾಗಿ ಎನ್. ಜೆ. ಮಣಿಕುಮಾರ್, ಕಾನೂನು ಸಲಹೆಗಾರರಾಗಿ ಎ. ವಿಜಯಕುಮಾರ್ ಭಟ್ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ರಾಧಾಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.









## ನಂಬಿಕೆ ದ್ರೋಹ ಮಾಡುವುದಿಲ್ಲ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆಂಗೇರಿ

ನನ್ನ ಅಭ್ಯರ್ಥಿ ಗೆಲುವಿಗಾಗಿ ಬಚ್ಚಲು ತೊಳೆಯಲೂ ಸಿದ್ದ. ಆದರೆ ವಂಚನೆ, ನಂಬಿಕೆ ದ್ರೋಹ ಮಾಡುವುದಿಲ್ಲ ಎಂದು ಶಾಸಕ ಎಸ್. ಟಿ. ಸೋಮಶೇಖರ್ ಹೇಳಿದರು. ಬಮುಲ್ ನೂತನ ನಿರ್ದೇಶಕರಾಗಿ ಆಯ್ಕೆಯಾದ ಕೆ.ಎಂ. ಕೃಷ್ಣಯ್ಯ (ಕಾವೇರಿ ಕೃಷ್ಣಪ್ಪ) ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಮುಲ್ ನಿರ್ದೇಶಕರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ನಾನು ನನ್ನ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುತ್ತಿದ್ದರೆ.

ಕೆಲ ವಿರೋಧಿಗಳು, ನನ್ನನ್ನು ಪಕ್ಷಾಂತರಿ ಶಾಸಕರು ಡ್ರೈವರ್ ಕೆಲಸ ಮಾಡುತ್ತಿದ್ದಾರೆ ಎಂದು ವ್ಯಂಗ್ಯ ಮಾಡಿದ್ದರು. ನಾನು ಮೋಸ ಮಾಡಲು ಹೋಗಿರಲಿಲ್ಲ. ಚುನಾವಣಾ ತಂತ್ರದ ಭಾಗವಾಗಿ ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದೆ ಎಂದರು. ಜನ ಬೆಂಬಲ ಇರುವವರೆಗೂ ಯಶವಂತಪುರ ಕ್ಷೇತ್ರದಲ್ಲಿ ನನ್ನನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲ' ಎಂದರು. ಮುಂಬರುವ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲೂ ನನ್ನ ಬೆಂಬಲಿಗರಿಗೆ ಸಹಕಾರ ನೀಡುತ್ತೇನೆ. ನನ್ನ ಚುನಾವಣೆಯ ಗೆಲುವಿಗೆ ಅವರು ಶ್ರಮಿಸಲಿದ್ದಾರೆ ಎಂದು ಹೇಳಿದರು.

ಕೆ.ಎಂ. ಕೃಷ್ಣಯ್ಯ ಮಾತನಾಡಿ, 'ಹಲವಾರು ಅಡೆ ತಡೆಗಳ ನಡುವೆಯೂ ಶಾಸಕರ ಬೆಂಬಲದಿಂದ ಗೆಲುವು ಸಾಧ್ಯವಾಯಿತು. ಕ್ಷೇತ್ರ ವ್ಯಾಪ್ತಿಯ ಎಲ್ಲಾ ಸಹಕಾರಿ ಸಂಘಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ' ಎಂದು ತಿಳಿಸಿದರು. ಮುಖಂಡರಾದ ಗಿರೀಶ್, ಕೇಶವ, ಮಂಜುನಾಥ್, ದೇವರಾಜು, ವೇಣುಗೋಪಾಲ್, ಬಿ.ಎಚ್.ಪ್ರಭು, ಚಿಕ್ಕರಾಜು, ಶಿವಮಾದಯ್ಯ, ಹಾಲು ಒಕ್ಕೂಟ ಸಹಕಾರ ಸಂಘದ ಹಲವಾರು ಅಧ್ಯಕ್ಷರು, ಸದಸ್ಯರು, ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಹಾಜರಾತಿಯಲ್ಲಿ ಮೋಹನ್, ಪ್ರಶ್ನೆಯಲ್ಲಿ ತೇಜಸ್ವಿಸೂರ್ಯ ನಂ.1

• ಉದಯವಾಹಿನಿ, ಬೆಂಗಳೂರು



ನಗರದಿಂದ ಆಯ್ಕೆಯಾಗಿರುವ ನಾಲ್ವರು ಸಂಸದರ ಒಂದು ವರ್ಷದ ಸಾಧನೆ, 32 ಶಾಸಕರ ಎರಡು ವರ್ಷದ ಸಾಧನೆ ಏನು ಎಂಬುದರ ಬಗ್ಗೆ ಸಿವಿಕ್ ಸಂಸ್ಥೆಯು ನಾಗರಿಕ ವರದಿಯನ್ನು ಬಿಡುಗಡೆ ಮಾಡಿದೆ.ಸಂಸತ್ ಅಧಿವೇಶನದಲ್ಲಿ ಭಾಗವಹಿಸುವುದರಲ್ಲಿ ಪಿ.ಸಿ. ಮೋಹನ್ ಮೊದಲ ಸ್ಥಾನದಲ್ಲಿದ್ದರೆ, ಪ್ರಶ್ನೆ ಕೇಳುವುದರಲ್ಲಿ ತೇಜಸ್ವಿ ಸೂರ್ಯ ಮೊದಲ ಸ್ಥಾನ ಪಡೆದಿದ್ದಾರೆ. ಸಂಸದರ ನಿಧಿ ಬಳಕೆಯಲ್ಲಿ ಡಾ. ಸಿ.ಎನ್. ಮಂಜುನಾಥ್ ಮುಂಚೂಣಿಯಲ್ಲಿದ್ದಾರೆ ಎಂದು ವರದಿ ತಿಳಿಸಿದೆ.

ಕಲಾಪದಲ್ಲಿ ಸಂಸದ ಪಿ.ಸಿ. ಮೋಹನ್ ಅವರು ಶೇ 98.51, ಸಿ.ಎನ್.ಮಂಜುನಾಥ್ ಶೇ.94ರಷ್ಟು ಭಾಗವಹಿಸಿದ್ದಾರೆ. ರಾಷ್ಟ್ರೀಯ ಸರಾಸರಿಯು ಶೇ 87 ಆಗಿದ್ದು, ತೇಜಸ್ವಿ ಸೂರ್ಯ ಶೇ 77.6ರಷ್ಟು ಹಾಜರಾತಿ ಹೊಂದಿದ್ದಾರೆ. ಸಚಿವೆ ಶೋಭಾ ಕರಂದ್ಲಾಜೆ ಅವರ ಹಾಜರಾತಿ ವಿವರಗಳನ್ನು ವರದಿಯಲ್ಲಿ ನೀಡಿಲ್ಲ. ತೇಜಸ್ವಿ ಸೂರ್ಯ 84 ಪ್ರಶ್ನೆಗಳನ್ನು ಕೇಳಿದ್ದರೆ, ಸಿ.ಎನ್. ಮಂಜುನಾಥ್ 9 ಪಿ.ಸಿ. ಮೋಹನ್ 1 ಪ್ರಶ್ನೆ ಮಾತ್ರ ಕೇಳಿದ್ದಾರೆ. ಮಂಜುನಾಥ್ ಶೇ 126.64, ತೇಜಸ್ವಿ ಸೂರ್ಯ ಶೇ 116, ಶೋಭಾ ಕರಂದ್ಲಾಜೆ ಶೇ 97.6ರಷ್ಟು ಸಂಸದರ ನಿಧಿ ಬಳಕೆ ಮಾಡಿದ್ದರೆ, ಪಿ.ಸಿ. ಮೋಹನ್ ಶೇ 9.48ರಷ್ಟು ಮಾತ್ರ ಬಳಕೆ ಮಾಡಿ ಕೊನೇ ಸ್ಥಾನದಲ್ಲಿದ್ದಾರೆ. ಬೆಂಗಳೂರಿನ ಶಾಸಕರಿಗೆ ಸಂಬಂಧಿಸಿದಂತೆ ಸಾಧನೆ ನೋಡಿದರೆ ಶಾಸಕರ ನಿಧಿಯನ್ನು ಬಳಸುವಲ್ಲಿ ನಿರ್ಲಕ್ಷ್ಯ ಕಂಡು ಬಂದಿದೆ. ನಾಲ್ವರು ಶಾಸಕರು ಮಾತ್ರ ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಆರು ಶಾಸಕರು ಶೇ.90ಕ್ಕಿಂತ ಅಧಿಕ ನಿಧಿ ಬಳಕೆ ಮಾಡಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ವಿಧಾನಸಭಾ ಕಲಾಪದಲ್ಲಿ ನೆಲಮಂಗಲದ ಎನ್. ಶ್ರೀನಿವಾಸ ಅವರು ಶೇ 100ರಷ್ಟು ಹಾಜರಾತಿ ಹೊಂದಿದ್ದಾರೆ. ಮೂವರು ಶಾಸಕರು ಶೇ 70ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದಾರೆ. ಶೇ.53.62ರಷ್ಟು ಹಾಜರಾತಿ ಹೊಂದಿರುವ ಪ್ರಿಯಕೃಷ್ಣ ಕೊನೆಯ ಸ್ಥಾನದಲ್ಲಿದ್ದಾರೆ. ಬಹುತೇಕ ಶಾಸಕರ ಆದಾಯ ಹೆಚ್ಚಳವಾಗಿದೆ. ಕೆ.ಗೋಪಾಲಯ್ಯ (ಶೇ 1.3399) ಮುನಿರತ್ನ (ಶೇ 959) ಆದಾಯ ವಿಪರೀತ ಏರಿಕೆಯಾಗಿದೆ. ಎನ್.ಎ. ಹ್ಯಾರಿಸ್ (ಶೇ 318) ಮತ್ತು ಆರ್.ಅಶೋಕ್ (ಶೇ 104) ಆನಂತರದ ಸ್ಥಾನ ಹೊಂದಿದ್ದಾರೆ.

ಕಾರ್ಯಕ್ರಮದಲ್ಲಿ ರಂಗಕರ್ಮಿ ಪ್ರಕಾಶ್ ಬೆಳವಾಡಿ, ಸಿವಿಕ್ ಬೆಂಗಳೂರು ಸಂಸ್ಥೆಯ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್, ಸದಸ್ಯ ಎ.ಕೃಷ್ಣ ಪ್ರಶಾಂತ್

## ರೂ.67 ಲಕ್ಷ ನಗದು, ಒಂದೂವರೆ ಕೆ.ಜಿ ಚಿನ್ನ ಕದ್ದಿದ್ದ ಕೆಲಸದಾಕೆ ಸೆರೆ

• ಉದಯವಾಹಿನಿ, ಬೆಂಗಳೂರು

ಕೆಲಸ ಮಾಡುತ್ತಿದ್ದ ಮನೆಯಲ್ಲಿ ರೂ.67 ಲಕ್ಷ ನಗದು ಹಾಗೂ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿದ್ದ ಕೆಲಸದಾಕೆಯನ್ನು ಚಾಮರಾಜಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಚಾಮರಾಜನಗರದ ಗಾಳಿಪುರದ ನಿವಾಸಿ ಉಮಾ (43) ಬಂಧಿತ ಆರೋಪಿ.

ಆರೋಪಿಯಿಂದ ರೂ.57.50 ಲಕ್ಷ ನಗದು, ರೂ.12.65 ಲಕ್ಷ ಮೌಲ್ಯದ ಆಭರಣಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಚಾಮರಾಜಪೇಟೆಯ ಮೂರನೇ ಮುಖ್ಯ ರಸ್ತೆಯ ನಿವಾಸಿ, ಉದ್ಯಮಿ ರಾಧಾ ಅವರು ನೀಡಿದ್ದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ನಗರ್ತಪೇಟೆಯಲ್ಲಿ ಸೆಕ್ಯುರಿಟಿ ಏಜೆನ್ಸಿ ನಡೆಸುತ್ತಿರುವ ರಾಧಾ ಅವರು, ಅನಾರೋಗ್ಯದಿಂದ ಬಳಲುತ್ತಿದ್ದ ಸಹೋದರಿ



ಉದಯವಾಹಿನಿ ಚಿತ್ರ

ಸುಜಾತಾ ಅವರ ಆರೈಕೆಗೆಂದು ಮೂರು ತಿಂಗಳ ಹಿಂದೆ ಆರೋಪಿಯನ್ನು ನೇಮಿಸಿಕೊಂಡಿದ್ದರು. ತಿಂಗಳಿಗೆ ರೂ.23 ಸಾವಿರ ಸಂಬಳ ನಿಗದಿ ಪಡಿಸಿದ್ದರು. ಎರಡು ತಿಂಗಳ ಹಿಂದೆ ಎಲೆಕ್ಟ್ರಾನಿಕ್ ಸಿಟಿ ಸಮೀಪದಲ್ಲಿರುವ ನಿವೇಶನವನ್ನು ಮಾರಾಟ ಮಾಡಿದ್ದ ರಾಧಾ ಅವರು, ಅದರಿಂದ ಬಂದ ಹಣವನ್ನು ಬೀರುವಿನಲ್ಲಿ ಇಟ್ಟಿದ್ದರು. ನಗದು ಜತೆಗೆ ಒಂದು ಕೆ.ಜಿ 415 ಗ್ರಾಂ ತೂಕದ ಚಿನ್ನಾಭರಣ ಹಾಗೂ ಎರಡು ಕೆ.ಜಿ 445 ಗ್ರಾಂ ತೂಕದ ಬೆಳ್ಳಿಯ ತಟ್ಟೆ, ಚೊಂಬು ಹಾಗೂ ಕಪ್‌ಗಳನ್ನು ಇಟ್ಟಿದ್ದರು ಎಂದು ಪೊಲೀಸರು ಹೇಳಿದರು. ನಿವೇಶನ ಮಾರಾಟದಿಂದ ಬಂದ ಹಣದಿಂದ ರಾಧಾ ಅವರು ಫ್ಲ್ಯಾಟ್ ಖರೀದಿಸುವ ಆಲೋಚನೆಯಲ್ಲಿದ್ದರು. ಜೂನ್ 9ರಂದು ಬೀರುವಿನಲ್ಲಿದ್ದ ಹಣ ತೆಗೆಯಲು ಹೋದಾಗ ಹಣ ಮತ್ತು ಚಿನ್ನಾಭರಣ ಇರಲಿಲ್ಲ. ನಂತರ, ದೂರು ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

**ದೂರು ಆಧರಿಸಿ ದೂರುದಾರರ ಮನೆಗೆ ತೆರಳಿ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಯಿತು. ಮನೆ ಕೆಲಸದಾಕೆ ಜೂನ್ 4ರ ಬೆಳಿಗ್ಗೆ ಬ್ಯಾಗ್‌ವೊಂದನ್ನು ಹಿಡಿದುಕೊಂಡು ತೆರಳುತ್ತಿರುವುದು ಕಂಡುಬಂದಿತ್ತು. ಉಮಾಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೆಲಸದಾಕೆಯೇ ಕೃತ್ಯ ಎಸಗಿರುವುದು ಪತ್ತೆ ಆಯಿತು' ಎಂದು ಪೊಲೀಸರು ಹೇಳಿದರು.**

# ಬಹುತೇಕ ಶಾಸಕರ ಆದಾಯ ಹೆಚ್ಚಳ, ಮೊದಲ ಸ್ಥಾನದಲ್ಲಿ ಕೆ.ಗೋಪಾಲಯ್ಯ!

### ಮೇ.20ರಂದು ಎರಡು ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಸಂಸದರು, ಶಾಸಕರ ವರ್ಷದ ಸಾಧನೆ ಕುರಿತು ವರದಿಯನ್ನು ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಿಂದ ಆಯ್ಕೆಯಾಗಿರುವ ನಾಲ್ವರು ಸಂಸದರ ಹಾಗೂ 32 ಶಾಸಕರ ಸಾಧನೆ ಕುರಿತು ಬಗ್ಗೆ ಸಿವಿಕ್ ಸಂಸ್ಥೆಯು ನಾಗರಿಕ ವರದಿಯನ್ನು ಬಿಡುಗಡೆ ಮಾಡಿದ್ದು, ವರದಿಯಲ್ಲಿ ಶಾಸಕರ ಆದಾಯ ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗಿರುವುದಾಗಿ ತಿಳಿಸಿದೆ. ಆದಾಯ ಹೆಚ್ಚಳದಲ್ಲಿ ಕೆ.ಗೋಪಾಲಯ್ಯ ಅವರು (ಶೇ 1,3399) ಮೊದಲ ಸ್ಥಾನದಲ್ಲಿದ್ದರೆ, ಎರಡನೇ ಸ್ಥಾನದಲ್ಲಿ ಮುನಿರತ್ನ (ಶೇ 959) ಇರುವುದು ಕಂಡು ಬಂದಿದೆ. ಇನ್ನುಳಿದಂತೆ ಎನ್.ಎ. ಹ್ಯಾರಿಸ್ (ಶೇ 318) ಮತ್ತು ಆರ್.ಅಶೋಕ್ (ಶೇ 104) ನಂತರದ ಸ್ಥಾನ ಪಡೆದಿದ್ದಾರೆ.

ನಮ್ಮ ನೇತಾ ನಮ್ಮ ರಿವ್ಯೂ ಭಾಗವಾಗಿ ಶನಿವಾರ ಈ ವರದಿ ಬಿಡುಗಡೆಯಾಗಿದ್ದು, ವರದಿಯಲ್ಲಿ ಈ ಅಂಶ ಬಹಿರಂಗಗೊಂಡಿದೆ.

ಜೂನ್ 24 ರಂದು ಬೆಂಗಳೂರಿನ ನಾಲ್ವರು ಸಂಸದರು 18ನೇ ಲೋಕಸಭೆಯ ಸದಸ್ಯರಾಗಿ 1 ವರ್ಷವನ್ನು ಪೂರ್ಣಗೊಳಿಸಿದರು. ಇನ್ನು 32 ಮಂದಿ ಶಾಸಕರು ಮೇ.20ರಂದು ಎರಡು ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಸಂಸದರು ಹಾಗೂ ಶಾಸಕರ ವರ್ಷದ ಸಾಧನೆ ಕುರಿತು ವರದಿಯನ್ನು ಬಿಡುಗಡೆ ಮಾಡಲಾಗಿದೆ.

ಬೆಂಗಳೂರಿನ ನಾಲ್ವರು ಸಂಸತ್ ಸದಸ್ಯರು (ಸಂಸದರು) ಮತ್ತು ಬೆಂಗಳೂರನ್ನು ಪ್ರತಿನಿಧಿಸುವ 28 ಶಾಸಕರು ಸೇರಿದಂತೆ 32 ಶಾಸಕರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ವರದಿ ಇದಾಗಿದೆ. ನಾಗರಿಕ ಸ್ವಯಂಸೇವಕರು ಮತ್ತು ವಿದ್ಯಾರ್ಥಿಗಳು ಆರು ತಿಂಗಳುಗಳಲ್ಲಿ ಸಂಗ್ರಹಿಸಿದ ವರದಿ ಕಾರ್ಡ್ ಇದಾಗಿದ್ದು, ಈ ವರದಿ ಹಾಜರಾತಿ, ಶಾಸಕಾಂಗ ಭಾಗವಹಿಸುವಿಕೆ, ಸಂಸದರ ನಿಧಿ ಬಳಕೆ, ಕ್ರಿಮಿನಲ್ ದಾಖಲೆಗಳು. ವೈಯಕ್ತಿಕ ಆಸ್ತಿ ಬೆಳವಣಿಗೆಯನ್ನು ಪರಿಶೀಲನೆ ನಡೆಸಿವೆ. 2023ರ ಹೊತ್ತಿಗೆ ಮುನಿರತ್ನ ಅವರ ಮೇಲೆ ಲೈಂಗಿಕ ಕಿರುಕುಳದ ಆರೋಪಗಳು ಸೇರಿದಂತೆ ಎಂಟು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಡಿಸೆಂಬರ್ 2024 ರಲ್ಲಿ ಅವರ ಮೇಲೆ ಅತ್ಯಾಚಾರ ಮತ್ತು ಹನಿಟ್ರ್ಯಾಪ್ ಆರೋಪಗಳೂ ಕೇಳಿ ಬಂದಿವೆ, ಇದರಿಂದಾಗಿ ಬೆಂಗಳೂರಿನಲ್ಲಿ

**ನಮ್ಮ ನೇತಾ ನಮ್ಮ ರಿವ್ಯೂ ಕಾರ್ಡ್**



ಉದಯವಾಹಿನಿ ಚಿತ್ರ

ಅತಿ ಹೆಚ್ಚು ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಶಾಸಕರಾಗಿದ್ದಾರೆ. ಇನ್ನು ಸಂಸತ್ ಅಧಿವೇಶನದಲ್ಲಿ ಭಾಗವಹಿಸುವುದರಲ್ಲಿ ಪಿ.ಸಿ. ಮೋಹನ್ ಮೊದಲ ಸ್ಥಾನ ಪಡೆದಿದ್ದರೆ, ತೇಜಸ್ವಿ ಸೂರ್ಯ ಕಡಿಮೆ ಹಾಜರಾತಿಯನ್ನು ಹೊಂದಿದ್ದಾರೆ. ಆದಾಗ್ಯೂ, ಸಂಸತ್ತಿನಲ್ಲಿ ಚರ್ಚೆಗಳಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸಿದ್ದಾರೆಂದು ತಿಳಿಸಲಾಗಿದೆ. ಸಂಸತ್ತಿನಲ್ಲಿ ಪ್ರಶ್ನೆ ಕೇಳುವುದರಲ್ಲಿ ತೇಜಸ್ವಿ ಸೂರ್ಯ ಮೊದಲ ಸ್ಥಾನ ಪಡೆದಿದ್ದಾರೆ. ಸಂಸದರ ನಿಧಿ ಬಳಕೆಯಲ್ಲಿ ಡಾ. ಸಿ.ಎನ್. ಮಂಜುನಾಥ್ ಮುಂಚೂಣಿಯಲ್ಲಿದ್ದಾರೆ ಎಂದು ವರದಿ ತಿಳಿಸಿದೆ. ಕಲಾಪದಲ್ಲಿ ಸಂಸದ ಪಿ.ಸಿ. ಮೋಹನ್ ಅವರು ಶೇ 98.51, ಸಿ.ಎನ್.ಮಂಜುನಾಥ್ ಶೇ 94ರಷ್ಟು ಭಾಗವಹಿಸಿದ್ದಾರೆ. ರಾಷ್ಟ್ರೀಯ ಸರಾಸರಿಯು ಶೇ 87 ಆಗಿದ್ದು, ತೇಜಸ್ವಿ ಸೂರ್ಯ ಶೇ 77.6ರಷ್ಟು ಹಾಜರಾತಿ ಹೊಂದಿದ್ದಾರೆ. ತೇಜಸ್ವಿ ಸೂರ್ಯ 84 ಪ್ರಶ್ನೆಗಳನ್ನು ಕೇಳಿದ್ದರೆ, ಸಿ.ಎನ್. ಮಂಜುನಾಥ್ 9, ಪಿ.ಸಿ. ಮೋಹನ್ 1 ಪ್ರಶ್ನೆ ಮಾತ್ರ ಕೇಳಿದ್ದಾರೆ. ಮಂಜುನಾಥ್ ಶೇ 126.64, ತೇಜಸ್ವಿ ಸೂರ್ಯ ಶೇ 116, ಶೋಭಾ ಕರಂದ್ಲಾಜೆ ಶೇ 97.6ರಷ್ಟು ಸಂಸದರ ನಿಧಿ ಬಳಕೆ ಮಾಡಿದ್ದರೆ, ಪಿ.ಸಿ. ಮೋಹನ್ ಶೇ 9.48ರಷ್ಟು ಮಾತ್ರ ಬಳಕೆ ಮಾಡಿ ಕೊನೇ ಸ್ಥಾನದಲ್ಲಿದ್ದಾರೆ. ಇನ್ನು ಬೆಂಗಳೂರಿನ ಶಾಸಕರಿಗೆ ಸಂಬಂಧಿಸಿದಂತೆ ಸಾಧನೆ ನೋಡಿದರೆ ಶಾಸಕರ ನಿಧಿಯನ್ನು ಬಳಸುವಲ್ಲಿ ನಿರ್ಲಕ್ಷ್ಯ ಕಂಡು ಬಂದಿದೆ. ನಾಲ್ವರು ಶಾಸಕರು ಮಾತ್ರ ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. 6 ಶಾಸಕರು ಶೇ 90ಕ್ಕಿಂತ ಅಧಿಕ ನಿಧಿ ಬಳಕೆ ಮಾಡಿದ್ದಾರೆ. ವಿಧಾನಸಭಾ ಕಲಾಪದಲ್ಲಿ ನೆಲಮಂಗಲದ ಎನ್. ಶ್ರೀನಿವಾಸ ಅವರು ಶೇ 100ರಷ್ಟು ಹಾಜರಾತಿ ಹೊಂದಿದ್ದರೆ. ಮೂವರು ಶಾಸಕರು ಶೇ 70ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದಾರೆ. ಶೇ 53.62ರಷ್ಟು ಹಾಜರಾತಿ ಹೊಂದಿರುವ ಪ್ರಿಯಕೃಷ್ಣ ಕೊನೆಯ ಸ್ಥಾನದಲ್ಲಿದ್ದಾರೆ.

**ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (ಕೆಎಲ್‌ಎಲ್‌ಎಡಿಎಸ್)ಯಡಿ 4 ಕೋಟಿ ರೂಪಾಯಿ ನಿಧಿಯನ್ನು ಕೇವಲ ನಾಲ್ವರು ಶಾಸಕರು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ, 40.79 ಕೋಟಿ ರೂಪಾಯಿಗಳು ಖರ್ಚಾಗದೆ ಉಳಿದಿದ್ದು, 4.84 ಕೋಟಿ ರೂಪಾಯಿಗಳು ರದ್ದಾಗುವ ಅಪಾಯದಲ್ಲಿದೆ. ಮಹದೇವಪುರ ಶಾಸಕಿ ಎಸ್. ಮಂಜುಳಾ ಯಾವುದೇ ಹಣ ಹಂಚಿಕೆ ಮಾಡಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.**


ಅಂತರಾಳದಿಂದ..
EDITORIAL

# ಸಿಬಿಎಸ್‌ಇ ಶಾಲೆಗಳಲ್ಲಿ ಸಕ್ಕರೆ ಫಲಕ ವಿನೂತನ ಕ್ರಮ, ಅನುಕರಣೀಯ




ಸಕ್ಕರೆ ಫಲಕ ಅಳವಡಿಸುವಂತೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ತನ್ನ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ ಸೂಚನೆ ನೀಡುವ ತೀರ್ಮಾನ ತೆಗೆದುಕೊಂಡಿರುವುದು ಸಕಾರಾತ್ಮಕ ಹೆಜ್ಜೆ. ಇದು, ಆರೋಗ್ಯಕರವಾದ ಆಹಾರ ಸೇವಿಸುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಲು ನೆರವಾಗುತ್ತದೆ. ಸಿಬಿಎಸ್‌ಇ ವ್ಯಾಪ್ತಿಯ ಅಂದಾಜು 26,000 ಶಾಲೆಗಳು ತಮ್ಮ ಆವರಣದಲ್ಲಿ ಸಕ್ಕರೆ ಫಲಕವನ್ನು ಅಳವಡಿಸಿ, ಸಕ್ಕರೆ ಹೆಚ್ಚು ಇರುವ ಆಹಾರ ಸೇವನೆಯ ಅಪಾಯವನ್ನು ಮಕ್ಕಳಿಗೆ ತಿಳಿಸಬೇಕು. ಆರೋಗ್ಯಕರವಾದ ಆಹಾರ ಸೇವನೆಯ ಪ್ರಯೋಜನಗಳನ್ನು ಹೇಳಬೇಕು ಎಂದು ಮಂಡಳಿ ಹೇಳಿದೆ. ದೇಶದಲ್ಲಿ ಮಕ್ಕಳು ಮಧುಮೇಹಕ್ಕೆ ತುತ್ತಾಗುವ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ವರದಿಗಳ ಜೊತೆ ಈ ಕ್ರಮವನ್ನು ಕಂಡಾಗ, ಇದೊಂದು ಸಕಾಲಿಕವಾದ ಹೆಜ್ಜೆ ಎಂಬುದು ಗೊತ್ತಾಗುತ್ತದೆ. ವಿಶ್ವದ ಮಧುಮೇಹ ರಾಜಧಾನಿ ಎಂಬ ಕೆಟ್ಟ ಹಣೆಪಟ್ಟಿಯು ಭಾರತಕ್ಕೆ ಇದೆ, ವಿಶ್ವದ ಒಟ್ಟು ಮಧುಮೇಹಿಗಳಲ್ಲಿ ಭಾರತೀಯರ ಪಾಲು ಶೇಕಡ 25ಕ್ಕಿಂತ ಹೆಚ್ಚಾಗಿದೆ. ಇದು ಬಹಳ ಗಂಭೀರವಾದ ಆರೋಗ್ಯ ಸಮಸ್ಯೆ. ಮುಂದೆ ಈ ಸಮಸ್ಯೆಯು ಇನ್ನಷ್ಟು ತೀವ್ರವಾಗದಂತೆ ನೋಡಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಬೇಕಿದೆ. ಮಕ್ಕಳಲ್ಲಿ ಸ್ಥೂಲಕಾಯ ಹಾಗೂ ಮಧುಮೇಹ (ಟೈಪ್ 2) ಹೆಚ್ಚಾಗುತ್ತಿದೆ ಎಂದು ಹಲವು ಅಧ್ಯಯನ ವರದಿಗಳು ಹೇಳಿವೆ. ಅದರಲ್ಲೂ ಮುಖ್ಯವಾಗಿ, ಹದಿಹರೆಯದ ಮಕ್ಕಳಲ್ಲಿ ಇದು ಹೆಚ್ಚಾಗಿದೆ. 2022ರಲ್ಲಿ 5 ವರ್ಷದಿಂದ 19 ವರ್ಷ ವಯಸ್ಸಿನ ನಡುವಿನ ಅಂದಾಜು 1.25 ಕೋಟಿ ಮಕ್ಕಳು ಸ್ಥೂಲಕಾಯ ಹೊಂದಿದ್ದರು. ಸಾಮಾನ್ಯವಾಗಿ ಬಳಕೆ ಮಾಡುವ ತಿಂಡಿ, ಪಾನೀಯಗಳಲ್ಲಿ ಇರುವ ಸಕ್ಕರೆ ಪ್ರಮಾಣದ ಬಗ್ಗೆಯೂ ಮಾಹಿತಿ ಒದಗಿಸಬೇಕಿದೆ. ಈ ರೀತಿ ಮಾಡಿದಾಗ, ತಾವು ಸೇವಿಸುವ ಆಹಾರ ಪದಾರ್ಥಗಳ ಒಳಿತು, ಕೆಡುಕುಗಳ ಬಗ್ಗೆ ಮಕ್ಕಳಿಗೆ ಸರಿಯಾದ ಅರಿವು ಮೂಡುತ್ತದೆ. ಮಕ್ಕಳ ಕಲಿಕಾ ಶಕ್ತಿ ಹೆಚ್ಚಿರುತ್ತದೆ. ಹೀಗಾಗಿ, ಇಂತಹ ವಿಷಯಗಳನ್ನು ಚೆನ್ನಾಗಿ, ಸೃಜನಶೀಲವಾಗಿ ತಿಳಿಸಿದಾಗ ಅವರ ಆಹಾರ ಆಯ್ಕೆಗಳ ಮೇಲೆ ಸಕಾರಾತ್ಮಕವಾದ ಪರಿಣಾಮ ಉಂಟಾಗುತ್ತದೆ. ಆಹಾರದ ಆಯ್ಕೆಗಳ ಬಗ್ಗೆ ಈ ಬಗೆಯ ಮಾಹಿತಿ ನೀಡುವ ಜೊತೆಯಲ್ಲೇ ಒಂದಿಷ್ಟು ಹೆಚ್ಚುವರಿ ಕ್ರಮಗಳನ್ನು ಕೂಡ ಕೈಗೊಳ್ಳಬೇಕು. ಶಾಲೆಗಳ ಕ್ಯಾಂಟೀನ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯಕರವಾದ ತಿಂಡಿ–ತಿನಿಸುಗಳು ಮಾತ್ರ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಒಳ್ಳೆಯ ಆಹಾರದ ಬಗ್ಗೆ ಮಕ್ಕಳಲ್ಲಿ ಹೆಚ್ಚು ಒಲವು ಮೂಡುವಂತೆ ಮಾಡುವಲ್ಲಿ ಶಿಕ್ಷಕರ ಪಾತ್ರ ದೊಡ್ಡದಾಗಿರುತ್ತದೆ. ಈ ಅಭಿಯಾನದಲ್ಲಿ ಪಾಲಕರೂ ಕೈಜೋಡಿಸಬೇಕು. ಇಂತಹ ಫಲಕಗಳನ್ನು ಶಾಲೆಗಳಲ್ಲಿ ಹಲವು ಸ್ಥಳಗಳಲ್ಲಿ ಅಳವಡಿಸಬೇಕು. ಆಗ ಉದ್ದೇಶಿತ ಸಂದೇಶವು ಎಲ್ಲಾ ಮಕ್ಕಳಿಗೆ ಹೆಚ್ಚು ಪರಿಣಾಮಕಾರಿಯಾಗಿ ರವಾನೆ ಆಗುತ್ತದೆ. ಆರೋಗ್ಯಕರವಾದ ಆಹಾರ ಸೇವನೆಯ ಮಹತ್ವವನ್ನು ಇತರ ಪಠ್ಯಕ್ರಮ ಮಂಡಳಿಗಳು ಹಾಗೂ ಶಾಲೆಗಳು ಮಕ್ಕಳಿಗೆ ತಿಳಿಹೇಳುವ ಕೆಲಸ ಮಾಡಬೇಕು. ಹಲವು ಬಗೆಗಳಲ್ಲಿ, ಹೊಸ ವಿಧಾನಗಳ ಮೂಲಕ ಈ ಸಂದೇಶವನ್ನು ಮಕ್ಕಳಿಗೆ ರವಾನಿಸಬೇಕು. ನಾವು ಉಪಭೋಗ ಸಂಸ್ಕೃತಿಯ ಸಮಾಜದಲ್ಲಿ ಇದ್ದೇವೆ. ದಿಢೀರನೆ ಸಿದ್ಧವಾಗುವ ಆಹಾರದ ಬಗ್ಗೆ ಮಕ್ಕಳಿಗೆ ಬಹಳ ರಂಜನೀಯವಾಗಿ ಮಾಹಿತಿ ನೀಡುವ ಕೆಲಸವನ್ನು ಈ ವ್ಯವಸ್ಥೆ ಮಾಡುತ್ತಿದೆ. ಇಂತಹ ಆಹಾರ ಬಹಳ ಸುಲಭದ ಆಯ್ಕೆ ಎಂದೂ ಹೇಳಲಾಗುತ್ತಿದೆ. ಇಂತಹ ತಿಂಡಿ–ತಿನಿಸುಗಳ ಬಗ್ಗೆ ದತ್ತಾಂಶ ಬಳಸಿ ಮಾಹಿತಿ ಒದಗಿಸಬೇಕು, ಆರೋಗ್ಯಕರ ಆಹಾರದ ಮಹತ್ವದ ಬಗ್ಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ತಿಳಿಸಬೇಕು.

**ಹದಿಹರೆಯದ ಹೆಣ್ಣುಮಕ್ಕಳಲ್ಲಿ ಶೇ 12ರಷ್ಟು ಮಂದಿ ಮಧುಮೇಹಕ್ಕೆ ತುತ್ತಾಗಿದ್ದರು. ಇದು ಗಂಡುಮಕ್ಕಳಲ್ಲಿ ಶೇ 8ರಷ್ಟಕ್ಕಿಂತ ಹೆಚ್ಚಾಗಿತ್ತು. ಇದಕ್ಕೆ ಒಂದು ಮುಖ್ಯ ಕಾರಣ ಆರೋಗ್ಯಕರವಲ್ಲದ ಆಹಾರ ಸೇವನೆ. ಈ ಸಮಸ್ಯೆಯ ನಿವಾರಣೆಗೆ ಸಿಬಿಎಸ್‌ಇ ಈಗ ಮುಂದಡಿ ಇರಿಸಿದೆ. ದಿನಕ್ಕೆ ಎಷ್ಟು ಪ್ರಮಾಣದಲ್ಲಿ ಸಕ್ಕರೆಯನ್ನು ಸೇವಿಸಬಹುದು ಹಾಗೂ ಹೆಚ್ಚು ಸಕ್ಕರೆ ಸೇವಿಸಿದಲ್ಲಿ ಆಗಬಹುದಾದ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಅದು ಹೇಳಿದೆ.**




• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಆ ಬಳಿಕ ಭರತನು ಮೂರ್ಛೆ ತಿಳಿದೆದ್ದು ತಂದೆಯಾದ ದಶರಥರಾಯನನ್ನು ಕುರಿತು ದುಃಖಿಸುತ್ತ ಮಹಾರಾಜ, ಹಂಬಲಿಸುತ್ತಿರುವ ಶತ್ರುಘ್ನನನ್ನು ಬಿಟ್ಟು ನೀನು ಎಲ್ಲಿ ಹೋದೆ ಭೋಜನಸಮಯದಲ್ಲಿ ಮಧುರವಾದ ಪಾನದ್ರವ್ಯಗಳನ್ನು ಕೊಟ್ಟು ನಮ್ಮನ್ನು ಬಹಳವಾಗಿ ಸಂತವಿಟ್ಟು ಆದರಿಸುತ್ತಿದ್ದ ನೀನು ಲೋಕಾಂತರಕ್ಕೆ ಹೋಗಿದ್ದರೂ ನಮ್ಮ ಎದೆಗಳು ಒಡೆಯದೆ ಕಲ್ಲಾಗಿ ನಿಂತಿವೆ. ಶ್ರೀರಾಮನು ವನಕ್ಕೆ ಹೋಗಿ ನೀನೂ ಸ್ವರ್ಗಸ್ಥನಾದಮೇಲೆ ನಾನು ಜೀವಿಸ ಲಾರೆನು. ಅಗ್ನಿ ಪ್ರವೇಶವನ್ನಾದರೂ ಮಾಡುವನು. ನಾನು ತಂದೆಯೂ ಇಲ್ಲದ ಅಣ್ಣನೂ ಇಲ್ಲದ ಈ ಆಯೋಧ್ಯಾಪಟ್ಟಣವನ್ನು ಪ್ರವೇಶಿಸಲೊಲ್ಲೆನು. ವನಕ್ಕೆ ಹೋಗುತ್ತೇನೆ ಎಂದು ಅಳುತ್ತಿದ್ದನು. ಭರತಶತ್ರುಘ್ನರನ್ನು ಕಂಡ ಪ್ರಧಾನಿಗಳೂ ಸಂಗದ ಬಂದವರೂ ಗೋಳಿಟ್ಟು ರೋದನ ಮಾಡುತ್ತಿದ್ದರು. ಈ ರೀತಿಯಲ್ಲಿ ಭರತಶತ್ರುಘ್ನರು ವೃಕ್ಷದಿಂದ ಮುರಿದುಬಿದ್ದ ಕೊಂಬೆಗಳಂತೆ ನೆಲದಮೇಲೆ ಬಿದ್ದು ಹೊರಳುತ್ತಲೂ ಅದರೊಡನೆ ಬಂದ ಪ್ರಧಾನಿಗಳೂ ಬಂಧುಜನಗಳೂ ಗೋಳಿಡುತ್ತಲೂ ಇರುವುದನ್ನು ಕಂಡು ವಸಿಷ್ಠ ಮುನೀಶ್ವರನು ಭರತಶತ್ರುಘ್ನರನ್ನು ಕೈಹಿಡಿದೆತ್ತಿ ಹೀಗೆ ಸಂತವಿಟ್ಟನು: ಭರತ, ನಿಮ್ಮ ತಂದೆಯು ಸ್ವರ್ಗಸ್ಥನಾಗಿ ಇಂದಿಗೆ ಹದಿಮೂರು ದಿನಗಳಾದವು. ಈ ಸ್ಮಶಾನದಲ್ಲಿ ನೀವು ಏಕೆ ಹೊರಳುತ್ತಿದ್ದೀರಿ ? ಲೋಕದಲ್ಲಿ ಪ್ರಾಣಿಗಳಿಗೆ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಷಡ್ವರ್ಗಗಳನ್ನು ಪರಿಹರಿಸುವುದಕ್ಕೆ ಶಕ್ಯವಲ್ಲ, ನೀವು ದುಃಖಪಡಬೇಡಿ ಎಂದು ನುಡಿದನು. ಸಕಲ ತತ್ತ್ವವಿಚಾರವನ್ನೂ ಬಲ್ಲ ಸುಮಂತ್ರನು ಶತ್ರುಘ್ನನನ್ನು ಕೈಹಿಡಿದೆತ್ತಿ ಸಮಸ್ತ ಪ್ರಾಣಿಗಳಿಗೂ ಉತ್ಪತ್ತಿಲಯಗಳುಂಟೆಂದು ತತ್ತ್ವವನ್ನು ಬೋಧಿಸಿದನು. ಆ ಬಳಿಕ ಭರತ ಶತ್ರುಘ್ನರು ವಸಿಷ್ಠ ಸುಮಂತ್ರರ ಉಪದೇಶದಿಂದ ಸ್ವಲ್ಪ ಚಿತ್ರ ಸ್ವಾಸ್ತ್ರವನ್ನು ಪಡೆದರು ಆಮೇಲೆ ಸುಮಂತ್ರನೇ ಮೊದಲಾದ ಪ್ರಧಾನರು ತಪ್ಪು ಕಣ್ಣೀರನ್ನು ಒರೆಸಿಕೊಂಡು ಶೋಕಾತಿಶಯ ದಿಂದ ಕೆಂಪಾದ ಕಣ್ಣುಗಳುಳ್ಳ ಭರತಶತ್ರುಘ್ನರನ್ನು ಕುರಿತು ಮುಂದಣ ಕಾರ್ಯವನ್ನು ಯೋಚಿಸ ಬೇಕೆಂದು ಹೇಳಿದರು.

### ಕತ್ರುಘ್ನನು ಮಂಥರೆಯನ್ನು ದಂಡಿಸಿದ್ದು

ಆನಂತರ ಅವರೆಲ್ಲರೂ ಅರಮನೆಗೆ ಹಿಂತಿರುಗಿದರು. ಆಗ ಕೈಕೇಯಾದೇವಿಯ ಅರಮನೆಯ ಮೂಡಣ ಬಾಗಿಲಲ್ಲಿ ಮಂಥರೆಯು ರಾಜಯೋಗ್ಯವಾದ ದಮಕೂಲವನ್ನುಟ್ಟು ಗಂಧವನ್ನು ಲೇಪನಮಾಡಿಕೊಂಡು, ಕಾಂಚೀದಾಮ ಕಾಲಂದಿಗೆ ಹರಳೋಲೆ ಮುತ್ತಿನಸರದ ಪದಕ ಕಂಠಮಾಲೆ ಕಡಗ ತೋಳುಬಳೆ ಮೊದಲಾದ ಸರ್ದಾಭರಣಗಳನ್ನು ತೊಟ್ಟು ಅನೇಕ ಹಗ್ಗಗಳಿಂದ ಕಟ್ಟಲ್ಪಟ್ಟ ಹೆಣ್ಣು ಕೋತಿಯಂತೆ ಒಪ್ಪುತ್ತಿದ್ದಳು. ಆಗ ದ್ವಾರಪಾಲಕರು ಶತ್ರುಘ್ನನ ಸಮೀಪಕ್ಕೆ ಬಂದು ಶತ್ರುಘ್ನ, ಶ್ರೀರಾಮನನ್ನು ವನವಾಸಕ್ಕೆ ಹೊರಡಿಸಿ ದಶರಥರಾಯನನ್ನು ಲೋಕಾಂತರಕ್ಕೆ ಕಳುಹಿಸಿದವಳು ಇವಳೇ. ಇವಳ ಹೆಸರು ಮಂಥರೆ ಎಂದು ಸೂಚಿಸಿದರು. ಆಗ ಶತ್ರುಘ್ನನು ಅತ್ಯಂತ ಕೋಪಯುಕ್ತನಾಗಿ ಕೈಕೇಯಾದೇವಿಯ ಅಂತಃಪುರದಲ್ಲಿ ತಿರುಗಾಡುತ್ತಿದ್ದ ದೂತರನ್ನು ಕರೆದು ಎಲ್ಲೆ ದೂತರುಗಳಿರಾ, ಈ ಮಂಥರೆಯ ಕೃತ್ಯದಿಂದ ನಮ್ಮ ತಂದೆಯಾದ ದಶರಥ ರಾಯನು ಸ್ವರ್ಗಸ್ಥನಾದನು. ಇವಳು ನಮ್ಮ ನಾಲ್ವರಣ್ಣತಮ್ಮಂದಿರಿಗೂ ಅನೇಕ ರೀತಿಯಲ್ಲಿ ಮನೋವ್ಯಥೆಯನ್ನು ಉಂಟುಮಾಡಿದ್ದಾಳೆ. ಇಷ್ಟು ಮಂದಿಗೂ ದುಃಖವನ್ನುಂಟುಮಾಡಿದ ಇವಳು ತನ್ನ ಪಾಪಕರ್ಮದ ಫಲವನ್ನು ಅನುಭವಿಸಬೇಕು ಎಂದು ಹೇಳಿದನು.

ಶತ್ರುಘ್ನನು ಕೂಡಲೆ ಸಖಿಯರೊಡನಿದ್ದ ಆ ಮಂಥರೆಯನ್ನು ಬಲಾತ್ಕಾರವಾಗಿ ಹಿಡಿದನು. ಆಗ ಮಂಥರೆಯು ಹೋ ಎಂದು ಕಿರಿಚಿದಳು. ಅವಳ ಸಖಿಯರು ಈ ಶತ್ರುಘ್ನನು ನಮ್ಮನ್ನೆಲ್ಲ ಕೊಂದುಬಿಟ್ಟಾನು. ಧರ್ಮರಹಸ್ಯವನ್ನರಿತ ಕೌಸಲೆಯಲ್ಲಿ ಶರಣಾಗೋಣ ಎಂದು ಕೂಗುತ್ತ ಓಡಿಹೋದರು. ಶತ್ರುಘ್ನನು ವಿಶೇಷವಾಗಿ ಕೋಪಿಸಿಕೊಂಡು ಕಣ್ಣುಗಳನ್ನು ಕೆಂಪುಮಾಡಿಕೊಂಡು, ಮೊರೆಯಿಡುತಿದ್ದ ಮಂಥರೆಯನ್ನು ಮುಂದಲೆಹಿಡಿದೆಳೆದು ಭೂಮಿಯಮೇಲೆ ಎಳೆದಾಡಿದನು, ಆಗ ಅವಳು ತೊಟ್ಟಿದ್ದ ರತ್ನಾಭರಣಗಳು ಭಿನ್ನಾಭಿನ್ನವಾಗಿ ಕೈಕೇಯಾದೇವಿಯ ಅರಮನೆಯ ಅಂಗಣದಲ್ಲಿ ಚೆಲ್ಲಲ್ಪಟ್ಟವು.

ಮುಂದುವರಿಯುವುದು...

# ನನ್ನದು ಎಂಬ ಮನೆ ಬೇಕು

**ಮನೆಯದುವೆ ಇರುವುದದು ನನ್ನದದು ಆಗಿರಲಿ**
**ಸನಿಹದಲಿ ಆಸೆಗಳ ಬುಟ್ಟಿಯಿರಲು**
**ದನಿಕನನು ಗಮನಿಸುತ ಒಳ್ಳೆಯದೆ ಬಯಸುತಲಿ**
**ಹನಿಯಾಗಿ ಬಯಕೆಗಳು ಲಕ್ಷ್ಮಿದೇವಿ.......**



ಸಾಮಾಜಿಕ ಕಳಕಳಿ
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

ಹೆಣ್ಣಾಗಿ ಹುಟ್ಟಿದ ಮೇಲೆ ಹೆಣ್ಣಿನ ಮನೆ ಯಾವುದಿದೆ. ಒಂದು ಹುಟ್ಟಿದ ಮನೆಯಾದರೆ, ಮದುವೆ ನಂತರದಲ್ಲೇ ಗಂಡನ ಮನೆ.

ಹೆಣ್ಣಿನ ಮನೆ ಮನೆ ಎಂಬದು ಶಾಶ್ವತವಾಗಿ ಯಾವುದು ಇಲ್ಲ ಎಂಬುದಾಗಿ ಹೇಳುವ ಹಲವರಿದ್ದಾರೆ. ಅಂತಹದರಲ್ಲಿ ಹೆಣ್ಣಿನ ಸ್ವಂತ ದುಡಿಮೆಯಲ್ಲಿ ಯಾರ ಹಂಗಿಲ್ಲದೆ ಪುಟ್ಟ ಗೂಡನ್ನು ಮಾಡಿಕೊಂಡರು ಸಹ ಅದು ಆಕೆಗೆ ಅರಮನೆ. ಸಮಯದಲ್ಲಿ ಆಸೆಗಳ ಬುತ್ತಿಯನ್ನು ಇಟ್ಟುಕೊಂಡು ದನಿಕನನ್ನು ನೋಡುತ್ತಒಳ್ಳೆಯದನ್ನು ಬಯಸುತ್ತಾ ಸಾಗುತ್ತಿರುತ್ತಾಳೆ. ಬಯಕೆಗಳೆಲ್ಲ ಯಾವುದೋ ದೊಡ್ಡ ರೀತಿಯಲ್ಲಿ ಇರದೆ ಹನಿಯಾಗಿ ಮೂಡಿ ಬರುತ್ತಿರುತ್ತದೆ. ಇದು ಕೇವಲ ಆಕೆಯ ಆಸೆ ಆಗಿರುತ್ತದೆ, ಕನಸಾಗಿರುತ್ತದೆ, ಜೀವನದ ಪ್ರಮುಖ ಘಟ್ಟ ಹೊಂದಿರುವ ಅಪೇಕ್ಷೆಯಾಗಿರುತ್ತದೆ. ಸರಳ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದವಳು. ವಿದ್ಯೆ,ಬುದ್ಧಿ ಸಂಸ್ಕಾರಗಳಲ್ಲಿ ಮುಂದಿರುವ ಹೆಣ್ಣುಮಗಳು. ಕಷ್ಟ ಸುಖಗಳನ್ನು ಅರಿತವಳು. ಬದುಕಿನ ಬವಣೆಗಳನ್ನು ಅರಿಯುತ್ತಾ ಸಂಸಾರಿಕ ಜೀವನದಲ್ಲಿ ಕಾಲಿಟ್ಟು ಗೆದ್ದವಳು. ಎರಡು ಹೆಣ್ಣು ಮಕ್ಕಳ ತಾಯಾದ ನಂತರದಲ್ಲಿ ಗಂಡನನ್ನು ಕಳೆದುಕೊಂಡರು ಸಹ ಬಹಳ ಶಕ್ತಿಶಾಲಿಯಾಗಿ ಜೀವನದಲ್ಲಿ ನಿಂತವಳು. ಬದುಕಿನಲ್ಲಿ ಎಷ್ಟೇ ಕಷ್ಟಗಳು ಬಂದರು ಅದಕ್ಕೆ ಹೆದರಿಕೊಳ್ಳದಂತೆ ಜೀವನ ಮಾಡುವಂತ ಶಕ್ತಿಯನ್ನು ಪಡೆದವಳು. ಗಂಡಿಗಿಂತ ಹೆಚ್ಚಾಗಿ ಎರಡು ಹೆಣ್ಣು ಮಕ್ಕಳಿಗೂ ಸಹ ತಂದೆಯ ಸ್ಥಾನಕ್ಕೆ ಕಡಿಮೆ ಇಲ್ಲ ಎಂಬ ರೀತಿಯಲ್ಲಿ ದುಡಿದು ಬದುಕಿದವಳು. ಆದರೆ ಒಂದು ದಿನ ಗಂಡ ಮಾಡಿದ ಸಾಲಕ್ಕೆ ಆಕೆಯು ಬಲಿಯಾಗುವಂತ ಪರಿಸ್ಥಿತಿ ಬಂದಿತು. ಗಂಡನ ಮನೆಯಲ್ಲಿ ಆತ ಸತ್ತರೂ ಸಾಲ ಸತ್ತಿರಲಿಲ್ಲ. ಅದಕ್ಕೆ ಜೀವ ಕೊಡುವ ಶಕ್ತಿಯು ಆಕೆಯಲ್ಲಿರಲಿಲ್ಲ. ಇತ್ತಾ ತವರು ಮನೆಯಲ್ಲಿ ಈಕೆಗೆ ಆಶ್ರಯ ನೀಡುವಂತಹ ಪರಿಸ್ಥಿತಿಯಲ್ಲೂ ಮುಂದೆ ಬರದೇ ಬೀದಿಗೆ ಬಿದ್ದರು ಬಾಳಲು ಪ್ರಯತ್ನಿಸಿದವಳು. ಗಂಡನ ಮನೆಯಿಂದ ಹೊರ ಹಾಕಿದರು, ಅತ್ತ ತವರು ಮನೆಯವರು ಸಹ ಈಕೆಯನ್ನು ಆದರಿಸಿ ಆಹ್ವಾನಿಸಲಿಲ್ಲ. ಬದುಕಿನ ಬವಣೆಗಳಲ್ಲಿ ಬದುಕಿದವಳು ಇವಳು. ಕಷ್ಟ ಎಷ್ಟೇ ಬಂದರೂ ಎದೆಗುಂದದೆ ಸಾಗಿದವಳು. ಹೆಸರು ಸರಳ ಇಂತಹ ಹೆಣ್ಣು ಮಕ್ಕಳು ಮಾತ್ರ ವಿರಳ. ಬದುಕೆಂಬ ಅಲೆಗಳ ಮಧ್ಯೆ ಹೋರಾಟ ಮಾಡಿ ಗೆದ್ದವಳಿವಳು. ಮೊದಲೇ ದುಡಿಯುತ್ತಿದ್ದ ಸರಳ ಹೊರಬಂದು ತನ್ನದೇ ಆದ ಮನೆ ಮಾಡಿಕೊಳ್ಳಬೇಕೆಂಬ ಬಯಕೆಯಲ್ಲಿ ಹಗಲು-ರಾತ್ರಿಗಳನ್ನದೇ ಕಷ್ಟಪಟ್ಟು ದುಡಿದವಳು. ಮಕ್ಕಳಿಗೆ ತಾನಿಲ್ಲದಿದ್ದಾಗ ಹೇಗೆ ರಕ್ಷಣೆಯಲ್ಲಿ ಬದುಕಬೇಕೆಂಬುದನ್ನು ಕಲಿಸಿಕೊಟ್ಟವಳು. ಹಂತ ಹಂತವಾಗಿಯೇ ಹಣ ಕೂಡಿಸಿಕೊಂಡು ಪುಟ್ಟ ಗುಡಿಸಲನ್ನು ಖರೀದಿ ಮಾಡಿಕೊಂಡು ಬದುಕಿದವಳಿವಳು. ತನ್ನ ಗುಡಿಸಿಲಿನಲ್ಲಿ ಅರಮನೆಯಂತೆ ಜೀವನದಲ್ಲಿ ಬಂದ ಸನ್ನಿವೇಶವನ್ನು ಎದುರಿಸಿದವಳು. ತನ್ನ ಮನೆಯನ್ನು ಬಹಳಷ್ಟು ವರ್ಷಗಳ ನಂತರದಲ್ಲಿ ಖರೀದಿ ಮಾಡಿದರು ಸಹ ಹೇಳಿಕೊಂಡಿದ್ದು ಒಂದೇ



**ಹುಟ್ಟಿದ ಮನೆ ನನ್ನದಲ್ಲ, ಮೆಟ್ಟಿದ ಮನೆ ನನ್ನದಲ್ಲ, ಯಾವುದು ನನ್ನ ಮನೆ**

ಇರುವವರೆಗೂ ನಾ ಖರೀದಿ ಮಾಡಿದ್ದ ನನ್ನ ಮನೆ. ಆಕೆ ಅದನ್ನು ಅರಿತು ಜೀವನದಲ್ಲಿ ಮುನ್ನಡೆಯುತ್ತಾ ಸಾಗುತ್ತಿರುವಾಗ ತನ್ನ ಎರಡು ಹೆಣ್ಣು ಮಕ್ಕಳಿಗೂ ಅವಳು ಹೇಳಿಕೊಟ್ಟದ್ದು ತನಗೆ ತಾನೇ ಗುರುವಾಗಬೇಕು, ಜೀವನ ಹೇಗೆ ಸಾಗಿಸಬೇಕೆಂಬುದನ್ನು ಹೆಣ್ಣು ಮಕ್ಕಳು ಹೇಗೆ ಬದುಕಬೇಕೆಂಬದನ್ನು ಸರಳ ಮಾಡುತ್ತಿದ್ದ ಕೆಲಸಗಳನ್ನು ನೋಡಿ ಅರಿತು ಕಲಿತ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದಿದರು ಸಹ ಒಳ್ಳೆಯ ಕೆಲಸಗಳಿಗೆ ಸೇರಿ ಸರ್ಕಾರಿ ಹುದ್ದೆಗಳಿಗೆ ಸೇರುತ್ತಾರೆ. ಅಮ್ಮ ನಿನ್ನ ಮನೆ ಗುಡಿಸಿಲಾದರೆ ನಾವು ಸೇರಿ ಒಂದು ಅಂತಸ್ತಿನ ಮನೆ ಕಟ್ಟುವೆವಮ್ಮ ಅದೇ ನಿನಗೆ ಅರಮನೆಯಮ್ಮ ಅಲ್ಲಿಂದ ನಿನಗೆ ಯಾರು ಹೋಗು ಎನ್ನಲಾರರು ಬದುಕಲ್ಲಿ ನಿನ್ನ ಹೊರ ಹಾಕಲಾರರು ಎಂದು ಹೇಳುತ್ತಾ ಎರಡು ಹೆಣ್ಣು ಮಕ್ಕಳು ಸಹ ಆಕೆಯನ್ನು ಗಂಡು ಮಕ್ಕಳಂತೆ ತಾಯಿಯನ್ನು ನೋಡಿಕೊಳ್ಳುತ್ತಾರೆ. ನನ್ನದು ಎಂಬ ಮನೆ ಬೇಕು ಎಂಬ ಹಂಬಲದಲ್ಲಿ ಬದುಕಿನ ಬವಣೆಗಳನ್ನು ಕಷ್ಟ ನಷ್ಟಗಳನ್ನು ಅರಿಯುತ್ತ ಮಕ್ಕಳಿಗೆ ಬುದ್ಧಿ ಕಲಿಸುತ್ತಾ ಸಾಗಿದವಳು ನಮ್ಮ ಈ ಸರಳ. ಹೆಣ್ಣು ಮಕ್ಕಳು ಎಂದಿಗೂ ಶಕ್ತಿಶಾಲಿ ಯಾದವಳು ಆಕೆಯನ್ನು ಯಾರು ಸಹ ಜರಿಯದಿರಿ. ಆದರೆ ಹೆಣ್ಣು ಮಕ್ಕಳಿಗೆ ಸಹಕಾರ ನೀಡಿ ನಿಮ್ಮ ಪಾಡಿಗೆ ನೀವು ಸುಮ್ಮನಿದ್ದು ಬಿಡಿ ಸಬಲೆಯಾದ ಹೆಣ್ಣಿಗೆ ಸಹಕಾರ ನೀಡಿ, ಅಬಲೆ ಎಂದು ಆಕೆಯನ್ನು ಕೀಳಾಗಿ ನೋಡದಿರಿ ಆಕೆಗೂ ನೀಡಿ ಸಾಗಿ . ಎನ್ನುತ್ತಾ ಜೈ ಹಿಂದ್ ಜೈ ಕರ್ನಾಟಕ ಮಾತೆ.

# ಉದಯೋನ್ಮುಖ ಕಲಾವಿದೆ ಕು. ಸೌಖ್ಯ ವೇಮರಾಜು ರಂಗಪ್ರವೇಶ



ಕಲಾ ಸಾಹಿತ್ಯ
**ವೈ.ಕೆ. ಸಂಧ್ಯಾ ಶರ್ಮ**
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

**ಕಣ್ಮನ ಸೆಳೆವ ನೃತ್ಯವಲ್ಲರಿ**


ಬೆಂಗಳೂರಿನ ಹೆಸರಾಂತ 'ನಟರಾಜರಂಗಂ ಸ್ಕೂಲ್ ಆಫ್ ಡ್ಯಾನ್ಸ್' ನೃತ್ಯಸಂಸ್ಥೆಯ ಉತ್ತಮ ನಾಟ್ಯಗುರು ಮತ್ತು ನೃತ್ಯ ಕಲಾವಿದೆ ಶ್ರೀಮತಿ. ಅಭಿನಯ ನಟರಾಜನ್ ಅವರ ಬಳಿ ಕಳೆದ 8 ವರ್ಷಗಳಿಂದ ಬದ್ಧತೆಯಿಂದ ನೃತ್ಯ ಕಲಿಯುತ್ತಿರುವ ಬಹುಮುಖ ಪ್ರತಿಭೆ ಕು. ಸೌಖ್ಯ, ಶ್ರೀ ಮುರಳಿ ಕೃಷ್ಣ ವೇಮರಾಜು ಮತ್ತು ಭಾಗ್ಯಲಕ್ಷ್ಮಿ ವೇಮರಾಜು ಅವರ ಮಗಳು. ಡಾ. ಗಂಗೂಬಾಯಿ ಹಾನಗಲ್ ಮ್ಯೂಸಿಕ್ ಮತ್ತು ಪರ್ಫಾರ್ಮಿಂಗ್ ಆರ್ಟ್ಸ್ ಯೂನಿವರ್ಸಿಟಿಯಿಂದ ಜ್ಯೂನಿಯರ್ ಬೋರ್ಡ್ ಪರೀಕ್ಷೆಯಲ್ಲಿ 'ಡಿಸ್ಟಿಂಕ್ಷನ್' ಪಡೆದು ತೇರ್ಗಡೆಯಾಗಿರುವ ಸೌಖ್ಯಾ, ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿತಿದ್ದು, ಈಗಾಗಲೇ ದೇಶಾದ್ಯಂತ ಅನೇಕ ನೃತ್ಯಪ್ರದರ್ಶನಗಳನ್ನು ನೀಡಿ ಕಲಾರಸಿಕರ ಮೆಚ್ಚುಗೆ ಪಡೆದಿದ್ದಾಳೆ. ಇದೀಗ ಇವಳು, ತನ್ನ ನೃತ್ಯ ಪ್ರತಿಭೆಯನ್ನು ಪ್ರದರ್ಶಿಸಲು ದಿ. 22 ಭಾನುವಾರ ಬೆಳಗ್ಗೆ 10 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ವಿದ್ಯುಕ್ತವಾಗಿ ರಂಗಪ್ರವೇಶ ಮಾಡುತ್ತಿದ್ದಾಳೆ. ಈ ಕನ್ನಿಕೆಯ ಸುಮನೋಹರ ನೃತ್ಯಸೊಬಗನ್ನು ಕಣ್ತುಂಬಿಕೊಳ್ಳಲು ಸರ್ವರಿಗೂ ಸುಸ್ವಾಗತ.



ಬೆಂಗಳೂರಿನಲ್ಲಿ ವಾಸವಾಗಿರುವ ಶ್ರೀ ಮುರಳಿಕೃಷ್ಣ ವೇಮರಾಜು ಮತ್ತು ಭಾಗ್ಯಲಕ್ಷ್ಮಿ ಅವರ ಮುದ್ದಿನ ಮಗಳು ಕು. ಸೌಖ್ಯಾ, ಬಹುಮುಖ ಪ್ರತಿಭೆ. ನೃತ್ಯ ಅವಳ ಬಾಲ್ಯದ ಒಲವು. ಅವಳ ಆಸಕ್ತಿಗೆ ನೀರೆರೆದು, ಪ್ರೋತ್ಸಾಹ ನೀಡಿದ ಹೆತ್ತವರು ಅವಳನ್ನು ಭರತನಾಟ್ಯ ಕಲಿಯಲು ಅಭಿನಯ ಚತುರೆ ಉತ್ತಮ ನೃತ್ಯಗುರುವೆನಿಸಿದ ಶ್ರೀಮತಿ ಅಭಿನಯಾ ಅವರ ಬಳಿ ಸೇರಿಸಿದರು. ಕಳೆದ 8 ವರ್ಷಗಳಿಂದ ಬಹು ಬದ್ಧತೆಯಿಂದ, ಆಸಕ್ತಿಯಿಂದ ಇವಳಿಗೆ ನೃತ್ಯ ಕಲಿಸುತ್ತಿರುವ ಗುರು ಅಭಿನಯ ಅವರ ಉತ್ತಮ ತರಬೇತಿಯಲ್ಲಿ ಸೌಖ್ಯಾ, ಬಹು ಆಸಕ್ತಿಯಿಂದ ಕಲಿಯುತ್ತ ಭರವಸೆಯ ನೃತ್ಯಗಾರ್ತಿಯಾಗಿ ಈಗ ರೂಪುಗೊಳ್ಳುತ್ತಿದ್ದಾಳೆ. ಓದಿನಲ್ಲೂ ಚುರುಕಾಗಿರುವ ಸೌಖ್ಯಾ, ವೈಟ್ ಫೀಲ್ಡ್‌ನಲ್ಲಿರುವ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ 9 ನೆಯ ತರಗತಿಯಲ್ಲಿ ಓದುತ್ತಿದ್ದಾಳೆ. ಶಾಲೆಯ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂದಿರುವ ಇವಳು ಅನೇಕ ಬಹುಮಾನಗಳನ್ನು ಗಳಿಸಿದ್ದಾಳೆ. ಪುಸ್ತಕಗಳ ಓದಿನಲ್ಲಿ ಇವಳಿಗೆ ಅದಮ್ಯ ಆಸಕ್ತಿ. ಜೊತೆಗೆ ಶ್ರೀ ವಿ.ಎಸ್.ಎನ್ ಮೂರ್ತಿ ದ್ವಿಭಾಶ್ಯಂ ಅವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತ, ಚಿತ್ರರಚನೆಯಲ್ಲೂ ತೊಡಗಿ ಕೊಂಡಿರುವ ಬಹುಮುಖ ಪ್ರತಿಭೆ ಇವಳದು ಎಂದರೆ ಅತಿಶಯೋಕ್ತಿಯಲ್ಲ. ಈಗಾಗಲೇ ಇವಳು ತಮಿಳುನಾಡು– ಆಂಧ್ರ ಪ್ರದೇಶಗಳಲ್ಲಿ ಅನೇಕ ದೇವಾಲಯಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾಳೆ. ಶ್ರೀ ಶೈಲಂ, ವೆಲ್ಲೂರು ಗೋಲ್ಡನ್ ಟೆಂಪಲ್, ವಾರ್ಗಲ್ ಸರಸ್ವತಿ ಟೆಂಪಲ್ ಮುಂತಾದೆಡೆ ಮತ್ತು ಕರ್ನಾಟಕದ ಯಡಿಯೂರು ಇನ್ನೂ ಅನೇಕ ಅನೇಕ ದೇವಾಲಯಗಳಲ್ಲಿ ನೃತ್ಯ ಪ್ರದರ್ಶನ ನೀಡಿರುವುದು ಇವಳ ವಿಶೇಷ. ಓದಿನ ಜೊತೆ ನೃತ್ಯ ಮುಂದುವರೆಸಿ ಸಾಧನೆ ಮಾಡುವ ಕನಸು ಇವಳದು.

# ಲಿವರ್ ಡ್ಯಾಮೇಜ್ ಮಾಡುವ ಹೆಪಟೈಟಿಸ್ ಎ ಸೋಂಕು

ನಮ್ಮ ಪಕ್ಕದ ರಾಜ್ಯ, ಕೇರಳದಲ್ಲಿ ಎರಡು ಪ್ರಮುಖ ಆರೋಗ್ಯ ಸವಾಲುಗಳನ್ನು ಎದುರಿಸುತ್ತಿದೆ. ಒಂದೆಡೆ, ರಾಜ್ಯವು ಅತಿ ಹೆಚ್ಚು ಕೋವಿಡ್ -19 ಪ್ರಕರಣಗಳನ್ನು ದಾಖಲಿಸುತ್ತಿದ್ದರೆ, ಮತ್ತೊಂದೆಡೆ, ಹೆಪಟೈಟಿಸ್ ಎ ಪ್ರಕರಣಗಳ ಸಂಖ್ಯೆಯೂ ದಾಖಲೆಯ ಏರಿಕೆಯನ್ನು ಕಂಡಿದೆ. ಮಳೆಗಾಲದ ಆರಂಭದೊಂದಿಗೆ, ಪರಿಸ್ಥಿತಿ ಹೆಚ್ಚು ಗಂಭೀರವಾಗುತ್ತಿದೆ. ಎರಡೂ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ. ಎರಡೂ ಕಾಯಿಲೆಗಳ ರೋಗಿಗಳು ಆಸ್ಪತ್ರೆಗಳನ್ನು ತುಂಬಿತುಳುಕುತ್ತಿದ್ದಾರೆ. ಅಲ್ಲಿನ ಸರ್ಕಾರ, ಆರೋಗ್ಯ ಇಲಾಖೆ ಮುನ್ನೆಚ್ಚರಿಕೆಯನ್ನು ವಹಿಸುತ್ತಿದೆ.



**ಹೆಪಟೈಟಿಸ್ ಎ ಪ್ರಕರಣ ಹೆಚ್ಚಳ:** ಕೇರಳದ ಹಲವು ಜಿಲ್ಲೆಗಳಲ್ಲಿ ಹೆಪಟೈಟಿಸ್ ಎ ಪ್ರಕರಣಗಳಲ್ಲಿ ಹಠಾತ್ ಹೆಚ್ಚಳ ಕಂಡು ಬಂದಿದೆ ಯಂತೆ. ಎರ್ನಾಕುಲಂ, ಮಲಪ್ಪುರಂ, ಕೋಝಿಕ್ಕೋಡ್ ಮತ್ತು ತ್ರಿಶೂರ್ ಜಿಲ್ಲೆಗಳಲ್ಲಿ ಈ ಪ್ರಕರಣ ದಾಖಲೆಯ ಏರಿಕೆಯನ್ನು ಕಂಡಿರುವುದರಿಂದ ಪರಿಸ್ಥಿತಿ ಕೈಮೀರುವ ಹಂತಕ್ಕೆ ಹೋಗುತ್ತಿದೆ ಎನ್ನಲಾಗುತ್ತಿದೆ ಅದರಲ್ಲೂ ಹೆಪಟೈಟಿಸ್ ಎ ಸೋಂಕಿನ ಬಗ್ಗೆ ನಿರ್ಲಕ್ಷ್ಯ ಮಾಡು ವಂತಿಲ್ಲ. ಈ ಕಾಯಿಲೆ ಮನುಷ್ಯನ ಪ್ರಮುಖ ಅಂಗವಾದ ಲಿವರ್ ನ ಮೇಲೆ ಗಂಭೀರ ಹಾನಿಯನ್ನುಂಟು ಮಾಡುವ ಸಾಧ್ಯತೆ ಹೆಚ್ಚಿರುತ್ತದೆ ಎನ್ನುತ್ತಾರೆ ಆರೋಗ್ಯ ತಜ್ಞರು.

**ಹೆಪಟೈಟಿಸ್ ಎ ಸೋಂಕು ಹೇಗೆಲ್ಲಾ ಹರಡುತ್ತದೆ?:** ಹೆಪಟೈಟಿಸ್ ಎ ಸೋಂಕು ಸಾಮಾನ್ಯವಾಗಿ ಕಲುಷಿತ ವಸ್ತುಗಳ ಸಂಪರ್ಕದ ಮೂಲಕ ಹರಡುತ್ತದೆ. ಹೆಪಟೈಟಿಸ್ ಎ ಸೋಂಕಿತ ಆಹಾರ ಮತ್ತು ಕಲುಷಿತ ಆಹಾರದ ಮೂಲಕ ಹರಡುತ್ತದೆ. ಕಲುಷಿತ ನೀರು ಕೂಡ ಇದಕ್ಕೆ ಪ್ರಮುಖ ಕಾರಣವಾಗಿದೆ. ಈ ರೋಗವು ಸೋಂಕಿತ ವ್ಯಕ್ತಿಯು ಬಳಸಿದ ಟವೆಲ್, ಶೇವಿಂಗ್ ಬ್ಲೇಡ್ ಇತ್ಯಾದಿ ವಸ್ತುಗಳನ್ನು ಬಳಸುವುದರಿಂದಲೂ ಹರಡುತ್ತದೆ.

**ಹೆಪಟೈಟಿಸ್ ಎ ಲಕ್ಷಣಗಳು:** ಹೆಪಟೈಟಿಸ್ ಎ ಸೋಂಕಿತ ವ್ಯಕ್ತಿಯಲ್ಲಿ ಈ ಕೆಳಗಿನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ತೀವ್ರ ರೀತಿಯಲ್ಲಿ ಆಯಾಸ-ಸುಸ್ತು ಕಾಣಿಸಿಕೊಳ್ಳುವುದು, ಮೂತ್ರದ ಬಣ್ಣ ಗಾಢವಾಗುವುದು, ವಾಕರಿಕೆ ಮತ್ತು ವಾಂತಿ ಕಾಣಿಸಿಕೊಳ್ಳುವುದು, ಹಸಿವು ಆಗದೇ ಇರುವುದು, ಹೊಟ್ಟೆ ನೋವು ಮತ್ತು ಹೊಟ್ಟೆಉಬ್ಬರ ಕಾಣಿಸಿಕೊಳ್ಳುವುದು, ಆಗಾಗ ಜ್ವರ ಕಾಣಿಸಿಕೊಳ್ಳುವುದು, ಕೀಲುಗಳು ಮತ್ತು ಸ್ನಾಯುಗಳಲ್ಲಿ ನೋವು, ಚರ್ಮ ಮತ್ತು ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವುದು.



**ಹೆಪಟೈಟಿಸ್ ಎ ತಡೆಗಟ್ಟಲು ಮುನ್ನೆಚ್ಚರಿಕೆಗಳು ಏನು?:** ಆಹಾರ ಸೇವಿಸುವ ಮೊದಲು, ನಂತರ ಕೈಗಳನ್ನು ಸ್ವಚ್ಛವಾಗಿಡಿ, ಸೋಪ್ ಮತ್ತು ನೀರಿನಿಂದ ಕೈಗಳನ್ನು ಸ್ವಚ್ಛಗೊಳಿಸಿ. ಶೌಚಾಲಯವನ್ನು ಬಳಸಿದ ನಂತರ, ಕೈಗಳನ್ನು ಸೋಪ್ ನಿಂದ ಚೆನ್ನಾಗಿ ತೊಳೆದುಕೊಳ್ಳಿ. ಹೊರಗಡೆ ಹೋದ ಸಂದರ್ಭದಲ್ಲಿ ನೀರು ಕುಡಿಯುವುದನ್ನು ತಪ್ಪಿಸಿ, ಮನೆಯಲ್ಲೇ ಕುದಿಸಿ ಆರಿಸಿದ ನೀರನ್ನೇ ಕುಡಿಯಿರಿ. ಹೊರಗಡೆ ಹೋದ ಸಂದರ್ಭದಲ್ಲಿ ಊಟ-ತಿಂಡಿ ಸೇವನೆಯ ವಿಚಾರದಲ್ಲಿ ಎಚ್ಚರವಹಿಸಿ, ಊಟ ಮಾಡುವುದಾದರೂ ಕೂಡ ಅಲ್ಲಿನ ಶುಚಿತ್ವವನ್ನು ನೋಡಿಕೊಳ್ಳಿ. ಹೆಪಟೈಟಿಸ್ ಎ ಸೋಂಕಿತ ವ್ಯಕ್ತಿಯೊಂದಿಗೆ ಸಂಪರ್ಕಕ್ಕೆ ಬರುವು ದನ್ನು ತಪ್ಪಿಸಿ.

**ಹೆಪಟೈಟಿಸ್ ಎ ಸೋಂಕಿಗೆ ಒಳಗಾಗಿದ್ದರೆ, ಈ ಕೆಳಗಿನ ವಿಷಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ:** ಸಾಕಷ್ಟು ವಿಶ್ರಾಂತಿ ಪಡೆಯಿರಿ.ಈ ಸೋಂಕು ಕಾಣಿಸಿಕೊಂಡಾಗ ಸುಸ್ತು-ಆಯಾಸ ಕಾಣಿಸಿಕೊಳ್ಳುವುದರಿಂದ ಸಾಕಷ್ಟು ವಿಶ್ರಾಂತಿಯ ಅಗತ್ಯ ವಿರುತ್ತದೆ. ವಾಂತಿ ಅಥವಾ ವಾಕರಿಕೆ ಬರುವಂತೆ ಅನಿಸಿದರೆ, ಆದಷ್ಟು ಹೊಟ್ಟೆಯಲ್ಲಿ ಜೀರ್ಣವಾಗುವ ಆಹಾರವನ್ನು ಸೇವನೆ ಮಾಡಿ. ಗಂಜಿ, ಖಿಚಡಿ ಇಡ್ಲಿ ಯಂತಹ ಆಹಾರವನ್ನು ಸೇವನೆ ಮಾಡಿ. ಆದಷ್ಟು ದೈನಂದಿನ ಆಹಾರ ಪದ್ಧತಿಯಲ್ಲಿ ಹಸಿರೆಲೆ ತರಕಾರಿಗಳು ಮತ್ತು ನೈಸರ್ಗಿಕ ಹಣ್ಣು ಗಳನ್ನು ಸೇವನೆ ಮಾಡಿ. ಸರಿಯಾಗಿ ನೀರು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ. ದೇಹದಲ್ಲಿ ನೀರಿನ ಕೊರತೆ ಉಂಟಾಗಲು ಬಿಡಬೇಡಿ, ಎಳನೀರು, ಮಜ್ಜಿಗೆ ಮತ್ತು ನಿಂಬೆ ನೀರನ್ನು ಕುಡಿಯಬಹುದು. ತಪ್ಪಿಯೂ ಮದ್ಯ ಸೇವನೆ ಮಾಡಿ, ಇಲ್ಲಾಂದ್ರೆ, ಲಿವರ್ ಆರೋಗ್ಯ ಸಂಪೂರ್ಣ ಹಾಳಾಗಬಹುದು.



# ಅರಿಶಿನದ, ಕರ್ಪೂರ ಮಿಕ್ಸ್‌ಮಾಡಿ ಮುಖಕ್ಕೆ ಹಚ್ಚಿದ್ರೆ ಪಿಂಪಲ್ಸ್‌ ನಿವಾರಣೆ

ಹವಾಮಾನ ಬದಲಾಗುತ್ತಿದ್ದಂತೆ ನಮ್ಮ ಆರೋಗ್ಯದ ಮೇಲೆ ಯಾವ ರೀತಿ ನಾನಾ ಬದಲಾವಣೆಗಳಾಗುತ್ತವೆಯೋ ಹಾಗೆಯೇ ನಮ್ಮ ಚರ್ಮದ ಮೇಲೂ ನಾನಾ ರೀತಿಯ ಬದಲಾವಣೆಗಳಾಗುತ್ತದೆ. ದೀರ್ಘಕಾಲದವರೆಗೆ ಚರ್ಮದ ಬಗ್ಗೆ ಕಾಳಜಿ ವಹಿಸದ ಕಾರಣ, ಚರ್ಮದ ಕೋಶಗಳಲ್ಲಿ ಕೊಳಕು ಸಂಗ್ರಹವಾಗಲು ಪ್ರಾರಂಭಿಸುತ್ತದೆ. ಇದರಿಂದಾಗಿ, ಮೊಡವೆ ಸಮಸ್ಯೆ ಉಂಟಾಗಲು ಪ್ರಾರಂಭಿಸುತ್ತದೆ. ಇದರ ಹೊರತಾಗಿ, ಸೂರ್ಯನ ಬೆಳಕು ಮತ್ತು ಮಣ್ಣಿನಿಂದಾಗಿ ಚರ್ಮದಲ್ಲಿ ಕೊಳಕು ಸಂಗ್ರಹವಾಗಲು ಪ್ರಾರಂಭಿಸುತ್ತದೆ, ಇದು ಮೊಡವೆಗಳಿಗೆ ಕಾರಣವಾಗುತ್ತದೆ.



**ಔಷಧೀಯ ಮತ್ತು ಚರ್ಮದ ಆರೈಕೆ:** ಈ ಸಮಸ್ಯೆಯನ್ನು ತೊಡೆದುಹಾಕಲು ಜನರು ಅನೇಕ ರೀತಿಯ ಔಷಧೀಯ ಮತ್ತು ಚರ್ಮದ ಆರೈಕೆ ಉತ್ಪನ್ನಗಳನ್ನು ಬಳಸುತ್ತಾರೆ. ಮಾರುಕಟ್ಟೆ ದೊರೆಯುವ ಉತ್ಪನ್ನಗಳಲ್ಲಿ ರಾಸಾಯನಿಕಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ಇದರಿಂದಾಗಿ ಕೆಲವರು ಅವುಗಳನ್ನು ಬಳಸುವುದರಿಂದ ಅಡ್ಡಪರಿಣಾಮಗಳನ್ನು ಪಡೆಯಲು ಪ್ರಾರಂಭಿಸುತ್ತಾರೆ. ಅದರ ಬದಲು ನೈಸರ್ಗಿಕವಾದ ಅರಿಶಿನ, ಕರ್ಪೂರದ ಫೇಸ್ ಮಾಸ್ಕ್ ಪ್ರಯೋಜನಕಾರಿಯಾಗಿದೆ. ಅರಿಶಿನ ಮತ್ತು ಕರ್ಪೂರ ಎರಡೂ ಚರ್ಮದ ಉರಿಯೂತವನ್ನು ಕಡಿಮೆ ಮಾಡುವ ಗುಣವನ್ನು ಹೊಂದಿದೆ. ಇದು ಮೊಡವೆಗಳನ್ನು ಕಡಿಮೆ ಮಾಡುತ್ತದೆ.

**ಮೊಡವೆಗಳಿಗೆ ಅರಿಶಿನ ಮತ್ತು ಕರ್ಪೂರ ಫೇಸ್ ಮಾಸ್ಕ್:** ಫೇಸ್ ಮಾಸ್ಕ್ ತಯಾರಿಸಲು, ಒಂದು ಬಟ್ಟಲಿನಲ್ಲಿ 1 ಟೀಚಮಚ ಅರಿಶಿನವನ್ನು ತೆಗೆದುಕೊಳ್ಳಿ. ಅದಕ್ಕೆ 2 ಚಿಟಿಕೆ ಕರ್ಪೂರ ಪುಡಿಯನ್ನು ಸೇರಿಸಿ. ನೀವು ಸಾವಯವ ಕರ್ಪೂರವನ್ನು ಮಾತ್ರ ಬಳಸುವುದು ಉಚಿತ. ಅದಕ್ಕೆ 2 ಟೀ ಚಮಚ ಶ್ರೀಗಂಧದ ಪುಡಿಯನ್ನು ಸೇರಿಸಿ ಸ್ವಲ್ಪ ನೀರು ಹಾಕಿ ಪೇಸ್ಟ್ ಮಾಡಿ. ನಿಮ್ಮ ಮೊಡವೆಗಳು ಸೌಮ್ಯವಾಗಿದ್ದರೆ ಮಾತ್ರ ಇದನ್ನು ಬಳಸಿ. ನಿಮ್ಮ ಮುಖವನ್ನು ನೀರಿನಿಂದ ತೊಳೆದು ಈ ಫೇಸ್ ಮಾಸ್ಕ್ ಅನ್ನು ಹಚ್ಚಿ. ಕನಿಷ್ಠ 15 ನಿಮಿಷಗಳ ಕಾಲ ಹಾಗೆಯೇ ಇರಿಸಿ ಮತ್ತು ನಂತರ ನಿಮ್ಮ ಮುಖವನ್ನು ಸರಳ ನೀರಿನಿಂದ ತೊಳೆಯಿರಿ. ನೀವು ಇದನ್ನು ವಾರಕ್ಕೆ ಎರಡರಿಂದ ಮೂರು ಬಾರಿ ಮುಖಕ್ಕೆ ಹಚ್ಚಬಹುದು.

**ಪತ್ರಕರ್ತ ದಲ್ಲಾಳಿಯಲ್ಲ; ವ್ಯವಸ್ಥೆಯ ಕಣ್ಣಾವಲು! ಪತ್ರಕರ್ತನಿಗೆ ಜನಪರ ಕಾಳಜಿ ಮುಖ್ಯ**

# ಪತ್ರಕರ್ತ ಎಂದರೆ ಕೇವಲ ವರದಿಗಾರಿಕೆ ಮಾಡುವುದಷ್ಟೇ ಅಲ್ಲ



ಪರಮೇಶ.ಡಿ.ವಿಳಸಪೂರೆ

ಪತ್ರಿಕೋದ್ಯಮ ಪ್ರಬಲ ಶಕ್ತಿ. ಅದನ್ನು ಜನಪರವಾಗಿ ಬಳಸಬೇಕು. ಮಾಧ್ಯಮ ಜನರ ಧ್ವನಿಯಾಗಬೇಕು. ಅಧಿಕಾರ ಶಾಹಿಯ ಕಣ್ಣು ತೆರೆಸುವ ಉದ್ದೇಶದಿಂದ ಪತ್ರಿಕೆ, ಪತ್ರಕರ್ತ ಸದಾ ಕೆಲಸ ಮಾಡಬೇಕು. ಸರ್ಕಾರವನ್ನು ಸೂಕ್ಷ ಹಾಗೂ ಸಂವೇದನಾ ಶೀಲ ಮಾಡುವ ಜವಾಬ್ದಾರಿ ಪತ್ರಕರ್ತರದ್ದು. ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಮಾನವೀಯ ಮುಖ ಇಟ್ಟುಕೊಂಡು ಕೆಲಸ ಮಾಡಬೇಕು, ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಪತ್ರಿಕೋದ್ಯಮ ಸೇವೆಯಾಗಿತ್ತು. ಸ್ವಾತಂತ್ರ್ಯೋತ್ಸವದ ನಂತರವೂ ಅದು ಸೇವಾ ಭಾವನೆ ಹೊಂದಿತ್ತು. ಈಗಲೂ ಸೌದಿ , ಉತ್ತರ ಕೋರಿಯಾ, ಚೀನಾದಲ್ಲಿ ಪತ್ರಕರ್ತರ ಮತ್ತು ಮಾಧ್ಯಮ ಸ್ಥಿತಿ ಭಾರತದಂತೆ ಇಲ್ಲ. ಹಾಗೆ ನೋಡಿದರೆ ಭಾರತದಲ್ಲಿ ಪತ್ರಿಕೋದ್ಯಮ ಪ್ರಬಲವಾಗಿದೆ. ನಾವೆಲ್ಲಾ ಅನೇಕ ಬಂಧಗಳ ನಡುವೆಯೂ ಜನರ ಪರ ವರದಿ ಮಾಡಬಹುದಾಗಿದೆ. ಪತ್ರಿಕೋದ್ಯಮ ಅತ್ಯಂತ ಜವಾಬ್ದಾರಿ ಕೆಲಸ. ಸೋಶಿಯಲ್ ಮೀಡಿಯಾಕ್ಕಿಂತ ಜನರೊಂದಿಗೆ ಬೆರೆತು, ವಾಸ್ತವ ವರದಿ ಮಾಡುವ ಮುದ್ರಣ ಮಾಧ್ಯಮದ ಕೆಲಸ ದೊಡ್ಡದು. ಪತ್ರಿಕೆಯನ್ನು ವಿನ್ಯಾಸಗೊಳಿಸಿ ಮುದ್ರಿಸಿ ಓದುಗರ ಕೈಗಿಡುವ ಹಿಂದೆ ನೂರಾರು ಕೈಗಳ ಶ್ರಮವಿರುತ್ತದೆ. ಒಂದು ಕಾಫಿಗೂ ಕಡಿಮೆ ಖರ್ಚಿನಲ್ಲಿ ಇದು ನಾವು ದಿನಪತ್ರಿಕೆಗಳನ್ನು ಓದುತ್ತಿದ್ದೇವೆ. ಪತ್ರಿಕಾ ಮಾಧ್ಯಮ ಬಹಳಷ್ಟು ದೊಡ್ಡದಾಗಿ ಬೆಳೆದಿದ್ದು , ಸಾಮಾಜಿಕ ಬದಲಾವಣೆಯಲ್ಲಿ ಮಹತ್ವದ ಪಾತ್ರ. ಪತ್ರಕರ್ತರಿಗೆ ತಾಳ್ಮೆ ಮತ್ತು ವ್ಯವದಾನ ಬಹಳ ಮುಖ್ಯವಾಗುತ್ತದೆ. ಪ್ರತಿಯೊಂದು ವಿಚಾರವನ್ನು ಸಮಾಜ ಮುಖಿಯಾಗಿ ಚಿಂತಿಸಿ ಅದರ ಬದಲಾವಣೆಗೆ ಪತ್ರಕರ್ತ ಪ್ರಯತ್ನಿಸ ಬೇಕು. ಕೇವಲ ವರದಿಯಿಂದಷ್ಟೇ ಬದಲಾವಣೆಯ ಸಾಧ್ಯವಿಲ್ಲ. ಪತ್ರಿಕೆಗಳು ಬಡವರ ಶೋಷಿತ ವರ್ಗದ ಪರವಾದ ಧ್ವನಿಯಾಗಬೇಕು.



ಪತ್ರಕರ್ತನೆಂದರೆ ಯಾರು? ಆತನ ಯಾವುದೇ ಉದ್ಯಮದ ವ್ಯವಸ್ಥಾಪಕನಲ್ಲ, ಅಥವಾ ಪ್ರಕಾಶಕನೂ ಅಲ್ಲ. ಮಾಲೀಕ ಕೂಡ ಅಲ್ಲ. ದೇಶವೆಂಬ ಹಡಗಿನ ಕಣ್ಣಾವಲುಗಾರನಂತೆ ಆತ. ಹಡಗಿನ ಸಾಗುವ ದಾರಿಯ ಅಡ್ಡಿಆತಂಕಗಳು, ಅಪಾಯಗಳ ಮುನ್ಸೂಚನೆ ನೀಡುವ ಕೆಲಸ ಆತನದ್ದು. ತನ್ನ ಸಂಬಳ ಅಥವಾ ತನ್ನ ಮಾಲೀಕನ ಲಾಭದ ಹಂಗು ತೊರೆದು ತನ್ನ ವೃತ್ತಿಧರ್ಮ ಪಾಲಿಸುವುದು ಪತ್ರಕರ್ತನ ಕರ್ತವ್ಯ. ತನ್ನ ಮೇಲೆ ನಂಬಿಕೆ ಇಟ್ಟಿರುವ ಜನರ ಹಿತ ಮತ್ತು ಸುರಕ್ಷತೆಯ ಮೇಲೆ ಕಣ್ಣಾವಲು ಇಡುವುದು ಪತ್ರಕರ್ತನ ಹೊಣೆ. ಪತ್ರಕರ್ತನ ಸುದ್ದಿ ಗ್ರಹಿಕೆ ಈ ಪ್ರಾಥಮಿಕ ಹೊಣೆಗಾರಿಕೆಯ ಪ್ರೇರಣೆಯೊಂದಿಗೆ ಜೊತೆಯಾಗಿ ಸಾಗಬೇಕಾಗುತ್ತದೆ. ಹಾಗಾಗಿ ಪತ್ರಕರ್ತರಾಗುವುದೆಂದರೆ, ಒಬ್ಬ ಕಲಾವಿದೆ, ಒಬ್ಬ ಚಿಂತಕ, ಒಬ್ಬ ಸಾಹಿತಿ ಅಥವಾ ಸಾರ್ವಜನಿಕ ಹಿತಾಸಕ್ತಿಯ ವಕೀಲರಷ್ಟೇ ಸಾಮಾಜಿಕ ಹೊಣೆಗಾರಿಕೆಗೆ ಹೆಗಲಾಗುವುದು.

ಹಾಗಾಗಿ ಪತ್ರಕರ್ತ ಉದ್ಯಮಿಯಲ್ಲ; ದಲ್ಲಾಳಿಯಲ್ಲ; ವ್ಯಾಪಾರಿಯಲ್ಲ, ರಾಜಕಾರಣಿಯಲ್ಲ. ಲಾಭನಷ್ಟದ ಮೇಲೆ ಕಣ್ಣಿಟ್ಟು ಕೆಲಸ ಮಾಡುವ ವೃತ್ತಿ ಪತ್ರಕರ್ತನದ್ದಲ್ಲ. ಪತ್ರಕರ್ತ ಎಂದರೆ ಕೇವಲ ವರದಿಗಾರಿಕೆ ಮಾಡುವುದಷ್ಟೇ ಅಲ್ಲ. ಸಮಾಜದೊಳಗಿರುವ ಆಗು ಹೋಗುಗಳ ಬಗ್ಗೆ ಜನರಿಗೆ ತಲುಪಿಸುವಂತಹ ಲೇಖನಗಳನ್ನು ಬರೆಯುವ ಮೂಲಕ ಜನಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ತಳ ಸಮುದಾಯದ ಜನರ ಪ್ರಗತಿಗಾಗಿ ಲೇಖನಗಳ ಮೂಲಕ ಗಮನ ಸೆಳೆಯಬೇಕು. ಎಲ್ಲದಕ್ಕಿಂತ ಹೆಚ್ಚಾಗಿ ಪ್ರೀತಿ ಸಾಮರಸ್ಯದ ಬದುಕನ್ನು ಕಟ್ಟಿಕೊಡುವಂತಹ ಕೆಲಸವನ್ನು ಮಾಡಬೇಕು. ಇದೇ ಪತ್ರಕರ್ತನ ನಿಜವಾದ ಕೆಲಸ.

# ಅಮೃತ್ ಯೋಜನೆ: ಮಳೆ ನಡುವೆ ಭರದ ಕಾಮಗಾರಿ

• ಉದಯವಾಹಿನಿ ಸಂಡೂರು

ಕೆಲ ಗ್ರಾಮಗಳಲ್ಲಿ ಗುತ್ತಿಗೆದಾರರು ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿರುವುದು, ಇನ್ನೂ ಕೆಲವು ಕಡೆ ವಿಳಂಬವಾಗಿರುವ ಬಗ್ಗೆ ದೂರುಗಳು ಬಂದಿವೆ. ಗುತ್ತಿಗೆದಾರರು, ಸಂಬಂಧಪಟ್ಟ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಯನ್ನು ಸಮರ್ಪಕವಾಗಿ, ಶೀಘ್ರವಾಗಿ ಜಾರಿಗೊಳಿಸಬೇಕು' ಎಂದು ಬಳ್ಳಾರಿಯ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಗಿರಿಜಾ ಶಂಕರ್ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಎಲ್ಲಾ ಗ್ರಾಮಗಳಲ್ಲಿ ಮದ್ಯ ಅಕ್ರಮ ಮಾರಾಟವು ಹೆಚ್ಚಾಗಿದೆ. ಅದಿರು ಲಾರಿ ಚಾಲಕರು ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುವುದರಿಂದ ಪ್ರಸ್ತುತ ದಿನಗಳಲ್ಲಿ ಅಪಘಾತಗಳು ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸುತ್ತಿವೆ. ಅಬಕಾರಿ ಅಧಿಕಾರಿಗಳು ಮದ್ಯ ಅಕ್ರಮ ಮಾರಾಟವನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದರು.

ಗ್ರಾಮಗಳಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಯ ಪೈಪ್‌ಲೈನ್‌ಗಾಗಿ ರಸ್ತೆಗಳನ್ನು ಅಗೆದು ಗುಂಡಿಗಳನ್ನು ನಿರ್ಮಿಸಲಾಗಿದೆ. ಬೈಕ್ ಸೇರಿದಂತೆ ವಿವಿಧ ವಾಹನಗಳ ಸವಾರರು, ಜನರು ನಿತ್ಯ ಸಂಚಾರಕ್ಕಾಗಿ ಪರಿತಪಿಸುವಂತಾಗಿದೆ. ಗ್ರಾಮಗಳಲ್ಲಿನ ಜನರು ಗ್ರಾಮ ಪಂಚಾಯಿತಿಯ ವಿರುದ್ಧ ದೂರುತ್ತಿದ್ದಾರೆ.

ಗುತ್ತಿಗೆದಾರರು, ಗ್ರಾಮೀಣ ಕುಡಿಯುವ ನೀರು ಮತ್ತು



ಉದಯವಾಹಿನಿ ಚಿತ್ರ

ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಈ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಬೇಕು' ಎಂದು ಚೋರುನೂರು ಗ್ರಾಪಂ ಪಿಡಿಒ ಕರಿಬಸಪ್ಪ ಒತ್ತಾಯಿಸಿದರು.

> ಪೈಪ್‌ಲೈನ್‌ಗಾಗಿ ಅಗೆದ ರಸ್ತೆಗಳಲ್ಲಿನ ಗುಂಡಿಗಳನ್ನು ಗುತ್ತಿಗೆದಾರರು ಶೀಘ್ರವಾಗಿ ಮುಚ್ಚಬೇಕು. ಜನರ ಸಂಚಾರಕ್ಕಾಗಿ ಅನುಕೂಲ ಮಾಡಿಕೊಡಬೇಕು. ಪಂಚಾಯಿತಿಯವರು ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಗ್ರಾಮಗಳಲ್ಲಿ ನೀರಿನ ಘಟಕಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕು. ಶಾಲೆಗಳು ಆರಂಭವಾಗಿದ್ದು ವಸತಿ ನಿಲಯಗಳ ಸ್ವಚ್ಛತೆಗೆ ಸೂಕ್ತ ಕ್ರಮವಹಿಸಬೇಕು. ಸರ್ಕಾರಿ ಶಾಲಾ ಕಾಲೇಜುಗಳಲ್ಲಿನ ಶೌಚಾಲಯಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು **– ಮಡಗಿನ ಬಸಪ್ಪ,**
> ತಾ. ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ

---

### ಶಿವಮೊಗ್ಗದಿಂದ ತಡಸಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಹಾದು ಹೋರಿವು ಹಾನಗಲ್ ತಾಲ್ಲೂಕಿನ ಕರಗುದರಿ ಬಳಿ ಟೋಲ್‌ಗೇಟ್

# ಸ್ಥಳೀಯರ ವಿರೋಧದ ನಡುವೆಯೂ ಶುಲ್ಕ ಸಂಗ್ರಹ ಆರಂಭಿಸಲು ಸಿದ್ಧತೆ

• ಉದಯವಾಹಿನಿ ಹಾವೇರಿ

ಜಿಲ್ಲೆಯ ಹಾನಗಲ್ ಹೊರವಲಯದಲ್ಲಿ ಟೋಲ್ ಗೇಟ್ ನಿರ್ಮಾಣ ಕೆಲಸ ಮುಕ್ತಾಯಗೊಂಡಿದ್ದು, ಸ್ಥಳೀಯರ ವಿರೋಧದ ನಡುವೆಯೇ ಜೂನ್ 16ರಿಂದ ಶುಲ್ಕ ಸಂಗ್ರಹ ಪ್ರಕ್ರಿಯೆ ಆರಂಭಿಸಲು ಸಿದ್ಧತೆ ನಡೆದಿದೆ.

ಶಿವಮೊಗ್ಗದಿಂದ ತಡಸಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಹಾದು ಹೋರಿವು ಹಾನಗಲ್ ತಾಲ್ಲೂಕಿನ ಕರಗುದರಿ ಬಳಿ ಟೋಲ್‌ಗೇಟ್ ನಿರ್ಮಿಸಲಾಗಿದೆ. ಈ ಸ್ಥಳದಲ್ಲಿ ಟೋಲ್‌ಗೇಟ್ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ್ದ ಸ್ಥಳೀಯರು, ಆರಂಭದಲ್ಲಿಯೇ ಹೋರಾಟ ಶುರು ಮಾಡಿದ್ದರು.

ಟೋಲ್ ಸಂಗ್ರಹ ಗುತ್ತಿಗೆ ಪಡೆದಿರುವ ಕಂಪನಿ ಮುಖ್ಯಸ್ಥರು ಹಾಗೂ ಹೋರಾಟಗಾರರ ನಡುವೆ ತಹಶೀಲ್ದಾರ್ ರೇಣುಕಾ ನೇತೃತ್ವದಲ್ಲಿ ಸಭೆಯು ನಡೆದಿತ್ತು. ಸಭೆಯಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕೆಆರ್‌ಡಿಸಿಎಲ್) ಅಧಿಕಾರಿಗಳು, ಸಾಲ ಮಾಡಿ ರಸ್ತೆ ನಿರ್ಮಿಸಲಾಗಿದೆ. ಸಾಲ ತೀರಿಸಲು ಟೋಲ್‌ಗೇಟ್ ಅನಿವಾರ್ಯ. ಸರ್ಕಾರದ ಆದೇಶದಂತೆ ಟೋಲ್ ಗೇಟ್ ಆರಂಭಿಸಲಾಗುತ್ತಿದೆ ಎಂದಿದ್ದರು. ಹಾನಗಲ್ ವಿಧಾನಸಭಾ ಕ್ಷೇತ್ರದ ಜನರಿಗೆ ಶುಲ್ಕದಿಂದ ವಿನಾಯಿತಿ ನೀಡುವಂತೆ ಸ್ಥಳೀಯರು ಆಗ್ರಹಿಸಿದ್ದರು.



ಉದಯವಾಹಿನಿ ಚಿತ್ರ

## ಸ್ಥಳೀಯರಿಗೆ ಉಚಿತವೆಂದಿದ್ದ ಶಾಸಕ

'ಟೋಲ್‌ಗೇಟ್ ಆರಂಭಕ್ಕೆ ಸ್ಥಳೀಯರಿಂದ ವಿರೋಧವಿರುವುದು ಗಮನದಲ್ಲಿದೆ. ಸ್ಥಳೀಯರಿಗೆ ಉಚಿತ ಸಂಚಾರ ಕಲ್ಪಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಸ್ಥಳೀಯ ಶಾಸಕ ಶ್ರೀನಿವಾಸ್ ಮಾನೆ ತಿಳಿಸಿದ್ದರು. ಆದರೆ ಉಚಿತದ ಬಗ್ಗೆ ಇದುವರೆಗೂ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಟೋಲ್‌ಗೇಟ್‌ನಿಂದ ಸ್ಥಳೀಯರಿಗೆ ಆಗುವ ಸಮಸ್ಯೆಗಳ ಬಗ್ಗೆ 'ಪ್ರಜಾವಾಣಿ'ಯಲ್ಲಿ 'ಟೋಲ್‌ಗೇಟ್ ಹೊರೆ' ಶೀರ್ಷಿಕೆಯಡಿ ಸರಣಿ ವರದಿಗಳು ಪ್ರಕಟಿಲಾಗಿತ್ತು. ಈ ವರದಿಗೆ ಪ್ರತಿಕ್ರಿಯಿಸಿದ್ದ ಶ್ರೀನಿವಾಸ್ ಮಾನೆ 'ನಾನು ಎಂದಿಗೂ ಜನಪರ, ಸ್ಥಳೀಯ ಜನರಿಗೆ ಟೋಲ್‌ಗೇಟ್‌ನಲ್ಲಿ ಉಚಿತ ಸಂಚಾರಕ್ಕೆ ಅನುಕೂಲ ಮಾಡಿ ಕೊಡಿಸುತ್ತೇನೆ' ಎಂದಿದ್ದರು. ಶಾಸಕರು ಮಧ್ಯಪ್ರವೇಶಿಸಿ ಸ್ಥಳೀಯರ ಸಂಚಾರಕ್ಕೆ ವಿನಾಯಿತಿ ಕೊಡಿಸಬೇಕೆಂದು ಜನರು ಆಗ್ರಹಿಸುತ್ತಿದ್ದಾರೆ.

ಇದಾದ ನಂತರ, ಹಲವು ದಿನಗಳವರೆಗೆ ಟೋಲ್ ಗೇಟ್ ನಿರ್ಮಾಣ ಕೆಲಸ ಸ್ಥಗಿತಗೊಳಿಸಲಾಗಿತ್ತು. ಕೆಲದಿನಗಳ ಹಿಂದೆಯಷ್ಟೇ ಟೋಲ್‌ಗೇಟ್ ನಿರ್ಮಾಣ ಕೆಲಸವನ್ನು ಆರಂಭಿಸಿ, ಇದೀಗ ಪೂರ್ಣಗೊಳಿಸಲಾಗಿದೆ.

ಜೂನ್ 16ರಿಂದ ಟೋಲ್‌ಗೇಟ್ ಶುಲ್ಕ ಸಂಗ್ರಹ ಆರಂಭಿಸಲಾಗುವುದೆಂದು ಕೆಆರ್‌ಡಿಸಿಎಲ್ ಅಧಿಕಾರಿಗಳು ಅಧಿಕೃತ ಮಾಹಿತಿ ನೀಡಿದ್ದಾರೆ. ಲೋಕೋಪಯೋಗಿ ಇಲಾಖೆ ಹಾಗೂ ಕೆಶಿಫ್‌ನಿಂದ ನಿರ್ಮಿಸಿರುವ ರಾಜ್ಯ ಹೆದ್ದಾರಿಯಲ್ಲಿ ಟೋಲ್‌ಗೇಟ್ ನಿರ್ಮಿಸಿ ಟೋಲ್ ವಸೂಲಿ ಮಾಡುವ ಜವಾಬ್ದಾರಿಯನ್ನು ಕೆಆರ್‌ಡಿಸಿಎಲ್‌ಗೆ ವಹಿಸಲಾ ಗಿದೆ. ದಾವಣಗೆರೆಯ ಜ್ಯೋತಿಪ್ರಕಾಶ್ ಕೆ.ಎಂ. ಅವರಿಗೆ ಶುಲ್ಕ ವಸೂಲಿಯ ಗುತ್ತಿಗೆ ನೀಡಲಾಗಿದೆ. ಸರ್ಕಾರದ ನಿರ್ದೇಶನದಂತೆ ಶುಲ್ಕ ನಿಗದಿಪಡಿಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ ಎಂದು ಕೆಆರ್‌ಡಿಸಿಎಲ್ ಅಧಿಕಾರಿಯೊಬ್ಬರು ತಿಳಿಸಿದರು.

ಹಾನಗಲ್ ಗಡಿಯಿಂದ ತಡಸ ನಡುವಿನ 43.46 ಕಿ.ಮೀ. ವ್ಯಾಪ್ತಿಯಲ್ಲಿ ಟೋಲ್ ಸಂಗ್ರಹ ಮಾಡಲು ಕರಗುದರಿ ಬಳಿ ಟೋಲ್‌ಗೇಟ್ ನಿರ್ಮಿಸಲಾಗಿದೆ.

**ತಿಂಗಳ ಪಾಸ್‌ಗೆ ಒಪ್ಪಿಗೆ:** ಹಾನಗಲ್ ತಾಲ್ಲೂಕಿನ ಹಲವು ಹಳ್ಳಿಗಳ ಜನರು, ಕರಗುದರಿ ಮೂಲಕ ತಾಲ್ಲೂಕು ಕೇಂದ್ರಕ್ಕೆ ನಿತ್ಯವೂ ಓಡಾಡುತ್ತಾರೆ. ಟೋಲ್‌ಗೇಟ್‌ನಿಂದಾಗಿ ಆರ್ಥಿಕ ಹೊರೆಯಾಗಲಿದೆ. ಸ್ಥಳೀಯರಿಗೆ ಟೋಲ್‌ನಲ್ಲಿ ವಿನಾಯಿತಿ ನೀಡಬೇಕು' ಎಂದು ಸ್ಥಳೀಯರು ದೂರಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಕೆಆರ್‌ಡಿಸಿಎಲ್ ಅಧಿಕಾರಿಗಳು, ಗುತ್ತಿಗೆದಾರರ ಮೂಲಕ ತಿಂಗಳ ಪಾಸ್ ನೀಡಲು ಒಪ್ಪಿಗೆ ನೀಡಲಾಗಿದೆ. ನಿರ್ದಿಷ್ಟ ಪ್ರವೇಶದ ಪಾಸ್‌ಗಳ ಮೂಲಕ ಸ್ಥಳೀಯರು, ಅನಿಯಮಿತವಾಗಿ ಸಂಚರಿಸಲು ಅವಕಾಶವಿದೆ. ಟ್ರ್ಯಾಕ್ಟರ್, ಬೈಕ್‌ಗಳಿಗೆ ಉಚಿತ ಪ್ರವೇಶವಿದೆ. ಎರಡು ಗ್ರಾಮಗಳ ಜನರ ಓಡಾಟಕ್ಕೂ ವಿನಾಯಿತಿ ನೀಡಲು ಚಿಂತನೆ ನಡೆದಿದೆ' ಎಂದು ಹೇಳಿದರು.

## ಹೋರಾಟಕ್ಕೆ ಸಿದ್ಧತೆ

ಟೋಲ್‌ಗೇಟ್ ಆರಂಭದ ಮುನ್ಸೂಚನೆ ಸಿಗುತ್ತಿದ್ದಂತೆ ಹೋರಾಟ ಆರಂಭಿಸಿದ್ದೆವು. ಕಲ್ಲುಗಳನ್ನು ಕಿತ್ತು ಹಾಕಿ ಆಕ್ರೋಶ ಹೊರಹಾಕಿದ್ದೆವು. ಈಗ ವಿರೋಧದ ನಡುವೆಯೇ ಟೋಲ್‌ಗೇಟ್ ಆರಂಭಿಸುತ್ತಿದ್ದಾರೆ. ಟೋಲ್‌ಗೇಟ್ ಆರಂಭವಾಗುವುದನ್ನೇ ಕಾಯುತ್ತಿದ್ದೇವೆ. ಮತ್ತೊಂದು ಸುತ್ತಿನ ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಸ್ಥಳೀಯರು ಹೇಳಿದರು.

> ಕೆಆರ್‌ಡಿಸಿಎಲ್ಲೂ ಪಿಸಿರುವ ನಿಯಮ ಹಾಗೂ ನಿಗದಿಪಡಿಸಿರುವ ಶುಲ್ಕದ ಪ್ರಕಾರ ಟೋಲ್‌ಗೇಟ್ ಆರಂಭಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ.
> **– ಜ್ಯೋತಿಪ್ರಕಾಶ್ ಕೆ.ಎಂ.**
> ಟೋಲ್‌ಗೇಟ್ ಗುತ್ತಿಗೆದಾರ

---

# ಕಾಯಕಲ್ಪಕ್ಕೆ ಕಾಯ್ದಿದೆ ರಾಚನಕಟ್ಟಿ ಕೆರೆ

• ಉದಯವಾಹಿನಿ ಶಿಗ್ಗಾವಿ

ಪಟ್ಟಣದ ರಾಚನಕಟ್ಟಿ ಕೆರೆ ತ್ಯಾಜ್ಯ ವಸ್ತು ಮತ್ತು ಸುತ್ತಲು ಗಿಡಗಂಟಿಗಳು ಬೆಳೆದು ಕೆರೆ ನೀರು ಮಲಿನವಾಗಿ ಗಬ್ಬು ವಾಸನೆ ಹರಡುತ್ತಿದೆ. ಹೀಗಾಗಿ ಸ್ಥಳೀಯ ಆಡಳಿತ ಈ ಕರೆ ಅಭಿವೃದ್ಧಿ ಕಾಯಕಲ್ಪ ನೀಡುವುದು ಮುಖ್ಯವಾಗಿದೆ ಎಂದು ಇಲ್ಲಿನ ನಿವಾಸಿಗಳು ದೂರುತ್ತಾರೆ. ಪ್ರಾಚೀನ ಕಾಲದ ರಾಚನಕಟ್ಟೆ ಪಟ್ಟಣದ ಜನರ ಜೀವನಾಡಿಯಾಗಿದ್ದು, ಆದರೆ ಕೆರೆ ಸಂಪೂರ್ಣ ಮಲಿನವಾಗುವ ಕಾರಣ ಜನಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲದಾಗಿದೆ.

ಕೆರೆ ಸುತ್ತಲಿನ ನಿವಾಸಿಗಳು, ಗ್ರಾಮೀಣ ಪ್ರದೇಶದಿಂದ ಬರುವ ಸಾರ್ವಜನಿಕರು ಮಲಮೂತ್ರ ವಿಸರ್ಜನೆ ಮಾಡುವ ಶೌಚಾಲಯಗಳಿಲ್ಲದ ಕಾರಣ ಈ ಕೆರೆ ಶೌಚಾಲಯವಾಗಿ ಮಾರ್ಪಟ್ಟಿದೆ. ಅಲ್ಲದೆ ಹಂದಿನಾಯಿಗಳ ವಾಸ ಸ್ಥಾನವಾಗಿದೆ.

ಅದರಿಂದಾಗಿ ಕೆರೆ ನೀರು ಕಲುಷಿತವಾಗಿ ದುರ್ನಾಸನೆ ಹರಡುತ್ತಿದೆ. ಹೀಗಾಗಿ ಕೆರೆ ಹತ್ತಿರದ ರಸ್ತೆಯಲ್ಲಿ ಜನ ಓಡಾಡದಂತಾಗಿದೆ ಎಂದು ಸಾರ್ವಜನಿಕರು ದೂರುತ್ತಾರೆ. ಕೆರೆ ದಂಡೆ ಸುತ್ತಲು ಗಿಡಗಂಟಿಗಳು ಬೆಳೆದು ಕಾಡಿನಂತೆ ಕಾಣುತ್ತಿದೆ. ಕೆರೆ ನೀರಿನ ಮೇಲೆ ಹಸಿರು ಪಾಚಿಗಟ್ಟಿದೆ. ಅದರಿಂದಾಗಿ ನೀರು ಸಂಪೂರ್ಣ ಹಸಿರಾಗಿದೆ. ಪಟ್ಟಣದ ಮದ್ಯಭಾಗದಲ್ಲಿನ ಈ ಕೆರೆಗೆ ಪುರಸಭೆ ಅಭಿವೃದ್ಧಿ ಮಾಡುವ ಮೂಲಕ ಕಾಯಕಲ್ಪ ನೀಡುವ ಕಾರ್ಯ ಕೈಗೊಳ್ಳಬೇಕು.



ಉದಯವಾಹಿನಿ ಚಿತ್ರ

> ಕಾಡನಕಟ್ಟಿ ಕೆರೆಯಿಂದ ರಾಚನಕಟ್ಟಿ ಕೆರೆವರೆಗೆ ರಾಜ ಕಾಲುವೆ ನಿರ್ಮಾಣವಾಗಬೇಕಿದೆ. ಅದರಿಂದ ಕೆರೆಗೆ ಇನ್ನಷ್ಟು ನೀರ ಬರಲು ಸಾಧ್ಯವಿದೆ. ಅನುದಾನ ಕೊರತೆಯಿಂದ ಆಗುತ್ತಿಲ್ಲ.
> **– ಸಿದ್ದಾರ್ಥಗೌಡ ಪಾಟೀಲ,** ಪುರಸಭೆ ಅಧ್ಯಕ್ಷ

---

# ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಉನ್ನತ ಹುದ್ದೆಗೇರಲಿ: ಲಕ್ಷ್ಮೀ ಹೆಬ್ಬಾಳಕರ

• ಉದಯವಾಹಿನಿ ಬೆಳಗಾವಿ

ಗ್ರಾಮೀಣ ಕ್ಷೇತ್ರದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸಾಧನೆ ಮೆರೆದು, ಉನ್ನತ ಹುದ್ದೆಗೇರಬೇಕು ಎಂಬುದು ನನ್ನ ಆಸೆ. ಅದಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಿದ್ದೇವೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಇಲ್ಲಿನ ಕುವೆಂಪು ನಗರದಲ್ಲಿ ಲಕ್ಷ್ಮೀತಾಯಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ನಾನು ಶಾಸಕಿಯಾದ ನಂತರ, ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ಆರೋಗ್ಯ ರಂಗಕ್ಕೆ ಆದ್ಯತೆ ನೀಡುತ್ತ ಬಂದಿದ್ದೇನೆ. ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಗ್ರಾಮೀಣ ಕ್ಷೇತ್ರದಲ್ಲಿನ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳು ಮತ್ತು ಅಗತ್ಯವಿರುವ ಪ್ರಾಥಮಿಕ ಶಾಲೆಗಳಲ್ಲಿ 'ಸ್ಮಾರ್ಟ್' ತರಗತಿ ನಿರ್ಮಿಸಲಾಗುವುದು' ಎಂದು ಭರವಸೆ ನೀಡಿದರು.



ಉದಯವಾಹಿನಿ ಚಿತ್ರ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಮಹತ್ವ ಪಡೆದಿದೆ. ತಮ್ಮ ಮಕ್ಕಳು ಗುಣಾತ್ಮಕ ಶಿಕ್ಷಣ ಪಡೆಯಬೇಕು ಎಂಬುದು ಎಲ್ಲಾ ಪಾಲಕರ ಅಪೇಕ್ಷೆಯಾಗಿದೆ. ಮಕ್ಕಳೇ ತಮ್ಮ ಆಸ್ತಿ ಎಂದು ತಂದೆ-ತಾಯಿ ಹೇಳುತ್ತಾರೆ. ಅಂತೆಯೇ ಮಕ್ಕಳು ಸಹ, ಹೆತ್ತವರೇ ನಮ್ಮ ಆಸ್ತಿ ಎನ್ನಬೇಕು. ಅವರ ಆರೋಗ್ಯ ಮತ್ತು ವೃದ್ದಾಪ್ಯ ಜೀವನದ ಕುರಿತಾಗಿ ಚಿಂತನೆ ನಡೆಸಬೇಕು ಎಂದು ಕರೆಕೊಟ್ಟರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ 500ಕ್ಕೂ ಅಧಿಕ ಕೊಠಡಿ ನಿರ್ಮಿಸಲಾಗಿದೆ. ತುಮ್ಮರಗುದ್ದಿ ಗ್ರಾಮಕ್ಕೆ ವಸತಿ ಶಾಲೆ ಮಂಜೂರಾಗಿದ್ದು, 22 ಕೋಟಿ ವೆಚ್ಚದ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. 30 ಕೋಟಿ ವೆಚ್ಚದಲ್ಲಿ ಹಿರೇಬಾಗೇವಾಡಿಯ ವಸತಿ ಶಾಲೆ ನಿರ್ಮಿಸಲಾಗುವುದು' ಎಂದು ತಿಳಿಸಿದರು.

> ವಿದ್ಯಾರ್ಥಿಗಳು ಸ್ಪಷ್ಟ ಗುರಿಯೊಂದಿಗೆ ಅಭ್ಯಾಸ ಮಾಡಿ, ಶಿಸ್ತಿನಿಂದ ಜೀವನ ಸಾಗಿಸಬೇಕು. ಆದರೆ, ಸಾಮಾಜಿಕ ಬದ್ಧತೆ ಮರೆಯಬಾರದು' ಎಂದ ಅವರು, 'ಪಿಯು ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಶೇ 99 ಅಂಕ ಗಳಿಸಿದ ಮುತಗಾ ಗ್ರಾಮದ ವಿದ್ಯಾರ್ಥಿನಿಗೆ ನಾನೇ ಎಂಬಿಬಿಎಸ್ ಕೋರ್ಸ್ ಓದಿಸುತ್ತೇನೆ
> **-ಲಕ್ಷ್ಮೀ ಹೆಬ್ಬಾಳಕರ,** ಸಚಿವೆ

---

### ಕೇಳುವವರು ಯಾರು ಕುಕ್ಕೆ ಭಕ್ತರ ಗೋಳು

# ರಸ್ತೆಗೆ ಬ್ಯಾರಿಕೇಡ್ ಅಡ್ಡ ಇರಿಸಿ ಆಕ್ರೋಶ

• ಉದಯವಾಹಿನಿ ಸುಬ್ರಹ್ಮಣ್ಯ

ಕುಕ್ಕೆ ಸುಬ್ರಹ್ಮಣ್ಯದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಸ್‌ಗಳಲ್ಲಿ ಬೆಂಗಳೂರಿಗೆ ತೆರಳುವ ಪ್ರಯಾಣಿಕರಿಗೆ ಮಾತ್ರವೇ ಆದ್ಯತೆ ನೀಡಿದ ವಿಚಾರವಾಗಿ ಆಕ್ರೋಶಗೊಂಡ ಇತರೆ ಪ್ರಯಾಣಿಕರು ಬಸ್ ನಿಲ್ದಾಣದ ಬಳಿ ಬ್ಯಾರಿಕೇಡ್ ಅಡ್ಡ ಇರಿಸಿ ಬಸ್‌ಗಳ ಸಂಚಾರಕ್ಕೆ ತಡೆ ಒಡ್ಡಿದ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.

ಕುಕ್ಕೆ ಸುಬ್ರಹ್ಮಣ್ಯದಿಂದ ಬೆಂಗಳೂರಿಗೆ ತೆರಳುವ ಬಸ್‌ಗಳಲ್ಲಿ ಸಕಲೇಶಪುರ, ಹಾಸನ, ನಂಜನಗೂಡು, ಮಡಿಕೇರಿ, ಮೈಸೂರು ಕಡೆಗೆ ತೆರಳುವ ಪ್ರಯಾಣಿಕರಿಗೆ ಪ್ರಯಾಣಿಸಲು ಅವಕಾಶ ನೀಡದ ಕಾರಣ ಈ ಬಗ್ಗೆ ಅವಕಾಶ ಸಿಗದ ಹಲವು ಪ್ರಯಾಣಿಕರು ಬಸ್ ಚಾಲಕ, ನಿರ್ವಾಹಕರೊಡನೆ ವಾಗ್ವಾದ ನಡೆಸಿದ್ದು. ಆದರೂ ಅವಕಾಶ ನೀಡದ ಹಿನ್ನಲೆಯಲ್ಲಿ ಆಕ್ರೋಶಗೊಂಡ ಪ್ರಯಾಣಿಕರು ಬಸ್ ನಿಲ್ದಾಣದಿಂದ ಮುಖ್ಯ ರಸ್ತೆಗೆ ಬರುವ ರಸ್ತೆಗೆ ಸಮೀಪದಲ್ಲೇ ಇದ್ದ ಬ್ಯಾರಿಕೇಡ್ ಅಡ್ಡ ಇರಿಸಿದ್ದಾರೆ. ಆದಿ ಸುಬ್ರಹ್ಮಣ್ಯ ಕಡೆಗೆ ತೆರಳುವ ಸ್ಥಳದಲ್ಲೂ ಬ್ಯಾರಿಕೇಡ್ ಅಡ್ಡ ಇರಿಸಿದ್ದರು.



ಉದಯವಾಹಿನಿ ಚಿತ್ರ

ಪರಿಣಾಮ ಸ್ಥಳೀಯ ಹಾಗೂ ದೂರದ ಊರುಗಳಿಗೆ ತೆರಳುವ ಬಸ್‌ಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಇದರಿಂದ ಬಸ್ ನಿಲ್ದಾಣ ಆವರಣದಲ್ಲಿ ಕೆಲಕಾಲ ಗೊಂದಲದ ವಾತಾವರಣ ಉಂಟಾಯಿತು. ಒಂದು ಹಂತದಲ್ಲಿ ಮಾತಿನ ಚಕಮಕಿಯೂ ನಡೆದಿದೆ. ಈ ವೇಳೆ ಸ್ಥಳಕ್ಕೆ ಬಂದ ಸುಬ್ರಹ್ಮಣ್ಯ ಪೊಲೀಸರು ರಸ್ತೆಗೆ ಇರಿಸಿದ ಬ್ಯಾರಿಕೇಡ್ ತೆರವು ಮಾಡಿದರು. ಎಸ್‌ಐ ಕಾರ್ತಿಕ್ ಅವರು ಪ್ರಯಾಣಿಕರನ್ನು ಸಮಾಧಾನ ಪಡಿಸಿದರು.

ಬಸ್ ನಿರ್ವಹಕರಿಗೆ ಬೇರೆ ಕಡೆಯ ಪ್ರಯಣಿಕರನ್ನೂ ಪ್ರಯಣಿಸಲು ಅವಕಾಶ ನೀಡುವಂತೆ ವಿನಂತಿಸಿದರು. ಅಂತಿಮವಾಗಿ ಇತರೆ ಪ್ರಯಾಣಿಕರಿಗೂ ಬೆಂಗಳೂರು ಬಸ್‌ನಲ್ಲೇ ಸಂಚರಿಸಲು ಅವಕಾಶ ನೀಡಿ ಸಮಸ್ಯೆ ಪರಿಹರಿಸಲಾಯಿತು.

---

# ಬಸ್ ಇಲ್ಲದೇ ಬಸವಳಿದ ವಿದ್ಯಾರ್ಥಿನಿಯರು

• ಉದಯವಾಹಿನಿ ಹೊಳೆನರಸೀಪುರ

ಇಲ್ಲಿನ ಕೈಗಾರಿಕಾ ಬಡಾವಣೆಯಲ್ಲಿ ಇರುವ ಸರ್ಕಾರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಬಸ್ ಇಲ್ಲದೇ, ಪರಿತಪಿಸುವಂತಾಗಿದೆ. ರೋಗಿಗಳ ಶುಶೂಷೆ ಮಾಡುವ ವಿದ್ಯಾರ್ಥಿನಿಯರು, ಓಡಾಟದಲ್ಲಿಯೇ ಹೈರಾಣಾಗುತ್ತಿದ್ದಾರೆ.

ಸರ್ಕಾರಿ ನರ್ಸಿಂಗ್ ಕಾಲೇಜಿಗೆ ಕೈಗಾರಿಕಾ ಬಡಾವಣೆಯಲ್ಲಿ ಸುಸಜ್ಜಿತ ಕಟ್ಟಡ ಇದೆ. ಅತ್ಯುತ್ತಮ 240 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಕಾಲೇಜಿನ ವಿದ್ಯಾರ್ಥಿಗಳು ಪ್ರಾಯೋಗಿಕ ತರಬೇತಿಗಾಗಿ ನಿತ್ಯ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋಗಲೇಬೇಕು. ಕಾಲೇಜಿನಿಂದ ಆಸ್ಪತ್ರೆಗೆ ಹೋಗಲು ಸುಮಾರು 2.5 ಕಿ.ಮಿ. ದೂರ ನಡೆಯಬೇಕು. ಮತ್ತೆ ಊಟಕ್ಕೆ ಕಾಲೇಜಿನ ಹಾಸ್ಟೆಲ್‌ಗೆ ಬರಬೇಕು. ಊಟ ಮುಗಿಸಿ, ಮತ್ತೆ ಆಸ್ಪತ್ರೆಗೆ ಹೋಗುವುದು, ಅಲ್ಲಿಂದ ವಾಪಸ್ ಹಾಸ್ಟೆಲ್‌ಗೆ ಬರಬೇಕಾಗಿದೆ. ಹೀಗಾಗಿ ನಿತ್ಯ ಸುಮಾರು 10 ಕಿ.ಮೀ. ನಡೆಯಲೇಬೇಕು.

ಈ ಮೊದಲು ನಮ್ಮನ್ನು ಇಲ್ಲಿಂದ ಕರೆದುಕೊಂಡು ಹೋಗಲು ಕಾಲೇಜಿನ ಬಸ್ ಇರುತ್ತಿತ್ತು. ಬಸ್‌ಗೆ 15 ವರ್ಷ ಕಳೆಯಿತು ಎಂದು ಅದನ್ನು ನಿಲ್ಲಿಸಲಾಗಿದೆ. ಹೀಗಾಗಿ ನಾವು ನಡೆದುಕೊಂಡು ಹೋಗುವುದು ಅನಿವಾರ್ಯವಾಗಿದೆ ಎನ್ನುತ್ತಾರೆ ವಿದ್ಯಾರ್ಥಿಗಳು.



ಉದಯವಾಹಿನಿ ಚಿತ್ರ

> ಹಾಸ್ಟೆಲ್‌ನಿಂದ ಸರ್ಕಾರಿ ಆಸ್ಪತ್ರೆಗೆ 2.5 ಕಿ.ಮೀ. ನಡೆಯಬೇಕು. ಮಧ್ಯಾಹ್ನ ಊಟಕ್ಕೆ ಬರಬೇಕು. ಹೋಗಿ ಬರಲು ನಿತ್ಯ 10 ಕಿ.ಮೀ ನಡೆಯುವಂತಾಗಿದೆ. **– ಶಿಲ್ಪಶ್ರೀ,**
> ನರ್ಸಿಂಗ್ ಕಾಲೇಜು ವಿದ್ಯಾರ್ಥಿನಿ

ಸಾರಿಗೆ ಸಂಸ್ಥೆ ಬಸ್‌ಗಳಂತೆ ಈ ಬಸ್ ಹತ್ತಾರು ಲಕ್ಷ ಕಿ.ಮೀ. ಓಡಿಲ್ಲ. ಟಯರ್‌ಗಳೂ ಚೆನ್ನಾಗಿದೆ. ಬಸ್ ಉತ್ತಮ ಸ್ಥಿತಿಯಲ್ಲಿದೆ. 15 ವರ್ಷಕ್ಕೆ 1.36 ಲಕ್ಷ ಕಿಲೋಮೀಟರ್ ಮಾತ್ರ ಓಡಿದೆ. 15 ವರ್ಷ ಆಗಿದೆ ಎಂಬ ಕಾರಣಕ್ಕೆ ಸರ್ಕಾರಿ ಆದೇಶವೆಂದು ಸುಸಜ್ಜಿತವಾದ ಬಸ್ ನಿಲ್ಲಿಸಿದ್ದಾರೆ. ಈ ಬಸ್ ಇನ್ನೂ 6-7 ಲಕ್ಷ ಕಿ.ಮೀ. ಓಡುವ ಸಾಮರ್ಥ್ಯ ಇದೆ ಎಂದು ಖಾಸಗಿ ಮೆಕ್ಯಾನಿಕ್‌ಗಳು ಹೇಳುತ್ತಾರೆ. ಈ ಬಸ್‌ಗೆ ಗುತ್ತಿಗೆ ಆಧಾರದ ಮೇಲೆ ಚಾಲಕರನ್ನು ನೇಮಿಸಿಕೊಂಡಿದ್ದು, ಅವರೂ ಚಾಲಕರ ಕೆಲಸ ಬಿಟ್ಟು ವಾಚಮನ್ ಕೆಲಸ ಮಾಡುತ್ತಿದ್ದಾರೆ. ಬಸ್ ನಿಲ್ಲಿಸಿ ಇಷ್ಟು ತಿಂಗಳಾದರೂ ಬೇರೆ ಬಸ್ ನೀಡಿಲ್ಲ. ಇದರಿಂದಾಗಿ ತೊಂದರೆ ಆಗಿದೆ.

ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಅನೇಕರು ಕಾಲೇಜು ಬಿಟ್ಟು ಹೋಗಲು ನಿರ್ಧರಿಸಿದ್ದಾರೆ ಎಂದು ವಿದ್ಯಾರ್ಥಿಗಳು ಹೇಳುತ್ತಾರೆ.

> ಕಾಲೇಜಿಗೆ ಹೊಸ ಬಸ್ ಬಂದು ತಿಂಗಳಾಗಿದೆ. ಆರ್‌ಟಿಒ ಕಚೇರಿಯಲ್ಲಿ ನೋಂದಣಿ ಮಾಡಿಕೊಡದ ಕಾರಣ ಬಸ್ ಪಡೆದುಕೊಳ್ಳಲು ಸಾಧ್ಯವಾಗಿಲ್ಲ.
> **– ಚಂದ್ರಶೇಖರ್ ಹಡಪದ್,**
> ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ

---

### • ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹುತೇಕ ಸರ್ಕಾರಿ ಶಾಲೆಗಳ ಶೌಚಾಲಯಗಳ ಸ್ಥಿತಿ ಶೋಚನೀಯವಾಗಿದೆ

# ಸರ್ಕಾರಿ ಶಾಲೆಗಳ ಶೌಚಾಲಯ: ನಿರ್ವಹಣೆ ಕೊರತೆಯಿಂದ ಅವ್ಯವಸ್ಥೆ

• ಉದಯವಾಹಿನಿ, ಮುಂಡರಗಿ

ಪಟ್ಟಣವು ಸೇರಿದಂತೆ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹುತೇಕ ಸರ್ಕಾರಿ ಶಾಲೆಗಳ ಶೌಚಾಲಯಗಳ ಸ್ಥಿತಿ ಶೋಚನೀಯವಾಗಿದ್ದು, ಶೌಚಾಯಗಳ ದುಃಸ್ಥಿತಿಯಿಂದಾಗಿ ವಿದ್ಯಾರ್ಥಿಗಳು ಪರದಾಡುವಂತಾಗಿದೆ.

ತಾಲ್ಲೂಕಿನಾದ್ಯಂತ ಒಟ್ಟು 99 ಸರ್ಕಾರಿ ಪ್ರಾಥಮಿಕ ಹಾಗೂ 18 ಪ್ರೌಢಶಾಲೆಗಳಿದ್ದು, ಬಹುತೇಕ ಶಾಲೆಗಳ ಶೌಚಾಲಯಗಳು ದುರಸ್ತಿಯಲ್ಲಿವೆ. ಕೆಲವು ಶಾಲೆಗಳಲ್ಲಿ ಕಾಟಾಚಾರಕ್ಕೆ ಅಥವಾ ತೋರಿಕೆಗೆ ಮಾತ್ರ ಶೌಚಾಲಯಗಳಿದ್ದು, ಬಾಲಕ, ಬಾಲಕಿಯರಿಬ್ಬರೂ ಶೌಚಕ್ಕೆ ಬಯಲನ್ನೇ ಆಶ್ರಯಿಸಬೇಕಿದೆ.

ಕೆಲವು ಶಾಲೆಗಳಲ್ಲಿ ಶೌಚಾಲಯಗಳ ಕಟ್ಟಡಗಳು ಸಮರ್ಪಕವಾಗಿದ್ದರೂ ಅವುಗಳಿಗೆ ನೀರು, ವಿದ್ಯುತ್ ಮೊದಲಾದ ಮೂಲಸೌಲಭ್ಯಗಳು ಇಲ್ಲದಂತಾಗಿದೆ. ಇದರಿಂದಾಗಿ ಅಂತಹ ಶಾಲೆಗಳಲ್ಲಿ ಶೌಚಾಲಯಗಳು ಇದ್ದೂ ಇಲ್ಲದಂತಾಗಿವೆ.

ಶೌಚಾಲಯ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಪ್ರತಿ ಶೌಚಾಲಯಗಳ ಮೇಲೆ ನೀರಿನ ಟ್ಯಾಂಕ್, ಪ್ರತ್ಯೇಕ ಬಾಗಿಲು, ಕಿಟಕಿ, ಚಿಲಕ, ನಳ ಮೊದಲಾದವುಗಳನ್ನು ಅಳವಡಿಸಲಾಗಿರುತ್ತದೆ.

ಕೆಲ ದಿನಗಳ ನಂತರ ಕೆಲವು ದುಷ್ಕರ್ಮಿಗಳು ಅವುಗಳನ್ನು ನಾಶ ಮಾಡಿರುತ್ತಾರೆ. ದುರಸ್ತಿಗೆ ಪ್ರತ್ಯೇಕ ಅನುದಾನವಿಲ್ಲದ್ದರಿಂದ ಅವುಗಳ ದುರಸ್ತಿ ಕಾರ್ಯ ನನೆಗುದಿಗೆ ಬೀಳುತ್ತದೆ. ಅನ್ಯ ಮಾರ್ಗವಿಲ್ಲದೇ ವಿದ್ಯಾರ್ಥಿಗಳು ಶೌಚಕ್ಕೆ ಬಯಲಿಗೆ ತೆರಳಬೇಕಾಗುತ್ತದೆ.

ಪಟ್ಟಣದ ರಾಜ್ಯ ಹೆದ್ದಾರಿಗೆ ಅಂಟಿಕೊಂಡಿರುವ ಕೋಟೆ ಸರ್ಕಾರಿ ಶಾಲೆಯಲ್ಲಿ ಸಮರ್ಪಕವಾದ ಶೌಚಾಲಯವಿಲ್ಲ. ಅಕ್ಕ ಪಕ್ಕದಲ್ಲಿ ಬಯಲೂ ಇಲ್ಲ. ಇದರಿಂದಾಗಿ ಅಲ್ಲಿಯ ನೂರಾರು ವಿದ್ಯಾರ್ಥಿಗಳು ಶೌಚಕ್ಕೆ ಪರದಾಡುವಂತಾಗಿದೆ. 3 ತಿಂಗಳ ಹಿಂದೆ ಶಾಸಕರ ಜನಸಂಪರ್ಕ ಸಭೆಯಲ್ಲಿ ಈ ಕುರಿತು ಸಾರ್ವಜನಿಕರು ಮನವಿ ಸಲ್ಲಿಸಿದ್ದರೂ ಈವರೆಗೂ ಶೌಚಾಲಯದ ಸಮಸ್ಯೆ ನಿವಾರಣೆಯಾಗಿಲ್ಲ. ಗ್ರಾಮೀಣ ಭಾಗದ ಬಹುತೇಕ ಶಾಲೆಗಳ ಶೌಚಾಲಯಗಳು ಹಾಳಾಗಿದ್ದು, ಅದನ್ನು ನಿರ್ವಹಿಸುವುದು ಅಲ್ಲಿಯ ಸಿಬ್ಬಂದಿಗೆ ಸವಾಲಿನ ಕೆಲಸವಾಗಿದೆ.



## ಶೌಚಾಲಯ ದುರಸ್ತಿಗೆ ಕ್ರಮ

ಶಾಲಾ ಶೌಚಾಲಯ ಸಮಸ್ಯೆ ನಿವಾರಿಸುವ ಕುರಿತಂತೆ ಈಚೆಗೆ ರಾಜ್ಯಮಟ್ಟದ ಸಭೆ ನಡೆಯಿತು. 10 ಸಾವಿರದೊಳಗೆ ದುರಸ್ತಿಗೊಳ್ಳಬಹುದಾದ ಶಾಲಾ ಶೌಚಾಲಯಗಳನ್ನು ಎ ಗ್ರೇಡ್ 25 ಸಾವಿರ ಮೇಲ್ಪಟ್ಟು ದುರಸ್ತಿಗೊಳಿಸಬಹುದಾದ ಶೌಚಾಲಯಗಳನ್ನು ಬಿ ಗ್ರೇಡ್ 50 ಸಾವಿರ ಮೇಲ್ಪಟ್ಟು ದುರಸ್ತಿಗೊಳಿಸಬಹುದಾದ ಶೌಚಾಲಯಗಳನ್ನು ಸಿ ಗ್ರೇಡ್ ಹಾಗೂ 1 ಲಕ್ಷ ಮೇಲ್ಪಟ್ಟು ದುರಸ್ತಿಗೊಳಿಸ ಬಹುದಾದ ಶೌಚಾಲಯಗಳನ್ನು ಡಿ ಗ್ರೇಡ್‌ಗಳನ್ನಾಗಿ ವಿಂಗಡಿಸಲಾಗಿದೆ. 10 ಸಾವಿರದೊಳಗಿನ ದುರಸ್ತಿ ಕಾರ್ಯಕೈಗೊಳ್ಳಲು ತಾಲ್ಲೂಕು ಸಾಕ್ಷರ ಇಲಾಖೆಗೆ ಅವಕಾಶ ನೀಡಲಾಗಿದ್ದು ಅದರ ಅಡಿಯಲ್ಲಿ ಈಗಾಗಲೇ ತಾಲ್ಲೂಕಿನ 13 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಗಂಗಾಧರ ಅಣ್ಣಿಗೇರಿ ತಿಳಿಸಿದರು.



## ನಿರ್ವಹಣೆ ಯಾರ ಹೊಣೆ?

ತಾಲ್ಲೂಕಿನ ಬರದೂರು ಗ್ರಾಮ ಸೇರಿದಂತೆ ಕೆಲವು ಶಾಲೆಗಳಲ್ಲಿ ಉತ್ತಮ ಹಾಗೂ ಮೂಲಸೌಲಭ್ಯಗಳನ್ನು ಒಳಗೊಂಡ ಶೌಚಾಲಯಗಳಿವೆ. ಆದರೆ ಅವುಗಳನ್ನು ನಿಯಮಿತವಾಗಿ ಯಾರು ಸ್ವಚ್ಛಗೊಳಿಸಬೇಕು. ಹಾಗೂ ಅವುಗಳನ್ನು ಯಾರು ನಿರ್ವಹಿಸಬೇಕು ಎನ್ನುವುದು ಶಾಲಾ ಸಿಬ್ಬಂದಿಗೆ ದೊಡ್ಡ ಯಕ್ಷ ಪ್ರಶ್ನೆಯಾಗಿದೆ. ಅದನ್ನು ನಿವಾರಿಸುವ ನಿಟ್ಟಿನಲ್ಲಿ ತಾಲ್ಲೂಕು ಶಿಕ್ಷಣ ಇಲಾಖೆ ಕಳೆದ ವರ್ಷ ಪ್ರತೀ ಶಾಲೆಗೆ 15-18 ಸಾವಿರ ವಿಶೇಷ ಅನುದಾನ ನೀಡಿತ್ತು.

> ತಾಲ್ಲೂಕಿನಾದ್ಯಂತ ಒಟ್ಟು 44 ಶಾಲೆಗಳ ಶೌಚಾಲಯಗಳು ಹಾಳಾಗಿದ್ದವು ಅವುಗಳಲ್ಲಿ ಎ ಗ್ರೇಡ್ ವ್ಯಾಪ್ತಿಯ 13 ಶೌಚಾಲಯಗಳ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ.
> **– ಎಚ್.ಎಂ.ಫಡ್ನಶಿ,** ಬಿಇಒ ಮುಂಡರಗಿ

---

## ಮಿನಿ ನ್ಯೂಸ್

### ಮಳೆ ಬಿರುಸು: ತುಂಗೆಯ ಹರಿವು ಹೆಚ್ಚಳ

• ಉದಯವಾಹಿ ಶೃಂಗೇರಿ

ರಾತ್ರಿಯಿಂದ ಮಳೆಯ ಆರ್ಭಟ ಹೆಚ್ಚಾಗಿದ್ದು, ಭಾನುವಾರ ತುಂಗಾ ನದಿಯ ನೀರಿನ ಮಟ್ಟ ಏರಿಕೆಯಾಗಿದೆ. ಶೃಂಗೇರಿ ಸುತ್ತಮುತ್ತಲಿನ ಕೆಲವು ಪ್ರದೇಶಗಳು ಜಲಾವೃತವಾಗಿವೆ.

ತಾಲ್ಲೂಕಿನಲ್ಲಿ ಇದುವರೆಗೆ 1071.2 ಮಿ.ಮೀ ಮಳೆಯಾಗಿದ್ದು, ಶೃಂಗೇರಿಯಲ್ಲಿ 47.2 ಮಿ.ಮೀ, ಕಿಗ್ಗಾದಲ್ಲಿ 63 ಮಿ.ಮೀ, ಕೆರೆಕಟ್ಟೆಯಲ್ಲಿ 123 ಮಿ.ಮೀ ಮಳೆಯಾಗಿದೆ.

ಶೃಂಗೇರಿಯಿಂದ ಮಂಗಳೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 169ರ ನೆಮ್ಮಾರ್‌ನ ಸಾಲುಮರ ಸಮೀಪ ಧರೆ ಕುಸಿದು ರಸ್ತೆ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡಿದ್ದು, ಮಣ್ಣು ತೆರವುಗೊಳಿಸಲಾಗಿದೆ. ಆಗಾಗ ಮಣ್ಣು ಕುಸಿಯುವುದರಿಂದ ಸಂಜೆ 5.30 ರಿಂದ ಬೆಳಿಗ್ಗೆ 8ರವರೆಗೆ ವಾಹನ ಸಂಚಾರವನ್ನು ತಹಶೀಲ್ದಾರ್ ನಿರ್ಬಂಧಿಸಿದ್ದಾರೆ. ನಿರಂತರ ಮಳೆಯಿಂದ ಹಲವು ಕಡೆ ನೀರು ತುಂಬಿದ್ದು, ಗ್ರಾಮೀಣ ಭಾಗದ ರಸ್ತೆಗಳು, ಹಳ್ಳಕೊಳ್ಳಗಳು, ಭತ್ತದ ಗದ್ದೆಗಳು, ತೋಟಗಳು ನೀರಿನಿಂದ ಆವೃತ್ತಗೊಂಡಿವೆ. ತಾಲ್ಲೂಕಿನ ಕೆರೆ ಗ್ರಾಮ ಪಂಚಾಯಿತಿಯ ಶಿರ್ಲು, ಹಾದಿ, ಕೆರೆ, ಸುಂಕದಮಕ್ಕಿ, ನಿಲಂದೂರು, ಕುಂಬ್ರಗೋಡು, ಕೂಗೋಡು ಗ್ರಾಮಗಳ ನಿವಾಸಿಗಳು ಆಸ್ಪತ್ರೆಗೆ ಬರಲು ತೊಂದರೆ ಅನುಭವಿಸುವಂತಾಗಿದೆ.

### ಮಲಪ್ರಭೆಯ ರಭಸಕ್ಕೆ ಕೊಚ್ಚಿಹೋದ ಸೇತುವೆ

• ಉದಯವಾಹಿ ಖಾನಾಪುರ

ತಾಲ್ಲೂಕಿನ ಕುಸಮಳಿ ಬಳಿ ಮಲಪ್ರಭಾ ನದಿಗೆ ಅಡ್ಡಲಾಗಿ ಕಟ್ಟಿದ್ದ ತಾತ್ಕಾಲಿಕ ಸೇತುವೆ ಭಾನುವಾರ ಮಲಪ್ರಭಾ ನದಿ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದೆ. ಜೂ.8ರಂದು ಇದೇ ಸೇತುವೆಯ ಪಕ್ಕದ ರಸ್ತೆಯಲ್ಲಿ ಭೂಕುಸಿತ ಉಂಟಾಗಿತ್ತು. ಅಲ್ಲದೇ ಕಳೆದ ಮೇ.25ರಂದು ಸೇತುವೆಯ ಮೇಲಿನ ಭಾಗದಲ್ಲಿ ಭಾರೀ ಪ್ರಮಾಣದಲ್ಲಿ ಮಳೆ ಸುರಿದ ಕಾರಣ ಮಲಪ್ರಭಾ ನದಿಯಲ್ಲಿ ಪ್ರವಾಹ ಏರ್ಪಟ್ಟು ಸೇತುವೆಯ ಪಕ್ಕದಲ್ಲಿ ನೀರು ಹರಿದು ಹೋಗಿ ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗಿನಿಂದಲೇ ಈ ಸೇತುವೆ ಮೇಲೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಈಗ ಸೇತುವೆ ಕೊಚ್ಚಿಕೊಂಡು ಹೋಗಿದ್ದರಿಂದ ಮೋರನೇ ಬಾರಿ ಬೆಳಗಾವಿ-ಚೋರ್ಲಾ ರಾಜ್ಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ವ್ಯತ್ಯಯ ಉಂಟಾಗಿದೆ.

### ವೇಶ್ಯವಾಟಿಕೆ ಚಟುವಟಿಕೆ: ಇಬ್ಬರ ಬಂಧನ

• ಉದಯವಾಹಿನಿ ಉಜಿರೆ

ವೇಶ್ಯವಾಟಿಕೆ ಚಟುವಟಿಕೆ ಶಂಕೆ ಮೇಲೆ ಬೆಳ್ತಂಗಡಿ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಸುಬ್ಬಾಪುರ್ ಮಠ ನೇತೃತ್ವದಲ್ಲಿ ಪೊಲೀಸರು ಶನಿವಾರ ರಾತ್ರಿ, ಬೆಳ್ತಂಗಡಿ ಮತ್ತು ಉಜಿರೆಯಲ್ಲಿರುವ ಖಾಸಗಿ ವಸತಿಗೃಹಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

ಉಜಿರೆಯ ಬಸ್‌ನಿಲ್ದಾಣದ ಬಳಿ ಇರುವ ಶ್ರೀದುರ್ಗಾ ವಸತಿಗೃಹದಲ್ಲಿ ಯುವತಿಯನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ. ವಸತಿಗೃಹದ ಮ್ಯಾನೇಜರ್ ಸತೀಶ್ ಪೂಜಾರಿ ಮತ್ತು ಕನ್ಯಾಡಿ ನಿವಾಸಿ ಯೋಗೀಶ್ ಆಚಾರ್ಯ ಎಂಬ ಇಬ್ಬರನ್ನು ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ. ವಸತಿಗೃಹದ ಮಾಲೀಕ ರಮೇಶ್ ಶೆಟ್ಟಿ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

### ಶುಭ ಸಮಾರಂಭದಲ್ಲೂ ರಕ್ತದಾನ ಶಿಬಿರ ನಡೆಯಲಿ: ಎಚ್.ಎಂ.ಶಿವಕುಮಾರ್

• ಉದಯವಾಹಿನಿ ಸಾಗರ

ಯಾರಿಗೆ ಯಾವ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಬೀಳುತ್ತದೆ ಎಂದು ಹೇಳಲಾಗದು. ರಕ್ತದ ಕೊರತೆಯನ್ನು ನೀಗಿಸಲು ಶುಭ ಸಮಾರಂಭಗಳಲ್ಲೂ ರಕ್ತದಾನ ಶಿಬಿರ ಆಯೋಜಿಸುವ ಸಮಾಜಮುಖಿ ಧೋರಣೆ ಬೆಳೆಯಬೇಕು ಎಂದು ರೋಟರಿ ರೆಡ್ ಕ್ರಾಸ್ ರಕ್ತನಿಧಿ ಕೇಂದ್ರದ ಅಧ್ಯಕ್ಷ ಎಚ್.ಎಂ.ಶಿವಕುಮಾರ್ ಹೇಳಿದರು. ಇಲ್ಲಿನ ರೋಟರಿ ರಕ್ತನಿಧಿ ಕೇಂದ್ರದಲ್ಲಿ ಎಲ್ ಬಿ ಮತ್ತು ಎಸ್ ಬಿಎಸ್ ಕಾಲೇಜು ವತಿಯಿಂದ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದವರಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುವುದರಿಂದ ಆರೋಗ್ಯಕ್ಕೆ ಯಾವುದೆ ತೊಂದರೆ ಇಲ್ಲ. ಆದಾಗ್ಯೂ ಆರೋಗ್ಯವಂತರು ಕೂಡ ರಕ್ತದಾನ ಮಾಡಲು ಹಿಂಜರಿಕೆ ಮನೋಭಾವ ತೋರುವುದು ಸರಿಯಲ್ಲ. ರಕ್ತದಾನಿಗಳ ಸಂಖ್ಯೆ ಹೆಚ್ಚಾದಾಗ ಮಾತ್ರ ರಕ್ತನಿಧಿ ಕೇಂದ್ರ ಸುಲಲಿತವಾಗಿ ಕಾರ್ಯ ನಿರ್ವಹಿಸಬಹುದು ಎಂದರು.

ರೋಟರಿ ರಕ್ತನಿಧಿ ಕೇಂದ್ರದ ಡಾ.ಬಿ.ಜಿ.ಸಂಗಮ್, ಎಂ.ಕೆ. ಶಾಂತಕುಮಾರ್, ಎಲ್ ಬಿ ಕಾಲೇಜಿನ ಎನ್ ಸಿಸಿ ಅಧಿಕಾರಿ ನೂತನ್ ಹಂದಿಗೋಡು ಇದ್ದರು.

### ಅಮೃತ್ ಯೋಜನೆ ಮಳೆ ನಡುವೆ ಭರದ ಕಾಮಗಾರಿ

• ಉದಯವಾಹಿನಿ ಮಲೇಬೆನ್ನೂರು

ಪಟ್ಟಣದ ಜನತೆಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಮಹತ್ವಾಕಾಂಕ್ಷಿ ರೂ 66 ಕೋಟಿ ವೆಚ್ಚದ 'ಅಮೃತ್ ಯೋಜನೆ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ ಮಳೆ ನಡುವೆ ಭರದಿಂದ ಸಾಗಿದೆ. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆ ಆಶ್ರಯದಲ್ಲಿ ಕರ್ನಾಟಕ ರಾಜ್ಯ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿ ಉಸ್ತುವಾರಿಯಲ್ಲಿ ಕಾಮಗಾರಿ ಸಾಗಿದೆ.

ಹೈದರಾಬಾದ್ ಮೂಲ ಎಸ್‌ಎಂಸಿ ಇನ್ಫ್ರಾಸ್ಟ್ರಕ್ಚರ್ ಹಾಗೂ ಸಿವಿಕ್ ಕಂಪನಿ ಕಾಮಗಾರಿ ವಹಿಸಿಕೊಂಡಿದೆ. 54 ಕಿ.ಮೀ ನೀರು ವಿತರಣೆ ಕೊಳವೆ ಮಾರ್ಗ ಅಳವಡಿಸಬೇಕಿದ್ದು 18 ಕಿ.ಮೀ ಎರಡೂವರೆ ಇಂಚಿನ ಎಚ್‌ಡಿಪಿಇ ಪೈಪ್‌ಗಳನ್ನು ಅಳವಡಿಸಲಾಗಿದೆ' ಎಂದು ಸಹಾಯಕ ಎಂಜಿನಿಯರ್ ಪ್ರಕಾಶ್ ಸಜ್ಜನ್ ಮಾಹಿತಿ ನೀಡಿದರು.

ಕೆಲಸ ಹೊಳೆಯಲ್ಲಿ ನೀರಿನ ಪ್ರಮಾಣ ಹೆಚ್ಚಾದ ಕಾರಣ ತುಂಗಭದ್ರಾ ನದಿ ಜಾಕ್‌ವೆಲ್ ಕಾಮಗಾರಿ ಬುನಾದಿ ಸ್ಥಗಿತಗೊಂಡಿದೆ. ಮೇಲ್ಮಟ್ಟದ ಜಲ ಸಂಗ್ರಹಾಗಾರ ನಿವೇಶನ ನಿಗದಿಯಾಗಿಲ್ಲ, ಚಿಕ್ಕಪುಟ್ಟ ಸಮಸ್ಯೆ ಹೊರತುಪಡಿಸಿದರೆ ಸುಗಮವಾಗಿ ಸಾಗಿದೆ. ರೂಪಿಸಿರುವ ಯೋಜನೆಯಂತೆ 2025 ಮಾರ್ಚ್‌ಯೊಳಗೆ ಕಾರ್ಯಗತವಾಗಬೇಕು' ಎಂದರು. ಶ್ರಾವಣ ಮಾಸ, ಗಣೇಶೋತ್ಸವ, ದಸರಾ ಹಬ್ಬ ಇದ್ದು ಪಟ್ಟಣದೊಳಗಿನ ಕೊಳವೆಮಾರ್ಗ ಅಳವಡಿಸುವ ಕೆಲಸ ತುರ್ತಾಗಿ ಮುಗಿಸಲು ನಾಗರಿಕರು ಕೋರಿದರು. ಮಳೆಗಾಲ ಆರಂಭವಾಗಿದ್ದು ಗುಂಡಿ ತೆಗೆದು ಬಿಡಬೇಡಿ ಎಂದರು. ಪಟ್ಟಣದ ನಾಗರಿಕರಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಸರ್ಕಾರದ ಯೋಜನೆ ಯೋಜನೆ ಕೆಲಸ ಸಮರ್ಪಕ ರೀತಿ ಮಾಡಿ. ಕಾಮಗಾರಿ ಗುಣಮಟ್ಟ ಕಾಪಾಡಿ' ಎಂದು ಪುರಸಭೆ ಅಧ್ಯಕ್ಷ ಬಿ. ಹನುಮಂತಪ್ಪ ಸೂಚಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಇಂದು ನೀವು ಕುರುಡು ಪ್ರೀತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಇಂದು ನೀವು ಒಬ್ಬ ಗುಪ್ತ ಎದುರಾಳಿಯನ್ನು ಹೊಂದಿರುತ್ತೀರಿ ಅವರು ನಿಮ್ಮನ್ನು ತಪ್ಪಾಗಿ ಸಾಬೀತುಪಡಿಸುವುದನ್ನು ಪ್ರೀತಿಸುತ್ತಾರೆ.

**ವೃಷಭ** ಖಿನ್ನತೆಯನ್ನು ಹೊಡೆದೋಡಿಸಿ ? ಇದ ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

**ಮಿಥುನ** ಖಂಡಿತವಾಗಿಯೂ ಆರೋಗ್ಯದ ಆರೈಕೆಯ ಅಗತ್ಯವಿದೆ. ಹಣದ ನಷ್ಟವು ಸಂಭವಿಸಬಹುದು. ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎಷ್ಟು ಜಾಗರೂಕರಾಗಿರುತ್ತೀರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ.

**ಕರ್ಕಾಟಕ** ಮಾನಸಿಕ ಶಾಂತಿಗಾಗಿ ಒತ್ತಡವನ್ನು ಪರಿಹರಿಸಿ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತವೆ. ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ. ಪ್ರಣಯದ ನಡತೆಗಳು ಫಲ ನೀಡುವುದಿಲ್ಲ.

**ಸಿಂಹ** ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನಿಮ್ಮ ಮೂಲಕ ಹಣವನ್ನು ಉಳಿಸಲು ಮಾಡಲಾಗಿರುವ ಪ್ರಯತ್ನವು ಇಂದು ವಿಫಲವಾಗಬಹುದು.

**ಕನ್ಯಾ** ಕುಟುಂಬದ ವೈದ್ಯಕೀಯ ವೆಚ್ಚದಲ್ಲಿ ಹೆಚ್ಚಳವನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ತುಲಾ** ಜೀವನದೆಡೆಗೆ ಉದಾರವಾದ ಮನೋಭಾವ ಹೊಂದಿ. ದೂರು ನೀಡುವುದು ಮತ್ತು ನಿಮ್ಮ ಜೀವನಮಟ್ಟದ ಬಗೆಗೆ ಅಸಮಾಧಾನ ಹೊಂದುವುದರಿಂದ ಯಾವುದೇ ಪ್ರಯೋಜನವಿಲ್ಲ.

**ವೃಶ್ಚಿಕ** ಇತ್ತೀಚೆಗೆ ನಿಮಗೆ ಹತಾಶೆಯೆನಿಸುತ್ತಿದ್ದಲ್ಲಿ ? ಇಂದು ಸರಿಯಾದ ಆಲೋಚನೆಗಳು ಹಾಗೂ ಕಾರ್ಯಗಳು ನಿಮಗೆ ಅಗತ್ಯವಿರುವ ಸಮಾಧಾನವನ್ನು ತರುತ್ತವೆ ಎಂದು ನೀವು ನೆನಪಿಡಬೇಕು.

**ಧನಸ್ಸು** ನೀವು ಗಂಭೀರ ತೊಂದರೆಗಳನ್ನು ಎದುರಿಸಲು ಸಾಧ್ಯತೆಯುರುವುದರಿಂದ ನಿಮ್ಮನ್ನು ನಿಯಂತ್ರಿಸಿಕೊಳ್ಳಿ. ವಿಶೇಷವಾಗಿ ಚಿಣ್ಣ ಹುಚ್ಚಲ್ಲದೇ ಬೇರೇನೂ ಅಲ್ಲದ ನಿಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಿ.

**ಮಕರ** ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರ್ತಿಸಲು ಒಂದು ಅನುಕೂಲಕರ ದಿನ. ಪ್ರೀತಿಪಾತ್ರರು ಬದ್ಧತೆಯನ್ನು ಬಯಸುತ್ತಾರೆ ನೀವು ಕಾಯ್ದುಕೊಳ್ಳಲು ಕಷ್ಟವಾಗುವ ಭರವಸೆಯನ್ನು ನೀಡಬೇಡಿ.

**ಕುಂಭ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ.

**ಮೀನ** ನೀವು ಕಛೇರಿಯಲ್ಲಿ ಹೆಚ್ಚು ಸಮಯ ಕಳೆದರೆ ನಿಮ್ಮ ಮನೆಯ ಜೀವನಕ್ಕೆ ಹಾನಿಯಾಗಬಹುದು. ಇಂದು ನಿಮ್ಮ ಪ್ರೇಮಿ ನಿಮ್ಮ ಮಾತುಗಳನ್ನು ಕೇಳುವುದಕ್ಕಿಂತ ತನ್ನ ಮಾತುಗಳನ್ನು ಹೇಳಲು ಇಷ್ಟಪಡುತ್ತಾನೆ.

# ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಹೆದ್ದಾರಿ ಬದಿಯ ತ್ಯಾಜ್ಯ

• ಉದಯವಾಹಿನಿ ಚಿಕ್ಕೋಡಿ

ಪಟ್ಟಣದ ಹೊರವಲಯದಲ್ಲಿ ನಿಪ್ಪಾಣಿ-ಮುಧೋಳ ಹಾಗೂ ಜೇವರ್ಗಿ-ಸಂಕೇಶ್ವರ ರಾಜ್ಯ ಹೆದ್ದಾರಿ ಬದಿಯಲ್ಲಿ ಹೊಂದಿಕೊಂಡು ತ್ಯಾಜ್ಯವನ್ನು ಸುರಿದು ಹೋಗುತ್ತಿರುವುದರಿಂದ ವಾಹನ ಸವಾರರು ಹಾಗೂ ಬೆಳಿಗ್ಗೆ ವಾಯುವಿಹಾರಕ್ಕೆ ಹೋಗುವ ಸಾರ್ವಜನಿಕರು ಪರದಾಡುವಂತಾಗಿದೆ. ಹೆದ್ದಾರಿ ಬದಿಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗುವ ಸ್ಥಳದಲ್ಲಿಯೇ ತ್ಯಾಜ್ಯ ಹಾಕಿದ್ದರಿಂದ ನೀರು ನಿಂತು ರಸ್ತೆ ಕೆಲವೇ ದಿನಗಳಲ್ಲಿ ಹಾಳಾಗುವ ಸಾಧ್ಯತೆ ಇದೆ.

ಪಟ್ಟಣದ ಹೊರವಲಯದ ನಾಲ್ಕೂ ಕಡೆಗಳಲ್ಲಿ ರಸ್ತೆಗೆ ಹೊಂದಿಕೊಂಡಂತೆ ತ್ಯಾಜ್ಯದ ಗುಡ್ಡೆಯನ್ನು ಹಾಕುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಅದರಲ್ಲೂ ಕಳೆದ ಒಂದು ತಿಂಗಳಿಂದ ಪೇಟೆಯ ಅತಿಕ್ರಮಣ ತೆರವಿನ ಬಳಿಕ ಕಲ್ಲು ಮಣ್ಣಿನ ಗುಡ್ಡೆಗಳನ್ನು ಕಟ್ಟೂರು ರಸ್ತೆಗೆ ಹೊಂದಿಕೊಂಡ ಟೆನ್ನಿಸ್ ಕೋರ್ಟ್ ಬಳಿಯಲ್ಲಿ ಕಾಣಬಹುದಾಗಿದೆ. ರಸ್ತೆಗೆ ಹೊಂದಿಕೊಂಡೇ ಕಲ್ಲು ಮಣ್ಣಿನ ಗುಡ್ಡೆಗಳನ್ನು ಹಾಕಿದ್ದರಿಂದ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಪ್ರಯಾಣ ಮಾಡಬೇಕಿದೆ.

ಇನ್ನು ಕೆಲವೆಡೆ ಕಡೆಗೆ ಕೊಳೆತ ಆಹಾರ ಪದಾರ್ಥಗಳು, ಕೋಳಿ ಮಾಂಸದ ಉಳಿಕೆ, ಮಕ್ಕಳಿಗೆ ಹಾಕುವ ಪ್ಯಾಂಪರ್ಸ್, ತೆಂಗಿನ ಚಿಪ್ಪು ಮುಂತಾದವುಗಳನ್ನು ರಸ್ತೆ ಬದಿಯಲ್ಲಿ ಹಾಕಲಾಗುತ್ತಿದೆ. ಕೆಲವು ಕಡೆಗೆ ಸತ್ತ ಪ್ರಾಣಿಗಳ ಕಳೇಬರ, ಇನ್ನು ಕೆಲವು ಕಡೆಗೆ ಮೃತರಾದವರ ಅಳಿದುಳಿದ ಹಾಸಿಗೆ, ಹೊದಿಕೆ, ಗಾದಿ, ಕಸ ಮುಂತಾದವುಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿ ರಸ್ತೆ ಬದಿಯಲ್ಲಿ ಬಿಸಾಕಲಾಗುತ್ತಿದೆ.

ಪಟ್ಟಣಕ್ಕೆ ಆಗಮಿಸುವವರಿಗೆ 4 ದಿಕ್ಕುಗಳಲ್ಲಿ ತ್ಯಾಜ್ಯದಿಂದ ದುರ್ನಾತ ಬೀರುತ್ತಿದ್ದು, ಪ್ರಯಾಣಿಕರು, ಸವಾರರು ಮೂಗು ಮುಚ್ಚಿಕೊಂಡು ಸಂಚರಿಸಬೇಕಾದ ಅನಿವಾರ್ಯತೆ ಇದೆ. ಟೆನ್ನಿಸ್ ಕೋರ್ಟ್ ಬಳಿಯಲ್ಲಿ ಪ್ರಾಣಿಯೊಂದರ ಕಳೆಬರವನ್ನು ಯಾರೋ ಎಸೆದು ಹೋಗಿದ್ದರಿಂದ ಅಲ್ಲಿ ದುರ್ನಾತದಿಂದ ಜನ ಮೂಗಯ ಮುಚ್ಚಿಕೊಂಡು ಓಡಾಡುವಂತಾಗಿದೆ. ಈ ಮಾರ್ಗದಲ್ಲಿ ಸಂಚರಿಸುವವರಿಗೆ ಕಳೆದೊಂದು ವಾರದಿಂದ ನಿತ್ಯ ನರಕ ದರ್ಶನವಾಗುತ್ತಿದೆ.


ಉದಯವಾಹಿನಿ ಚಿತ್ರ

ಪಟ್ಟಣದ ಸುತ್ತಮುತ್ತಲೂ ಇರುವ ಬೆಟ್ಟ ಗುಡ್ಡದ ಪ್ರದೇಶದ ಬಯಲು ಜಾಗೆಯಲ್ಲಿ ಕುಡುಕರ ಹಾವಳಿ ಹೆಚ್ಚಾಗಿದ್ದು, ಕುಡಿದ ಮದ್ಯದ ಬಾಟಲಿಗಳನ್ನು ರಸ್ತೆ ಬದಿಯಲ್ಲಿಯೇ ಎಸೆದು ಹೋಗುತ್ತಾರೆ. ಬೆಳಿಗ್ಗೆ ಹಾಗೂ ಸಂಜೆ ವಾಯುವಿಹಾರಕ್ಕೆ ತೆರಳುವ ಸಾರ್ವಜನಿಕರು ಗಾಜಿನ ಚೂರುಗಳು, ಮದ್ಯದ ಪಾಕೆಟ್ ಎಲ್ಲೆಂದರಲ್ಲಿ ಬಿದ್ದಿದ್ದರಿಂದ ಯೋಗಾಸನ ಮಾಡಲು ಪರದಾಡುವಂತಾಗಿದೆ.

ಇದೀಗ ಮಳೆಗಾಲವಾಗಿದ್ದರಿಂದ ಹೆದ್ದಾರಿ ಬದಿಯಲ್ಲಿ ಗಬ್ಬು ವಾಸನೆ ಮೂಗಿಗೆ ಬಡಿಯುತ್ತಿದೆ. ಕೂಡಲೇ ಪುರಸಭೆ ಅಧಿಕಾರಿಗಳು ಪಟ್ಟಣದ ನಾಲ್ಕೂ ಕಡೆಗೆ ರಸ್ತೆ ಬದಿಯ ತ್ಯಾಜ್ಯವನ್ನು ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸ್ಥಳಾಂತರಿಸಬೇಕಿದೆ. ಅಲ್ಲದೇ, ರಸ್ತೆ ಬದಿಯಲ್ಲಿ ಕಸ ಹಾಕುವವರಿಗೆ ದಂಡ ವಿಧಿಸಬೇಕಿದೆ. ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದಲ್ಲದೇ ರಸ್ತೆ ಬದಿಯಲ್ಲಿ ಜಾಗೃತಿ ಫಲಕಗಳನ್ನು ಅಳವಡಿಸಬೇಕಿದೆ.

**ರಸ್ತೆ ಕೆಲವೇ ದಿನಗಳಲ್ಲಿ ಹಾಳಾಗುವ ಸಾಧ್ಯತೆ**

> ಪಟ್ಟಣದ ಹೊರವಲಯದ ಕಟ್ಟೂರು ರಸ್ತೆಗೆ ಹೊಂದಿಕೊಂಡಂತೆ ಕಲ್ಲು ಮಣ್ಣಿನ ತ್ಯಾಜ್ಯ ಹಾಕಿದ್ದು ಗಮನಕ್ಕೆ ಬಂದಿದೆ. ಕೂಡಲೇ ಅದನ್ನು ತೆರವುಗೊಳಿಸಲಾಗುವುದು. ಪರಿಸರ ಶುಚಿತ್ವಕ್ಕೆ ಆದ್ಯತೆ ನೀಡಲಾಗುವುದು.
> - ವೆಂಕಟೇಶ ನಾಗನೂರ, ಮುಖ್ಯಾಧಿಕಾರಿ ಪುರಸಭೆ

> ಚಿಕ್ಕೋಡಿ ಪಟ್ಟಣದ ಹೊರವಲಯದಲ್ಲಿ ಹೆದ್ದಾರಿ ಬದಿಗಳಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯ ಹಾಕುವುದು ಅವ್ಯಾಹತವಾಗಿದೆ. ಸಂಬಂಧಿಸಿದವರು ಇದಕ್ಕೆ ಕಡಿವಾಣ ಹಾಕುವುದು ಅವಶ್ಯಕವಾಗಿದೆ.
> - ಹೌಸಾಬಾಯಿ ದಾನನ್ನವರ, ಸ್ಥಳೀಯರು

> ಚಿಕ್ಕೋಡಿಗೆ ಆಗಮಿಸುವ ಜನರಿಗೆ ದುರ್ನಾತ ದರ್ಶನವಾಗುತ್ತಿದ್ದು ಟೆನ್ನಿಸ್ ಕೋರ್ಟ್ ಬಳಿಯಲ್ಲಿ ಕಲ್ಲು ಗುಡ್ಡೆ ಹಾಕಿರುವುದು ಅಪಾಯಕ್ಕೆ ಆಹ್ವಾನ ನೀಡುವಂತಿದೆ. ಕೂಡಲೇ ಇದನ್ನು ತೆರವುಗೊಳಿಸಬೇಕು.
> - ಕಾಜಲ್ ಕದಂ, ಪ್ರಯಾಣಿಕರು

## ಪತ್ರಕರ್ತರ ಸಂಘದ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿ

• ಉದಯವಾಹಿನಿ, ರಾಯಚೂರು

ಯಾವುದೇ ಕಾರ್ಯದಲ್ಲಿ ಯಶಸ್ವಿಯಾಗಲು ಶಾರೀರಿಕ ಸದೃಢತೆ ಅತ್ಯಂತ ಮುಖ್ಯವಾಗಿದ್ದು, ದಿನನಿತ್ಯ ಒತ್ತಡದಲ್ಲಿ ಕೆಲಸ ಮಾಡುವುದರಿಂದ ಪತ್ರಕರ್ತರು ಶರೀರದ ಆರೋಗ್ಯ ಹೆಚ್ಚಿನ ಒತ್ತು ಕೊಡಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ಹೇಳಿದರು.


ಉದಯವಾಹಿನಿ ಚಿತ್ರ

ಅವರಿಂದು ನಗರದ ಪೊಲೀಸ್ ಮೈದಾನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದಿಂದ ಪತ್ರಿಕಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

**ಶಾರೀರಿಕ ಆರೋಗ್ಯದ ಕಡೆಗೆ ಹೆಚ್ಚಿನ ಒತ್ತು ನೀಡಿ**

ಒತ್ತಡದಲ್ಲಿ ಕೆಲಸ ಮಾಡುವ ಸರ್ಕಾರದ ಹಲವು ಇಲಾಖೆಗಳಂತೆ, ಅತ್ಯಂತ ಒತ್ತಡದಲ್ಲಿಕೆಲಸ ಮಾಡುವ ವಲಯವೆಂದರೆ ಅದು ಪತ್ರಕರ್ತರ ವಲಯ.

ಪತ್ರಕರ್ತರು ದಿನನಿತ್ಯ ಸುದ್ದಿ ಮಾಡುವ ಒತ್ತಡದಲ್ಲಿರುತ್ತಾರೆ. ಸುದ್ದಿಗಾಗಿ ಓಡಾಡುತ್ತಿರುತ್ತಾರೆ. ಆ ಒತ್ತಡದ ಓಡಾಟದಿಂದ ಸ್ವಲ್ಪ ವಿಶ್ರಾಂತಿ ಪಡೆಯಲು ಕ್ರೀಡೆಗಳು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂದರು.

ಬೆಳಿಗ್ಗೆಯ ನಡಿಗೆ (ವಾಕಿಂಗ್) ಬಹಳ ಮುಖ್ಯ, ನಾವು ದಿನನಿತ್ಯ ಮಾಡುವ ಊಟದಂತೆ ವಾಕಿಂಗ್ ಅನ್ನು ಮರೆಯಬಾರದು. ಮನಸ್ಸನ್ನು ಸ್ಥಿರವಾಗಿರಿಸಿದರೆ. ಎಲ್ಲವೂ ಸಾಧ್ಯವಾಗುತ್ತದೆ. ಬೆಳಿಗ್ಗೆ ಸಾಧ್ಯವಾಗದೇ ಇದ್ದರೆ ಸಂಜೆ ವೇಳೆಯಲ್ಲಿ ಆದರೂ ವಾಕಿಂಗ್ ಮಾಡಲು ಮುಂದಾಗಬೇಕು.

ಸಮಾಜದ ಉದ್ದಾರಕ್ಕಾಗಿ ಪ್ರಗತಿಗಾಗಿ, ಪತ್ರಕರ್ತರು ದಿನನಿತ್ಯ ಶ್ರಮಿಸುತ್ತಾರೆ. ಪತ್ರಕರ್ತರು ತಮ್ಮ ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದು ತಿಳಿಸಿದರು. ಇದೇ ವೇಳೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ ಮಾತನಾಡಿ, ಕ್ರೀಡೆ ಎಂಬುದು ದೈಹಿಕ ಆರೋಗ್ಯಕ್ಕೆ ಮಾತ್ರವಲ್ಲದೇ ಮಾನಸಿಕ ಆರೋಗ್ಯಕ್ಕೂ ಅತ್ಯಂತ ಮುಖ್ಯವಾಗಿದ್ದು, ಒತ್ತಡದ ಬದುಕಿನ ಮಧ್ಯೆ ಮಾನಸಿಕ ನೆಮ್ಮದಿಗೆ ಕ್ರೀಡೆಗಳು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

> ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ತಾಲ್ಲೂಕು ವರದಿಗಾರರ ತಂಡ ಹಾಗೂ ಜಿಲ್ಲಾ ಕೇಂದ್ರದ ಎರಡು ತಂಡಗಳ ನಡುವೆ ಪಂದ್ಯಾವಳಿ ನಡೆಯಲಿದ್ದು, ಪಂದ್ಯಾವಳಿಯಲ್ಲಿ ಸೋಲು, ಗೆಲುವು ಸಾಮಾನ್ಯ ಕ್ರೀಡೆಯಲ್ಲಿ ಸ್ಫೂರ್ತಿಯಿಂದ ಭಾಗವಹಿಸುವುದು ಅತ್ಯಂತ ಮುಖ್ಯ, ಕ್ರೀಡಾ ಸ್ಫೂರ್ತಿಯಿಂದ ಪಂದ್ಯಾವಳಿಯಲ್ಲಿ ಉತ್ತಮವಾಗಿ ಪ್ರದರ್ಶನ ನೀಡಿ
> -ಎಸ್ಪಿ ಪುಟ್ಟಮಾದಯ್ಯ

## ಉತ್ತಮ ಮಳೆ: ಗರಿಗೆದರಿದ ಕೃಷಿ ಚಟುವಟಿಕೆ

• ಉದಯವಾಹಿನಿ, ಶಿರಸಿ

ಮುಂಗಾರು ಮಳೆ ಅಬ್ಬರ ಶುರುವಾಗಿದ್ದು, ಎಲ್ಲೆಡೆ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಮೇ ತಿಂಗಳಲ್ಲಿ ಈ ಬಾರಿ ಉತ್ತಮ ಮಳೆ ಸುರಿದಿದ್ದರಿಂದ ಕೃಷಿಗೆ ನೀರಿನ ಸಮಸ್ಯೆ ದೂರವಾಗಿತ್ತು. ಅಲ್ಲದೆ ಕೃಷಿಕರು ತಮ್ಮ ತೋಟ, ಗದ್ದೆಗಳ ಕೆಲಸವನ್ನು ಬೇಗನೆ ಆರಂಭಿಸಿದ್ದರು.

ಆದರೆ ಜೂನ್ ಆರಂಭವಾಗುತ್ತಿದ್ದಂತೆ ತಾಲ್ಲೂಕಿನಲ್ಲಿ ಸುಮಾರು 10-12 ದಿನಗಳ ಕಾಲ ಮಳೆ ದೂರವಾಯಿತು. ಈ ಸಮಯ ಕೃಷಿ ಕೆಲಸಗಳು ಕೊಂಚ ಕುಂಠಿತಗೊಂಡವು. ಎರಡು ದಿನಗಳಿಂದ ಉತ್ತಮ ಮಳೆ ಬೀಳುತ್ತಿದ್ದು, ಭತ್ತದ ಗದ್ದೆಗಳಲ್ಲಿ ನೀರು ತುಂಬಿದೆ. ಇದು ಬಿತ್ತನೆ ಭತ್ತದ ಗದ್ದೆಗಳಿಗೆ ಉತ್ತಮವಾಗಿದೆ. ಗದ್ದೆಗಳ ಕೆಲಸಗಳು ಭರದಿಂದ ಸಾಗಿದ್ದು, ನಾಟಿಯ ತಯಾರಿ ನಡೆದಿದೆ.

ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕರ ಕೊರತೆ ಇರುವುದರಿಂದ ಹೆಚ್ಚಿನ ಕೃಷಿಕರು ಆಗತ್ಯ ಕೆಲಸಗಳಿಗೆ ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ. ಇದು ಕಡಿಮೆ ಖರ್ಚು ಹಾಗೂ ಕೆಲಸಗಳು ವೇಗವಾಗಿ ಸಾಗಲು ಸಹಕಾರಿಯಾಗಿದೆ. ಗದ್ದೆಗಳನ್ನು ಹದ ಮಾಡಲು ಟಿಲ್ಲರ್, ಟ್ರ್ಯಾಕ್ಟರ್‌ಗಳಿಗೆ ಬೇಡಿಕೆ ಹೆಚ್ಚಿದೆ.


ಉದಯವಾಹಿನಿ ಚಿತ್ರ

**ಅಡಿಕೆಗೆ ಮದ್ದು ಸಿಂಪಡಣೆ**

ಜೂನ್ ತಿಂಗಳ ಮೊದಲೆರಡು ವಾರದಲ್ಲಿ ಮಳೆ ಪ್ರಮಾಣ ತೀರಾ ಕಡಿಮೆಯಿತ್ತು. ಹಾಗಾಗಿ ಅಡಿಕೆ ತೋಟಗಳಿಗೆ ಔಷಧ ಸಿಂಪಡಿಸುವ ಕೃಷಿಕರಿಗೆ ಹೆಚ್ಚಿನ ಅನುಕೂಲ ನೀಡಿತ್ತು. ಮೇ ತಿಂಗಳ ಕೊನೆಯ ವಾರದಲ್ಲಿ ವಿಪರೀತ ಮಳೆಯಿಂದ ಔಷಧ ಸಿಂಪಡಣೆಗೆ ಹೆಣಗಾಡುತ್ತಿದ್ದ ಅಡಿಕೆ ಕೃಷಿಕರಿಗೆ ಜೂನ್ ಮೊದಲ ವಾರ ಮಳೆಬಿಟ್ಟದ್ದು ಅನುಕೂಲವಾಯಿತು. ಅರ್ಧಕ್ಕಿಂತ ಅಧಿಕ ತೋಟಗಳಲ್ಲಿ ಈಗಾಗಲೇ ಪ್ರಥಮ ಹಂತದ ಔಷಧ ಸಿಂಪಡಣೆ ಪೂರ್ಣಗೊಂಡಿದೆ.


## ಮಕ್ಕಳಿಗೆ ವಚನ ಸಾಹಿತ್ಯದ ಅರಿವು ಮೂಡಿಸಿ

• ಉದಯವಾಹಿನಿ, ನ್ಯಾಮತಿ

ವಚನಗಳ ಪಠಣದಿಂದ ಜೀವನವನ್ನು ಸುಂದರವಾಗಿ ರೂಢಿಸಿಕೊಳ್ಳಬಹುದು ಎಂದು ಸಂನ್ಯಾಸಿ ಕೊಡಮಗ್ಗಿಯ ಶರಣ ಬಳಗದ ಸೌಭಾಗ್ಯಮ್ಮ ಹೇಳಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಕಚೇರಿಯಲ್ಲಿ ಶನಿವಾರ 'ಮಾಸಿಕ ಸಾಹಿತ್ಯ ಸೌರಭ'ದಲ್ಲಿ ಅತಿಥಿಗಳಾಗಿ ಅವರು ಮಾತನಾಡಿದರು.

★12ನೇ ಶತಮಾನದ ಶರಣರು ಕನ್ನಡದಲ್ಲಿಯೇ ವಚನಗಳನ್ನು ರಚಿಸುವ ಮೂಲಕ ವಚನ ಕ್ರಾಂತಿ ಮಾಡಿದರು. ಪ್ರತಿಯೊಬ್ಬರ ಮನೆಯಲ್ಲೂ ವಚನಗಳ ಸಂಗ್ರಹ ಪುಸ್ತಕ ಇರಬೇಕು. ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿಯೇ ವಚನಗಳ ಮಹತ್ವವನ್ನು ರೂಢಿ ಮಾಡುವಂತೆ' ತಿಳಿಸಿದರು.


ಉದಯವಾಹಿನಿ ಚಿತ್ರ

'ಈಚೆಗೆ ಅಂಡಮಾನ್ ನಿಕೋಬಾರ್ ದ್ವೀಪಕ್ಕೆ ಶರಣ ಸಾಹಿತ್ಯ ಪರಿಷತ್ತು ತಂಡ ತೆರಳಿ ಅಲ್ಲಿ ಶರಣರ ಮಹತ್ವವನ್ನು ಪ್ರಚುರಪಡಿಸಲಾಯಿತು. ಅಲ್ಲಿಯ ಕನ್ನಡಿಗರಿಂದ ನಮ್ಮ ಅಕ್ಕಮಹಾದೇವಿ ಛದ್ಮವೇಷಕ್ಕೆ ಅಪಾರ ಮನ್ನಣೆ ಸಿಕ್ಕಿತು' ಎಂದು ತಮ್ಮ ಅನುಭವ ಹಂಚಿಕೊಂಡರು.

## ಸ್ವಚ್ಛ, ಸುಂದರ ನಗರ ಮಾಡಲು ಶ್ರಮ: ಶಾಸಕ ಸ್ವರೂಪ್ ಭರವಸೆ

• ಉದಯವಾಹಿನಿ, ಹಾಸನ

ನಗರಸಭೆ ಇದೀಗ ಮಹಾನಗರ ಪಾಲಿಕೆಯಾಗಿ ಉನ್ನತೀಕರಣಗೊಂಡಿದ್ದು, ಹೆಚ್ಚಿನ ಅನುದಾನ ತರುವ ಮೂಲಕ ಸ್ವಚ್ಛ ಹಾಗೂ ಸುಂದರ ನಗರವನ್ನಾಗಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ' ಶಾಸಕ ಸ್ವರೂಪ್ ಪ್ರಕಾಶ್ ಭರವಸೆ ನೀಡಿದರು.

ನಗರದ 80 ಅಡಿ ರಸ್ತೆಯ ವಿಶ್ವನಾಥ ನಗರದಲ್ಲಿ 50 ಲಕ್ಷ ವೆಚ್ಚದ ಕಾಂಕ್ರೀಟ್ ಚರಂಡಿ ಮತ್ತು ಕವರಿಂಗ್ ಸ್ಲಾಬ್ ಅಳವಡಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ನಗರದ ಅಭಿವೃದ್ಧಿಗೆ ಎಚ್.ಡಿ. ರೇವಣ್ಣ ಅವರು ಸಚಿವರಾಗಿದ್ದಾಗ ಸಾಕಷ್ಟು ಅನುದಾನ ನೀಡಿ ಸಹಕಾರ ನೀಡಿದ್ದಾರೆ. ಇದೀಗ ಮಹಾನಗರ ಪಾಲಿಕೆ ಆಗಿರುವುದರಿಂದ ರಾಜ್ಯ ಸರ್ಕಾರದಿಂದ 3 ಕೋಟಿ ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ. ಎಚ್.ಡಿ. ದೇವೇಗೌಡರ ಸಹಕಾರದಲ್ಲಿ ಕೇಂದ್ರದಿಂದಲೂ ಸುಮಾರು 30 ಕೋಟಿ ಅನುದಾನ ದೊರೆಯುವ ಭರವಸೆ ಇದೆ' ಎಂದರು.


ಉದಯವಾಹಿನಿ ಚಿತ್ರ

> ನಗರ ನಿವಾಸಿಗಳ ಕುಡಿಯುವ ನೀರು ರಸ್ತೆ ಚರಂಡಿ ಸೇರಿದಂತೆ ಎಲ್ಲಾ ರೀತಿಯ ಸಮಸ್ಯೆಗಳನ್ನೂ ಬಗೆಹರಿಸಲು ಬದ್ಧರಾಗಿದ್ದೇವೆ.
> -ಎಂ.ಚಂದ್ರೇಗೌಡ, ಮೇಯರ್

ಮಹಾನಗರ ಪಾಲಿಕೆಗೆ ಸೇರಿರುವ ಹೆಚ್ಚುವರಿ 35 ಹಳ್ಳಿಗಳಲ್ಲಿ ಅನೇಕ ಸಮಸ್ಯೆಗಳಿವೆ. ಅವುಗಳ ಬಗ್ಗೆ ಗ್ರಾಮಸ್ಥರೊಂದಿಗೆ ಚರ್ಚಿಸಿ, ಸುಮಾರು 100 ಕೋಟಿಯಿಂದ 150 ಕೋಟಿ ವೆಚ್ಚದಲ್ಲಿ ಮಹಾನಗರ ಪಾಲಿಕೆಗೆ ಒಳಗೊಂಡ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಚಿಂತಿಸಲಾಗಿದೆ' ಎಂದು ಹೇಳಿದರು.

## ಪಾಲಾಮೋರ್‌ಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ಜೂನಿಯರ್ ಕಾಲೇಜು ಪ್ರಾಂಶುಪಾಲ ಮಲ್ಲಿಕಾರ್ಜುನ ಪಾಲಾಮೋರ್ ಅವರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಯನ್ನು ಪರಿಗಣಿಸಿ ಗೋವಾದಲ್ಲಿ ನಡೆದ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ವಾಷಿಂಗ್ಟನ್ ಅಂತರಾಷ್ಟ್ರೀಯ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ.ಸೆಬಸ್ಟಿನ್ ಮೆಂಡಸ್ ಹಾಗೂ ಅಕಾಡೆಮಿ ಕೌನ್ಸಿಲ್ ಶೈಕ್ಷಣಿಕ ಸಲಹೆಗಾರ ಡಾ.ರಾಧಿಮಾ ಸೇರಿದಂತೆ ಶರಣುಪಾಟೀಲ ಮೋತಕಪಳ್ಳಿ,ಸುಭಾಷ್ ಸೀಳಿನ,ನೀಲಕಂಠ ಸೀಳಿನ ಅನೇಕರಿದ್ದರು.

## ಮೂಲಸೌಕರ್ಯ ಕೊರತೆ: ರುದ್ರಪಾದ ಶಾಲೆಗಿಲ್ಲ ಸವಲತ್ತು

• ಉದಯವಾಹಿನಿ, ತೆಕ್ಕಲಕೋಟೆ

ಇಲ್ಲಿನ ರುದ್ರಪಾದ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಆಟದ ಮೈದಾನ, ಶೌಚಾಲಯ, ಕಾಂಪೌಂಡ್, ಅಡುಗೆ ಕೋಣೆ, ಶುದ್ಧ ನೀರಿನ ಘಟಕ ಸೇರಿದಂತೆ ಮೂಲಸೌಕರ್ಯಗಳ ಕೊರತೆಯಿಂದ ಸೊರಗಿದ್ದು, ಶೈಕ್ಷಣಿಕ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಿದೆ.

ಶಾಲೆಯು 1ರಿಂದ 7ನೇ ತರಗತಿವರೆಗೆ ನಡೆಯುತ್ತಿದೆ. ಒಟ್ಟು 119 ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಕಾಯಂ ಹಾಗೂ ಇಬ್ಬರು ಅತಿಥಿ ಶಿಕ್ಷಕರು ಸೇರಿದಂತೆ ಒಟ್ಟು 4 ಶಿಕ್ಷಕರಿದ್ದಾರೆ. 7 ತರಗತಿಗಳಿಗೆ 5 ಕೋಣೆಗಳು ಇದ್ದು, ಇದರಲ್ಲಿ ಶಿಥಿಲಾವಸ್ಥೆ ತಲುಪಿರುವ ಕೋಣೆಯನ್ನು ಅಡುಗೆಗೆ ಬಳಸಲಾಗುತ್ತಿದೆ. ಉಳಿದ ನಾಲ್ಕು ಕೊಠಡಿಗಳಲ್ಲಿ ಪಾಠ ಪ್ರವಚನ ನಡೆಸುವ ಅನಿವಾರ್ಯತೆ ಇದೆ ಎನ್ನುತ್ತಾರೆ ಶಿಕ್ಷಕರು. ಶಾಲೆಯಲ್ಲಿ ಎರಡು ಶೌಚಾಲಯ ಇದ್ದು ಶಿಕ್ಷಕರು ಸೇರಿದಂತೆ ಬಾಲಕ, ಬಾಲಕಿಯರು ಇವುಗಳನ್ನೆ ಬಳಸಬೇಕಾಗಿದೆ' ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

**ಮುಗಿಯದ ಕಾಮಗಾರಿ**

'ಶಿಥಿಲಾವಸ್ಥೆ ತಲುಪಿದ್ದ ಅಡುಗೆ ಕೋಣೆಯನ್ನು ತೆರವುಗೊಳಿಸಿ ಹೊಸ ಅಡುಗೆ ಕೋಣೆ ನಿರ್ಮಾಣಕ್ಕೆ ನರೇಗಾ ಯೋಜನೆಯಡಿ 7.50 ಲಕ್ಷ ವೆಚ್ಚದ ಕಾಮಗಾರಿಗೆ ಎಂಟು ತಿಂಗಳ ಹಿಂದೆ ಚಾಲನೆ ನೀಡಲಾಗಿದೆ. ಆದರೆ ಶೈಕ್ಷಣಿಕ ವರ್ಷ ಆರಂಭವಾದರೂ ಅಡುಗೆ ಕೋಣೆ ಕಾಮಗಾರಿ ಪೂರ್ಣಗೊಂಡಿಲ್ಲ. ಇದರಿಂದಾಗಿ ಮಳೆನೀರು ಸೋರುವ ಕೊಠಡಿಯಲ್ಲಿಯೇ ಬಿಸಿಯೂಟದ ಅಡುಗೆಯನ್ನು ಮಹಿಳೆಯರು ಭಯದಲ್ಲಿಯೇ ತಯಾರಿಸುವಂತಾಗಿದೆ.

## ಕಲಿಕಾ ಸಾಮಗ್ರಿ ವಿತರಣೆ

• ಉದಯವಾಹಿನಿ, ಬ್ರಹ್ಮಾವರ

ಮಾಬುಕಳ ಹಂಗಾರಕಟ್ಟೆಯ ಚೇತನಾ ಪ್ರೌಢ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಮವಸ್ತ್ರ, ಪಠ್ಯಪುಸ್ತಕ, ನೋಟ್ ಪುಸ್ತಕ, ಬೆಲ್ಟ್ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

2024-25ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ರಲ್ಲಿ 620 ಅಂಕ ಪಡೆದ ವೈಷ್ಣವಿ ಅವರಿಗೆ 5 ಸಾವಿರ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಎನ್ ಎಂಎಂಎಸ್ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಶುಭದಾ ವೇದವ್ಯಾಸ ಆಚಾರ್ಯ ಅವರು ಹೊಸದಾಗಿ ದಾಖಲಾದ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ ನೀಡಿದರು.

ಆಡಳಿತ ಮಂಡಳಿ ಅಧ್ಯಕ್ಷ ಬಿ.ಭರತ್ ಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಮುಖ್ಯ ಆಡಳಿತ ಮಂಡಳಿಯ ಸದಸ್ಯರು, ಪೋಷಕರು, ಶಾಲೆಯ ಶಿಕ್ಷಕರು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

## ಮಳೆಯಿಂದ ಗುಡ್ಡ ಕುಸಿಯುವ ಭೀತಿ ಕಾಲೇಜು ಕಟ್ಟಡ ರಕ್ಷಣೆಗೆ ಮನವಿ

• ಉದಯವಾಹಿನಿ, ಬಸವಾಪಟ್ಟಣ

ನಿರಂತರ ಮಳೆಯಿಂದ ಇಲ್ಲಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪಕ್ಕದಲ್ಲಿರುವ ಗುಡ್ಡ ಕುಸಿಯುತ್ತಿದ್ದು, ಇದರೊಂದಿಗೆ ಗ್ರಾಮದ ನೀರು ಸರಬರಾಜಿಗಾಗಿ ನಿರ್ಮಿಸಲಾಗಿರುವ 2 ಟ್ಯಾಂಕ್‌ಗಳೂ ಸಹ ಕಾಲೇಜು ಕಟ್ಟಡದ ಮೇಲೆ ಕುಸಿಯುವ ಭೀತಿ ಎದುರಾಗಿದೆ ಎಂದು ಪ್ರಾಂಶುಪಾಲ ಟಿ.ಮಂಜಣ್ಣ ತಿಳಿಸಿದ್ದಾರೆ.

ಗುಡ್ಡ ಕುಸಿಯುತ್ತಿರುವ ಬಗ್ಗೆ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರೂ ಆಗಿರುವ ಶಾಸಕ ಕೆ.ಎಸ್.ಬಸವಂತಪ್ಪ ಅವರ ಗಮನಕ್ಕೆ ತಂದಿದ್ದೇವೆ. ಭಾನುವಾರವೂ ಸಹ ಮಳೆ ಬಂದಿದ್ದು, ಗುಡ್ಡದಿಂದ ಮಣ್ಣು, ಕಲ್ಲುಗಳು ಕೆಳಗೆ ಬೀಳುತ್ತಿವೆ. ಒಂದು ವೇಳೆ ನೀರಿನ ಟ್ಯಾಂಕ್‌ಗಳು ಉರುಳಿದರೆ ಕಾಲೇಜು ಕಟ್ಟಡಕ್ಕೆ ತೀವ್ರ ಹಾನಿಯಾಗುವ ಸಂಭವವಿದೆ. ಕೂಡಲೇ ಗುಡ್ಡ ಕುಸಿಯದಂತೆ ತಡೆಗೋಡೆ ನಿರ್ಮಾಣಕ್ಕೆ ಸರ್ಕಾರ ಮುಂದಾಗಬೇಕು ಎಂದು ಪ್ರಾಂಶುಪಾಲ ಮಂಜಣ್ಣ ಮನವಿ ಮಾಡಿದ್ದಾರೆ.

# ಕೋಟೆ ಆವರಣದಲ್ಲಿ ಮಹಿಳೆಯರಿಗಾಗಿ ಉಚಿತ ಯೋಗ ತರಬೇತಿ ಶಿಬಿರ

• ಯೋಗಭ್ಯಾಸದಿಂದ ಮಹಿಳೆಯರ ಹಲವಾರ ಆರೋಗ್ಯ ಸಮಸ್ಯೆಗಳು ದೂರ: ಡಾ. ವಿಜಯಲಕ್ಷ್ಮಿ ಪಿ.

• ಉದಯವಾಹಿನಿ ಚಿತ್ರದುರ್ಗ

ಇಂದಿನ ಧಾವಂತ ಬದುಕಿನಲ್ಲಿ ಮಹಿಳೆಯರು ತಮ್ಮ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯ ಸೇರಿದಂತೆ ಹಲವು ಋತುಚರ್ಯ ಆರೋಗ್ಯ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಯೋಗದ ಮೊರೆ ಹೋಗುವುದು ಅವಶ್ಯಕವಾಗಿದೆ ಎಂದು ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ ಶ್ರೀಮತಿ ವಿಜಯಲಕ್ಷ್ಮಿ ಪಿ. ಅವರು ಅಭಿಪ್ರಾಯ ಪಟ್ಟಿದ್ದಾರೆ.

ಇದೇ ಜೂ. ಬರುವ 21ನೇ ಅಂತರಾಷ್ಟ್ರೀಯ ಯೋಗ ದಿನ ಹಾಗೂ ಭಾರತೀಯ ಯೋಗ ಶಿಕ್ಷಣ ಸಂಸ್ಥೆಯ ನಾಲ್ಕನೇ ವಾರ್ಷಿಕೋತ್ಸವ ಅಂಗವಾಗಿ ಭಾರತೀಯ ಯೋಗ ಶಿಕ್ಷಣ ಸಂಸ್ಥೆ ಚಿತ್ರದುರ್ಗ , ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ ಹಾಗೂ ಕೋಟೆ ವಾಯುವಿಹಾರಿಗಳ ಸಂಘ ಚಿತ್ರದುರ್ಗ ಇವರು ಸಂಯುಕ್ತವಾಗಿ ಮಹಿಳೆಯರಿಗಾಗಿ ಆಯೋಜಿಸಿರುವ ಉಚಿತ ಯೋಗ ಶಿಬಿರವನ್ನು ನಗರದ ಐತಿಹಾಸಿಕ ಕೋಟೆ ಕರುವರ್ತಿ ಬಳಿಯ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಜೆ ಉದ್ಘಾಟನೆ ಮಾಡಿ ಅವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಮಹಿಳೆಯರು ತಮ್ಮ ಜೀವನದ ವಿವಿಧ ಹಂತಗಳಲ್ಲಿ ಅಂದರೆ ಮುಟ್ಟು, ಗರ್ಭಧಾರಣೆ, ಋತುಬಂಧ, ಇತ್ಯಾದಿ ಅನುಭವಿಸುವ ವೇಳೆಯಲ್ಲಿ ಹಾರ್ಮೋನುಗಳ ಬದಲಾವಣೆಗಳು ಮತ್ತು ಒತ್ತಡಗಳನ್ನು ನಿಭಾಯಿಸಲು ಯೋಗವು ವಿಶೇಷವಾಗಿ ಸಹಾಯಕವಾಗಲಿದೆ ಎಂದು ತಿಳಿಸಿದರು.

**ಒತ್ತಡಗಳನ್ನು ನಿಭಾಯಿಸಲು ಯೋಗವು ಸಹಕಾರಿ**

ಇದೇ ಸಂಧರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಾಹಿತಿ ಹಾಗು ಪತ್ರಕರ್ತ ಮೊಹಿದ್ದೀನ್ ಖಾನ್ ಒಬ್ಬ ವ್ಯಕ್ತಿಯು ತಾನು ಗುಣಮುಖನಾಗುತ್ತೇನೆ ಎಂಬ ದೃಢ ವಿಶ್ವಾಸವನ್ನು ಹೊಂದಿದ್ದರೆ, ಆತನ ದೇಹವು ಚೇತರಿಕೆಗೆ ಉತ್ತಮವಾಗಿ ಸ್ಪಂದಿಸುತ್ತದೆ. ಉತ್ತಮ ಆಹಾರ, ಸಾಕಷ್ಟು ನಿದ್ದೆ, ವ್ಯಾಯಾಮ ಮತ್ತು ಸಕಾರಾತ್ಮಕ ಸಾಮಾಜಿಕ ಸಂಬಂಧಗಳು ಆರೋಗ್ಯಕರ ಜೀವನಕ್ಕೆ ಆಧಾರವಾಗಿವೆ. ಆರೋಗ್ಯಕರ ಜೀವನ ಹಲವಾರು ರೋಗಗಳನ್ನು ತಡೆಗಟ್ಟಲು ಮತ್ತು ಗುಣಪಡಿಸಲು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ವೇದಿಕೆ ಕಾರ್ಯಕ್ರಮ ನಂತರ ಭಾರತೀಯ ಯೋಗ ಶಿಕ್ಷಣ ಸಂಸ್ಥೆಯ ಯೋಗ ಶಿಕ್ಷಕಿಯರಾದ ಶ್ರೀಮತಿ ಮಂಜುಳಾ, ವಸಂತಲಕ್ಷ್ಮಿ ಶಿಬಿರಾರ್ಥಿಗಳಿಗೆ ಯೋಗ ತರಬೇತಿ ನೀಡಿದರು. ಶಿಬಿರದ ಆಯೋಜಕ ಹಾಗೂ ಯೋಗ ತರಬೇತುದಾರ ಆಯುಷ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀಮತಿ ಡಾ.ವಿಜಯಲಕ್ಷ್ಮಿಯವರಿಗೆ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.

ರವಿ ಕೆ.ಅಂಬೇಕರ್ ಕಾರ್ಯಕ್ರಮ ನಿರೂಪಿಸಿದರು ಈ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನಾಚಾರ್ ಎಂ., ರಾಜ್ಯೋತ್ಸವ ಪ್ರಶಸ್ತಿ ವಿಜೇತ ಪರಿಸರ ಸಂರಕ್ಷಕ ಮಲ್ಲಿಕಾರ್ಜುನಪ್ಪ ಸೇರಿದಂತೆ ಸಂಸ್ಥೆಯ ಇತರ ಪದಾಧಿಕಾರಿಗಳು ಯೋಗಾಸಕ್ತರು ಉಪಸ್ಥಿತರಿದ್ದರು.

> ಚಿತ್ರದುರ್ಗ ಕೋಟೆಗೆ ವಾಯುವಿಹಾರಕ್ಕಾಗಿ ಬರುವ ಹಲವಾರು ಜನರು ಒಂದಿಲ್ಲೊಂದು ಆರೋಗ್ಯ ಸಮಸ್ಯೆಗಳನ್ನು ಇಟ್ಟುಕೊಂಡೇ ಬರುತ್ತಾರೆ ಅಂತಹವರಿಗೆ ಸಹಾಯವಾಗಲೆಂದು ಕೋಟೆ ವಾಯುವಿಹಾರಿಗಳ ಸಂಘ ಹಾಗೂ ಭಾರತೀಯ ಯೋಗ ಶಿಕ್ಷಣ ಸಂಯುಕ್ತವಾಗಿ ಇದುವರೆಗೆ ಹಲವಾರು ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರಲಾಗಿದೆ ಇದೇ ಜೂನ್ 21 ರಂದು ಆಚರಿಸುವ ವಿಶ್ವ ಯೋಗ ದಿನಾಚರಣೆ ವಿಶೇಷವಾಗಿ ಆಚರಿಸುವ ಸಲುವಾಗಿ ಈ ಮಹಿಳೆಯರಿಗಾಗಿ ಉಚಿತವಾಗಿ ಯೋಗ ತರಬೇತಿ ಶಿಬಿರ ಏರ್ಪಡಿಸಲಾಗಿದೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಯೋಗ ಕಲಿತು ತಮ್ಮ ಆರೋಗ್ಯ ಕಾಪಾಕೊಂಡರೆ ಶಿಬಿರ ಸಾರ್ಥಕಪಡೆಯುತ್ತದೆ.
> -ಆರ್.ಸತ್ಯಣ್ಣ, ಕೋಟೆ ವಾಯುವಿಹಾರಿಗಳ ಸಂಘದ ಅಧ್ಯಕ್ಷ

## ಆರೋಪಿಗೆ 3 ವರ್ಷ ಜೈಲು ಶಿಕ್ಷೆ

• ಉದಯವಾಹಿನಿ, ಮೂಡಿಗೆರೆ

ಹಳೇಕೋಟೆ ಗ್ರಾಮದಲ್ಲಿ 2019ರಲ್ಲಿ ನಡೆದಿದ್ದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಎಂಎಫ್ ನ್ಯಾಯಾಲಯವು ಆರೋಪಿ ಸುರೇಶ್ ಎಂಬಾತನಿಗೆ ಮೂರು ವರ್ಷ ಜೈಲು ಶಿಕ್ಷೆ, 10 ಸಾವಿರ ದಂಡ ವಿಧಿಸಿ ಆದೇಶಿಸಿದೆ. ಮೂಲತಃ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಚಂದಾಪುರ ಗ್ರಾಮದವರಾದ ಸುರೇಶ್, ಹಳೇಕೋಟೆ ಗ್ರಾಮದ ಮನೆಯೊಂದರ ಹಿಂಬಾಗಿಲನ್ನು ಮುರಿದು, ಮನೆಯಲ್ಲಿದ್ದ 4 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದನು. ಈ ಬಗ್ಗೆ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಜಗನ್ನಾಥ್ ನೇತೃತ್ವದಲ್ಲಿ ಆರೋಪಿಯನ್ನು ಪತ್ತೆಹಚ್ಚಿ, ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿತ್ತು.

# ವಿದೇಶಕ್ಕೆ ತೆರಳಿದ ಮೋದಿ ಕಾಲೆಳೆದ ಕಾಂಗ್ರೆಸ್

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ ಮೂರು ರಾಷ್ಟ್ರಗಳ ಪ್ರವಾಸದ ಬಗ್ಗೆ ಟೀಕಿಸಿರುವ ಕಾಂಗ್ರೆಸ್, ಅಂತಹ ಭೇಟಿಗಳಿಗೆ ಅವರಿಗೆ ಎಲ್ಲಾ ಶಕ್ತಿ, ಉತ್ಸಾಹ ಇದೆ ಆದರೆ, ಜನರ ನೋವುಗಳು ನಿರಂತರವಾಗಿ ಮುಂದುವರಿಯುತ್ತಿರುವ ಮಣಿಪುರಕ್ಕೆ ಹೋಗಲು ಅವರಿಗೆ ಸಮಯ ಸಿಗುತ್ತಿಲ್ಲ ಎಂದು ಕಾಲೇಳೆದಿದೆ. ಮೇ 2023 ರಿಂದ ಇದು ಮೋದಿಯವರ 35 ನೇ ವಿದೇಶ ಪ್ರವಾಸವಾಗಿದೆ ಮತ್ತು ಮಣಿಪುರವನ್ನು ಈ ರೀತಿ ಭೀಕರವಾಗಿ ನಡೆಸಿಕೊಂಡಿರುವುದು ಪ್ರಧಾನಿಯವರ ಕರುಣಾಜನಕ ಎಂದು ವಿರೋಧ ಪಕ್ಷ ಹೇಳಿದೆ.

ಪ್ರಧಾನಿ ಬೆಳಿಗ್ಗೆ ಸೈಪ್ರಸ್, ಕೆನಡಾ ಮತ್ತು ಕ್ರೊಯೇಷಿಯಾಕ್ಕೆ ತೆರಳುತ್ತಾರೆ. ಭಾರತ ಮತ್ತು ಕೆನಡಾಕ್ಕೆ ಅನ್ವಯಿಸುವಂತೆ ಸಮೀಕರಣವನ್ನು ಹೇಳುವ ಮೂಲಕ ಅವರು ತಮ್ಮ ಬೀಜಗಣಿತದ ಜ್ಞಾನದ ಬಗ್ಗೆ ಹೆಮ್ಮೆಪಡುತ್ತಿದ್ದ ಸಮಯವಿತ್ತು. ಆದರೆ ನಂತರ ವಿಷಯಗಳು ಭೀಕರವಾಗಿ ತಪ್ಪಾದವು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ-ಪ್ರಭಾರಿ ಸಂವಹನ ಜೈರಾಮ್ ರಮೇಶ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಭಾರತಕ್ಕೆ ಆಹ್ವಾನವನ್ನು ನೀಡಲು ಕೆನಡಾ ವಿಳಂಬ ಮಾಡುತ್ತಿರುವುದು ಕಂಡು ಬಂದಾಗ, ಮೋದಿಯವರ ಡ್ರಮ್ ವಾದಕರು ಅವರು ಆಹ್ವಾನಿಸಿದರೂ ಹೋಗುವುದಿಲ್ಲ ಎಂದು ಘೋಷಿಸಿದರು.



ಆದರೆ ಯಾವಾಗಲೂ ಹಾಗೆ, ಅವರು ಬಹಿರಂಗಗೊಂಡಿದ್ದಾರೆ ಎಂದು ರಮೇಶ್ ಹೇಳಿದ್ದಾರೆ. ಭಾರತವು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿರುವುದರಿಂದ ಭಾರತವನ್ನು 7 ಅಲ್ಲದ ಇತರ ಹಲವಾರು ದೇಶಗಳೊಂದಿಗೆ 7 ಶೃಂಗಸಭೆಗೆ ಆಹ್ವಾನಿಸಲಾಗಿದೆ ಎಂದು ಕೆನಡಾದ ಪ್ರಧಾನಿ ಹೇಳಿದ್ದಾರೆ ಎಂದು ರಮೇಶ್ ಗಮನಸೆಳೆದರು.

ನೀತಿ ಆಯೋಗದ ಸಿಇಒ ಪ್ರಕಾರ, ಮೇ 24, 2025 ರಂದು ಭಾರತವು ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಯಿತು ಎಂದು ಮೋದಿ ಅವರಿಗೆ ನೆನಪಿಸಬಹುದು ಎಂದು ಕಾಂಗ್ರೆಸ್ ಮುಖಂಡರು ಹೇಳಿದರು.ಇದು ಮೇ 2023 ರಿಂದ ಮೋದಿಯವರ 35 ನೇ ವಿದೇಶ ಪ್ರವಾಸವಾಗಿದೆ. ಅಂತಹ ಭೇಟಿಗಳಿಗಾಗಿ ಅವರಿಗೆ ಎಲ್ಲಾ ಶಕ್ತಿ, ಉತ್ಸಾಹ ಇದೆ. ಆದರೆ ಜನರ ಸಂಕಷ್ಟ, ಸಂಕಟ ಮತ್ತು ನೋವುಗಳು ನಿರಂತರವಾಗಿ ಮುಂದುವರಿಯುತ್ತಿರುವ ಮಣಿಪುರಕ್ಕೆ ಹೋಗಲು ಅವರಿಗೆ ಸಾಧ್ಯವಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಕಳೆದ ಮೇ 2023 ರಿಂದ ಇಂಫಾಲ್ ಕಣಿವೆಯ ಮೈಟೈಸ್ ಮತ್ತು ಪಕ್ಕದ ಬೆಟ್ಟಗಳ ಮೂಲದ ಕುಕಿ-ಝೋ ಗುಂಪುಗಳ ನಡುವಿನ ಜನಾಂಗೀಯ ಹಿಂಸಾಚಾರದಲ್ಲಿ 220 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬೆಳಿಗ್ಗೆ ಮೂರು ರಾಷ್ಟ್ರಗಳ ಪ್ರವಾಸ ಕೈಗೊಂಡರು.

ಈ ಸಮಯದಲ್ಲಿ ಅವರು ಕೆನಡಾದಲ್ಲಿ ನಡೆಯಲಿರುವ ಜಿ 7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ ಮತ್ತು ಸೈಪ್ರಸ್ ಮತ್ತು ಕ್ರೊಯೇಷಿಯಾಕ್ಕೆ ಭೇಟಿ ನೀಡಲಿದ್ದಾರೆ, ಈ ಎರಡೂ ದೇಶಗಳೊಂದಿಗೆ ಭಾರತದ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸಲಿದ್ದಾರೆ. ಸೈಪ್ರಸ್‌ನ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲೈಡ್ಸ ಅವರ ಆಹ್ವಾನದ ಮೇರೆಗೆ ಮೋದಿ ಮೊದಲು ಸೈಪ್ರಸ್‌ನಲ್ಲಿದ್ದಾರೆ.

## ಮಿನಿ ನ್ಯೂಸ್

### ಇಸ್ರೇಲ್-ಇರಾನ್ ನಡುವೆ ಶಾಂತಿ ಮಧ್ಯಸ್ಥಿಕೆಗೂ ಸೈ ಎಂದು ಆಫರ್, ಇಸ್ರೇಲ್ ದಾಳಿಯಿಂದ ಅಂತರ ಕಾಯ್ದುಕೊಂಡ ಅಮೆರಿಕ

# ನಮ್ಮ ತಂಟೆಗೆ ಬಂದ್ರೆ ಬಿಡಲ್ಲ: ಇರಾನ್‌ಗೆ ವಾರ್ನಿಂಗ್ ಕೊಟ್ಟ ಟ್ರಂಪ್

**ಅಮೆರಿಕ:** ಮಧ್ಯಪ್ರಾಚ್ಯ ದೇಶಗಳಲ್ಲಿ ಇರಾನ್-ಇಸ್ರೇಲ್ ಯುದ್ಧದ ಪರಿಣಾಮ ಹೆಚ್ಚಾಗುತ್ತಿದ್ದು, ಯಾವ ಹಂತಕ್ಕೆ ಮುಟ್ಟಲಿದೆ ಎಂಬುದು ಎಲ್ಲರಲ್ಲಿ ಭೀತಿ ಹುಟ್ಟಿಸಲಿದೆ. ಈ ನಡುವೆ ಅಮೆರಿಕ ಅಧ್ಯಕ್ಷ ಟ್ರಂಪ್ ಇರಾನ್‌ಗೆ ಎಚ್ಚರಿಕೆ ಸಂದೇಶ ನೀಡಿ ನಮ್ಮ ತಂಟೆಗೆ ಬಂದ್ರೆ ಸುಮ್ಮನೆ ಬಿಡಲ್ಲ ಎಂದಿದ್ದಾರೆ. ಅಗತ್ಯ ಬಿದ್ರೆ ಇರಾನ್-ಇಸ್ರೇಲ್ ನಡುವೆ ಮಧ್ಯಸ್ಥಿಕೆಗೂ ಸಿದ್ಧ ಎಂದೂ ಹೇಳಿದ್ದಾರೆ. ಟ್ರಂಪ್ ಅವರು ಟ್ರುತ್ ಸೋಶಿಯಲ್‌ನಲ್ಲಿ ಈ ಬಗ್ಗೆ ಬರೆದುಕೊಂಡಿದ್ದಾರೆ.

ಇರಾನ್ ಮೇಲೆ ನಡೆದ ದಾಳಿಯಲ್ಲಿ ಅಮೆರಿಕದ ಪಾತ್ರವಿಲ್ಲ. ಇರಾನ್ ಯಾವುದೇ ರೀತಿಯಲ್ಲಿ ನಮ್ಮ ಮೇಲೆ ದಾಳಿ ಮಾಡಿದರೆ, ಅಮೆರಿಕದ ಸಶಸ್ತ್ರ ಪಡೆಗಳು ಹಿಂದೆಂದೂ ಕಾಣದ ರೀತಿಯಲ್ಲಿ

- **ಟ್ರಂಪ್, ಇರಾನ್ ವಿರುದ್ಧ ಎಚ್ಚರಿಕೆ ನೀಡಿದ್ದು, ಯಾವುದೇ ದಾಳಿಯು ಸಂಭವಿಸಿದರೆ ಅಮೆರಿಕ ತನ್ನ ಸೇನಾ ಶಕ್ತಿಯನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಬಳಸುತ್ತೆ ಎಂಬುದಾಗಿ ಹೇಳಿದ್ದಾರೆ.**
- **ಇಸ್ರೇಲ್, ಇರಾನ್ ವಿರುದ್ಧ 'ಆಪರೇಷನ್ ರೈಸಿಂಗ್ ಲಯನ್' ಹೆಸರಿನಲ್ಲಿ ದೊಡ್ಡ ಪ್ರಮಾಣದ ವಾಯುದಾಳಿ ನಡೆಸಿದ್ದು, ಈ ದಾಳಿಗೂ ಅಮೆರಿಕಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಟ್ರಂಪ್ ತಿಳಿಸಿದ್ದಾರೆ.**
- **ಇಸ್ರೇಲ್ ದಾಳಿಯಿಂದ ಅಂತರ ಕಾಯ್ದುಕೊಂಡ ಅಮೆರಿಕ**

ಪ್ರತಿದಾಳಿ ನಡೆಸುತ್ತವೆ. ಆದರೆ, ಇರಾನ್ ಮತ್ತು ಇಸ್ರೇಲ್ ನಡುವೆ ಸುಲಭವಾಗಿ ಒಪ್ಪಂದ ಮಾಡಿಸಿ, ಈ ರಕ್ತಸಿಕ್ತ ಸಂಘರ್ಷವನ್ನು ಕೊನೆಗೊಳಿಸಬಹುದು ಎಂದು ಹೇಳಿದ್ದಾರೆ. ಇಸ್ರೇಲ್‌ನ ಆಪರೇಷನ್ ರೈಸಿಂಗ್ ಲಯನ್ ಬಗ್ಗೆ ಟ್ರಂಪ್ ಅವರ ನಿಲುವು ಬದಲಾಗುತ್ತಲೇ ಇದೆ. ಇಸ್ರೇಲ್ ದಾಳಿಗೂ ಕೆಲವೇ ಗಂಟೆಗಳ ಮೊದಲು ಟ್ರಂಪ್, ಟೆಹ್ರಾನ್ ಜೊತೆ ರಾಜತಾಂತ್ರಿಕ ಮಾತುಕತೆ ನಡೆಸಲು ಕರೆ ನೀಡಿದ್ದರು. ಆದರೆ, ಇಸ್ರೇಲ್ ವಾಯುದಾಳಿ ಮುಗಿದ ನಂತರ, ಇರಾನ್‌ನ ಪರಮಾಣು ಆಕಾಂಕ್ಷೆಗಳಿಗೆ ತಮ್ಮ ಹಿಂದಿನ ಎಚ್ಚರಿಕೆಗಳೇ ಕಾರಣ ಎಂದು ಹೇಳಿಕೊಂಡಿದ್ದಾರೆ. ಎರಡು ತಿಂಗಳ ಹಿಂದೆ ನಾನು ಇರಾನ್‌ಗೆ 60 ದಿನಗಳ ಗಡುವು ನೀಡಿದ್ದೆ. ಒಂದು ಒಪ್ಪಂದ ಮಾಡಿಕೊಳ್ಳಲು ಹೇಳಿದ್ದೆ. ಆದರೆ, ಅವರು ಅದನ್ನು ಮಾಡಲು ಸಾಧ್ಯವಾಗಲಿಲ್ಲ. ಈಗ ಅವರಿಗೆ ಎರಡನೇ ಅವಕಾಶವಿದೆ ಎಂದು ಟ್ರಂಪ್ ಟ್ರುತ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ. ಇನ್ನೊಂದು ಪೋಸ್ಟ್‌ನಲ್ಲಿ, ಟ್ರಂಪ್ ತಾವು ಇರಾನ್‌ಗೆ ಬಲವಾದ ಮಾತುಗಳಲ್ಲಿ ಎಚ್ಚರಿಕೆ ನೀಡಿದ್ದಾಗಿ ಹೇಳಿಕೊಂಡಿದ್ದಾರೆ. ಇರಾನಿನ ಕಮಾಂಡರ್‌ಗಳು ಅಚ್ಚರಿಗೊಂಡಿದ್ದಾರೆ ಎಂದಿದ್ದಾರೆ. ಅವರಿಗೆ ಏನು ನಡೆಯಲಿದೆ ಎಂದು ತಿಳಿದಿರಲಿಲ್ಲ. ಅವರೆಲ್ಲಾ ಈಗ ಸತ್ತಿದ್ದಾರೆ.



ಇದು ಇನ್ನಷ್ಟು ಕೆಟ್ಟದಾಗಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಈಗಾಗಲೇ ಬಹಳ ಸಾವು ನೋವು ಸಂಭವಿಸಿದೆ. ಆದರೆ, ಈ ಹತ್ಯಾಕಾಂಡವನ್ನು ಕೊನೆಗೊಳಿಸಲು ಇನ್ನೂ ಸಮಯವಿದೆ. ಇರಾನ್ ಒಂದು ಒಪ್ಪಂದ ಮಾಡಿಕೊಳ್ಳಬೇಕು ಎಂದು ಟ್ರಂಪ್ ಕೊನೆಯದಾಗಿ ಮನವಿ ಮಾಡಿದ್ದಾರೆ. ಇಸ್ರೇಲ್‌ನ ವಾಯುದಾಳಿಯಲ್ಲಿ ಇರಾನ್‌ನ ಆರು ಪ್ರಮುಖ ಪರಮಾಣು ವಿಜ್ಞಾನಿಗಳು ಮತ್ತು ಹಲವಾರು ಹಿರಿಯ ಮಿಲಿಟರಿ ಕಮಾಂಡರ್‌ಗಳು ಸಾವನ್ನಪ್ಪಿದ್ದಾರೆ. ಇರಾನ್‌ನ ಪರಮಾಣು ಶಸ್ತ್ರಾಸ್ತ್ರ ಮೂಲಸೌಕರ್ಯವನ್ನು ನಾಶಪಡಿಸುವ ಗುರಿಯನ್ನು ಹೊಂದಿರುವ ಮುಂಜಾಗ್ರತಾ ಕ್ರಮ ಎಂದು ಇಸ್ರೇಲ್ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ. ಇಸ್ರೇಲ್ ಅಧಿಕಾರಿಗಳು ಹೇಳುವಂತೆ, ಇರಾನ್ ಪರಮಾಣು ಬಾಂಬ್ ತಯಾರಿಸುವುದನ್ನು ತಡೆಯಲು ಈ ದಾಳಿ ಅನಿವಾರ್ಯವಾಗಿತ್ತು. ಇರಾನ್ ಮಾತ್ರವಲ್ಲ, ಇಡೀ ಜಗತ್ತಿಗೆ ಅಪಾಯವಾಗುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಟ್ರಂಪ್ ಅವರ ಹೇಳಿಕೆಗಳು ಜಾಗತಿಕ ಮಟ್ಟದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿವೆ. ಕೆಲವರು ಟ್ರಂಪ್ ಅವರ ಬೆಂಬಲಕ್ಕೆ ನಿಂತರೆ, ಇನ್ನು ಕೆಲವರು ಟೀಕಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಸಲು ಟ್ರಂಪ್ ಅವರು ಮಧ್ಯಸ್ಥಿಕೆ ವಹಿಸಬೇಕು ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆಯಾಗಿ ಇರಾನ್ ಮತ್ತು ಇಸ್ರೇಲ್ ನಡುವಿನ ಉದ್ವಿಗ್ನ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ ಇದೆ. ಅಮೆರಿಕದ ಪಾತ್ರ ಈ ಸಂಘರ್ಷದಲ್ಲಿ ನಿರ್ಣಾಯಕವಾಗಲಿದೆ. ಟ್ರಂಪ್ ಅವರ ಮುಂದಿನ ನಡೆ ಏನು ಎಂಬುದನ್ನು ಕಾದು ನೋಡಬೇಕಿದೆ.

**ಶಾಂತಿ ಸ್ಥಾಪಿಸಲು ಸಿದ್ಧ**

### ಟ್ರಂಪ್ ಹೇಳಿದ್ದೇನು?

**ಅಮೆರಿಕದ ಮೇಲೆ ಯಾವುದೇ ರೀತಿಯಲ್ಲಿ ದಾಳಿಯಾದರೆ, ಹಿಂದೆಂದೂ ಕಾಣದ ರೀತಿಯಲ್ಲಿ ಸೇನಾ ಬಲವನ್ನು ಪ್ರಯೋಗಿಸುವುದಾಗಿ ಹೇಳಿದ್ದಾರೆ. ಇತ್ತೀಚೆಗೆ ಇಸ್ರೇಲ್, ಇರಾನ್ ಮೇಲೆ ಆಪರೇಷನ್ ರೈಸಿಂಗ್ ಲಯನ್ ಹೆಸರಿನಲ್ಲಿ ದೊಡ್ಡ ಪ್ರಮಾಣದ ವಾಯುದಾಳಿ ನಡೆಸಿದೆ. ಈ ದಾಳಿಗೂ ಅಮೆರಿಕಕ್ಕೂ ಯಾವುದೇ ಸಂಬಂಧ ಇಲ್ಲ, ಇದರಿಂದ ಅಮೆರಿಕ ಅಂತರ ಕಾಯ್ದುಕೊಂಡಿದೆ ಎಂದು ಟ್ರಂಪ್ ಹೇಳಿದ್ದಾರೆ.**

**ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಈ ಸಮಯದಲ್ಲಿ ಟ್ರಂಪ್ ಅವರ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಖಮೇನಿ ನೇತೃತ್ವದ ಇಸ್ಲಾಮಿಕ್ ಗಣರಾಜ್ಯಕ್ಕೆ ಈ ಮೂಲಕ ಟ್ರಂಪ್ ನೇರ ಸಂದೇಶ ರವಾನಿಸಿದ್ದಾರೆ. ಇರಾನ್ ಮತ್ತು ಇಸ್ರೇಲ್ ನಡುವೆ ಶಾಂತಿ ಸ್ಥಾಪಿಸಲು ತಾವು ಸಿದ್ಧ ಎಂದು ಅವರು ಹೇಳಿದ್ದಾರೆ -ಟ್ರಂಪ್, ಅಮೆರಿಕ ಅಧ್ಯಕ್ಷ**

## ಮುಂಬೈನಲ್ಲಿ ಜೂ. 17 ವರೆಗೂ ಭಾರಿ ಮಳೆ, ಆರೆಂಜ್ ಅಲರ್ಟ್ ಘೋಷಣೆ

**ಮುಂಬೈ:** ನಗರದ ನಾನಾ ಭಾಗಗಳಲ್ಲಿ ರಾತ್ರಿಯಿಡೀ ಮಳೆಯಾಗುತ್ತಿರುವ ಹಿನ್ನೆಲೆ, ಥಾಣೆ, ರಾಯಗಢ ಮತ್ತು ಪಾಲ್ಘರ್ ಜಿಲ್ಲೆಗಳಿಗೆ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಇಂದು ಸಹ ನಗರ ಮತ್ತು ಉಪನಗರ ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂಬೈನ ಹಲವು ಕಡೆ ಗುಡುಗು, ಮಿಂಚು ಸಹಿತ ಭಾರಿ ಮಳೆಯಾಗಿದೆ. ಆದರೂ, ಯಾವುದೇ ಅವಘಡ ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. ಭಾನುವಾರ ಬೆಳಿಗ್ಗೆ 8 ಗಂಟೆಗೆ ಮುಂಬೈ ನಗರದಲ್ಲಿ 31 ಮಿಮೀ ಮಳೆಯಾಗಿದೆ. ಪೂರ್ವ ಮತ್ತು ಪಶ್ಚಿಮ ಉಪನಗರ ಪ್ರದೇಶಗಳಲ್ಲಿ ಕ್ರಮವಾಗಿ 21 ಮಿಮೀ ಮತ್ತು 20 ಮಿಮೀ ಮಳೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಜೂ.16ರಂದು ಭಾರಿ ಮಳೆಯಾಗುವ ಮುನ್ಸೂಚನೆ:** ಸೋಮವಾರ ಬೆಳಿಗ್ಗೆ 2.37ಕ್ಕೆ 3.55 ಮೀಟರ್ ಎತ್ತರದ ಅಲೆಗಳು ಏಳುವ ನಿರೀಕ್ಷೆಯಿದೆ. ಬೆಳಿಗ್ಗೆ 8.20ಕ್ಕೆ 1.06 ಮೀಟರ್ ಎತ್ತರದ ತಗ್ಗು ಅಲೆಗಳು ಏಳುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆಯ



ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ದಕ್ಷಿಣ ಕೊಂಕಣ-ಗೋವಾದ ಹಲವು ಕಡೆಗಳಲ್ಲಿ ಮತ್ತು ಉತ್ತರ ಕೊಂಕಣ ಮತ್ತು ದಕ್ಷಿಣ ಮಧ್ಯ ಮಹಾರಾಷ್ಟ್ರದ ಕೆಲವು ಕಡೆಗಳಲ್ಲಿ ಭಾರೀ ಮಳೆಯಾಗಿದೆ. ಮುಂಬೈ ಸೇರಿದಂತೆ ಉತ್ತರ ಕೊಂಕಣದ ಭಾಗಗಳಲ್ಲಿ ವಾರಾಂತ್ಯದಲ್ಲಿ ಮಳೆಯ ಪ್ರಮಾಣ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

**ಯಾವುದೇ ಅವಘಡ ಎದುರಿಸಲು ಸರ್ಕಾರ ಬದ್ಧ:** ಮುಂಬೈನಲ್ಲಿ ಮಳೆಯಿಂದಾಗಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಸರ್ಕಾರ ಸಿದ್ಧವಾಗಿದೆ. ಎಲ್ಲಾ ಇಲಾಖೆಗಳು ಸನ್ನದ್ಧವಾಗಿವೆ ಎಂದು ಸರ್ಕಾರ ತಿಳಿಸಿದೆ.

ಮಳೆಗಾಲದಲ್ಲಿ ಜನರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಕುಡಿಯುವ ನೀರನ್ನು ಕಾಯಿಸಿ ಆರಿಸಿ, ಕುಡಿಯಬೇಕು ಎಂದು ವೈದ್ಯರು ಮುಂಬೈ ಜನರಿಗೆ ಸಲಹೆ ನೀಡಿದ್ದಾರೆ.

ಮುಂಬೈ ಕರಾವಳಿಯಲ್ಲಿ ಹೆಚ್ಚಿನ ಅಲೆಗಳ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಭಾನುವಾರ ಮಧ್ಯಾಹ್ನ 2:52ಕ್ಕೆ 4.27 ಮೀಟರ್ ಎತ್ತರದ ಅಲೆಗಳು ಏಳುವ ಸಾಧ್ಯತೆಯಿದೆ. ನಂತರ ರಾತ್ರಿ 8:55ಕ್ಕೆ 1.91 ಮೀಟರ್ ತಗ್ಗು ಅಲೆಗಳು ಏಳುವ ನಿರೀಕ್ಷೆಯಿದೆ. ಸೋಮವಾರ ಮುಂಜಾನೆ 2:37ಕ್ಕೆ 3.55 ಮೀಟರ್ ಎತ್ತರದ ಅಲೆಗಳು ಮತ್ತು ಬೆಳಿಗ್ಗೆ 8:20ಕ್ಕೆ 1.06 ಮೀಟರ್ ತಗ್ಗು ಅಲೆಗಳು ಏಳುವ ಮುನ್ಸೂಚನೆ ಇದೆ.

- **ಮುಂಬೈನಲ್ಲಿ ಭಾರಿ ಮಳೆ ಹಲವು ಗ್ರಾಮಗಳಿಗೆ ಆರೆಂಜ್, ಯೆಲ್ಲೋ ಅಲರ್ಟ್ ಘೋಷಣೆ**
- **ಉತ್ತರ ಕೊಂಕಣದ ಭಾಗಗಳಲ್ಲಿ ವಾರಾಂತ್ಯದಲ್ಲಿ ಮಳೆಯ ಪ್ರಮಾಣ ಹೆಚ್ಚಾಗುವ ನಿರೀಕ್ಷೆ**
- **ಮಳೆ ಹಿನ್ನೆಲೆ ಕುಡಿಯುವ ನೀರನ್ನು ಕಾಯಿಸಿ ಆರಿಸಿ, ಕುಡಿಯಬೇಕು ಆರೋಗ್ಯ ಕಾಪಾಡಿಕೊಳ್ಳಲು ಸಲಹೆ**

## ಮಾಜಿ ಸಿಎಂ ರೂಪಾನಿ ಮೃತದೇಹ ಗುರುತು ಪತ್ತೆ

ಅಹಮದಾಬಾದ್: ಏರ್ ಇಂಡಿಯಾ ವಿಮಾನ ಅಪಘಾತದ ತನಿಖೆ ತೀವ್ರಗೊಂಡಂತೆ, ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಮೃತದೇಹಗಳನ್ನು ಡಿಎನ್‌ಎ ಪರೀಕ್ಷೆಯ ಮೂಲಕ ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನ ಅಪಘಾತ ತನಿಖಾ ಮಂಡಳಿಯ (ಎಎಐಬಿ) ನೇತೃತ್ವದ ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳು ಮೂರು ದಶಕಗಳಲ್ಲಿ ದೇಶದ ಅತ್ಯಂತ ಭೀಕರ ವಾಯು ದುರಂತದ ಕಾರಣಗಳ ತನಿಖೆ ನಡೆಸುತ್ತಿದೆ.

ಪ್ರಸ್ತುತ 32 ಶವ ಗುರುತಿಸಲಾಗಿದೆ ಮತ್ತು 14 ಜನರ ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ ಎಂದು ಹೆಚ್ಚುವರಿ ನಾಗರಿಕ ಸೂಪರಿ ಎಂಡೆಂಟ್ ಡಾ. ರಜನೀಶ್ ಪಟೇಲ್ ತಿಳಿಸಿದರು, ದುರಂತದ ಮೂರು ದಿನಗಳ ನಂತರ ಡಿಎನ್‌ಎ ಪರೀಕ್ಷೆಗಳ ಮೂಲಕ ಮೃತರನ್ನು ಗುರುತಿಸುವ ಪ್ರಕ್ರಿಯೆಯು ವೇಗಗೊಂಡಿದೆ.

ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಡಿಎನ್‌ಎ ಮಾದರಿ ಇಂದು ಬೆಳಿಗ್ಗೆ 11.10 ಕ್ಕೆ ಹೊಂದಿಕೆಯಾಯಿತು ಎಂದು ಗುಜರಾತ್ ಗೃಹ ಖಾತೆ ರಾಜ್ಯ ಸಚಿವ ಹರ್ಷ ಸಂಘವಿ ಗಾಂಧಿನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

## ಕೆನಡಾಕ್ಕೆ ಬಂದಿಳಿದ ಜಿ7 ರಾಷ್ಟ್ರಗಳ ಮುಖ್ಯಸ್ಥರು

**ಕೆನಡಾ:** ಮಧ್ಯಪ್ರಾಚ್ಯದಲ್ಲಿ ವ್ಯಾಪಕಗೊಳ್ಳುತ್ತಿರುವ ಯುದ್ಧ ಮತ್ತು ಮಿತ್ರರಾಷ್ಟ್ರಗಳು ಮತ್ತು ಪ್ರತಿಸ್ಪರ್ಧಿಗಳೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬಗೆಹರಿಯದ ವ್ಯಾಪಾರ ಯುದ್ಧದಿಂದ ಮುಚ್ಚಿಹೋಗಿರುವ ಗ್ರೂಪ್ ಆಫ್ ಸೆವೆನ್ ಶೃಂಗಸಭೆಗಾಗಿ ವಿಶ್ವದ ಕೆಲವು ದೊಡ್ಡ ಆರ್ಥಿಕ ಶಕ್ತಿಗಳ ನಾಯಕರು ಇಂದು ಕೆನಡಿಯನ್ ರಾಕೀಸ್‌ಗೆ ಆಗಮಿಸಿದ್ದಾರೆ. ಇರಾನ್ ಮೇಲೆ ಇಸ್ರೇಲ್‌ನ ದಾಳಿಗಳು ಮತ್ತು ಟೆಹ್ರಾನ್‌ನ ಪ್ರತೀಕಾರವು ಅನೇಕ ವಿಶ್ವನಾಯಕರನ್ನು ಅನಿರೀಕ್ಷಿತವಾಗಿ ಸೆರೆಹಿಡಿದಂತೆ ಕಂಡುಬಂದಿತು, ಟ್ರಂಪ್ ವಿಶ್ವ ಪೊಲೀಸ್ ಪಾತ್ರದಿಂದ ಅಮೆರಿಕವನ್ನು ಹಿಂತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವಾಗ ಹೆಚ್ಚು ಅಸ್ಥಿರವಾದ ಪ್ರಪಂಚದ ಇತ್ತೀಚಿನ ಸಂಕೇತವಾಗಿದೆ.

ಶೃಂಗಸಭೆಯಲ್ಲಿ ಭಾಗವಹಿಸಲು ಕೆನಡಾಕ್ಕೆ ವಿಮಾನದಲ್ಲಿ ಆಗಮಿಸಿದ ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್, ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಇತರ ವಿಶ್ವನಾಯಕರೊಂದಿಗೆ ಪರಿಸ್ಥಿತಿಯನ್ನು ಶಮನಗೊಳಿಸುವ ಪ್ರಯತ್ನಗಳ ಕುರಿತು ಚರ್ಚಿಸಿದ್ದೇನೆ ಎಂದು ಹೇಳಿದರು. ಬ್ರಿಟನ್ ಮಧ್ಯಪ್ರಾಚ್ಯಕ್ಕೆ ರಾಯಲ್ ಏರ್ ಫೋರ್ಸ್ ಜೆಟ್‌ಗಳು ಮತ್ತು ಇತರ ಮಿಲಿಟರಿ ಬಲವರ್ಧನೆಗಳನ್ನು ಕಳುಹಿಸುತ್ತಿದೆ. ಇರಾನ್ ಹೊಂದಿರುವ ಪರಮಾಣು ಕಾರ್ಯಕ್ರಮದ ಬಗ್ಗೆ ನಮಗೆ ಬಹಳ ಹಿಂದಿನಿಂದಲೂ ಕಳವಳಗಳಿವೆ. ಇಸ್ರೇಲ್‌ನ ಆತ್ಮರಕ್ಷಣೆಯ ಹಕ್ಕನ್ನು ನಾವು ಗುರುತಿಸುತ್ತೇವೆ, ಆದರೆ ಇದು ಕಡಿಮೆಯಾಗಬೇಕು ಎಂಬುದು ಸಂಪೂರ್ಣವಾಗಿ ಸ್ಪಷ್ಟವಾಗಿದೆ.



### ತೀವ್ರವಾದ ಚರ್ಚೆಗಳು ನಡೆಯಲಿವೆ

**ಇರಾನ್ ಪ್ರದೇಶಕ್ಕೆ ಮತ್ತು ಹೆಚ್ಚು ವ್ಯಾಪಕವಾಗಿ ಉಲ್ಬಣಗೊಳ್ಳುವ ಅಪಾಯವಿದೆ ಎಂದು ಸ್ಟಾರ್ಮರ್ ಹೇಳಿದರು, ಶೃಂಗಸಭೆಯಲ್ಲಿ ತೀವ್ರವಾದ ಚರ್ಚೆಗಳು ಮುಂದುವರಿಯುತ್ತವೆ ಎಂದು ಅವರು ನಿರೀಕ್ಷಿಸಿದ್ದಾರೆ. ಟ್ರಂಪ್ ಶೃಂಗಸಭೆಯ ವೈಲ್ಡ್ ಕಾರ್ಡ್ ಶೃಂಗಸಭೆಯ ಆತಿಥೇಯರಾಗಿ, ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಸಭೆಯ ಕೊನೆಯಲ್ಲಿ ಜಂಟಿ ಹೇಳಿಕೆ ಅಥವಾ ಸಂವಹನವನ್ನು ನೀಡುವ ವಾರ್ಷಿಕ ಅಭ್ಯಾಸವನ್ನು ತ್ಯಜಿಸಲು ನಿರ್ಧರಿಸಿದ್ದಾರೆ.**

## ಸಂಸದೆ, ಪತಿಗೆ ಗುಂಡಿಕ್ಕಿ ಹತ್ಯೆ

**ಕಾಲಿಫೋರ್ನಿಯಾ:** ಕಾನೂನು ಜಾರಿ ಅಧಿಕಾರಿಯ ಸೋಗು ಹಾಕಿಕೊಂಡು ಬಂದ ದುಷ್ಕರ್ಮಿಗಳು ಮಿನ್ನೆಸೋಟಾ ಸಂಸದೆ ಮೆಲಿಸ್ಸಾ ಹೋರ್ಟ್ಮನ್ ಹಾಗೂ ಆಕೆಯ ಪತಿಯನ್ನು ಅವರ ಮನೆಯಲ್ಲೇ ನಸುಕಿನಲ್ಲಿ ಗುಂಡಿಟ್ಟು ಹತ್ಯೆ ಮಾಡಿದ್ದಾರೆ. ಸ್ಪೀಕರ್ ಮೆಲಿಸ್ಸಾ ಹೋರ್ಟ್‌ಮನ್ ಹಾಗೂ ಆಕೆಯ ಪತಿ ದಾಳಿಯಲ್ಲಿ ಹತ್ಯೆಗೀಡಾಗಿದ್ದನ್ನು ಗವರ್ನರ್ ಟಿಮ್ ವಾಲ್ಜ್ ದೃಢಪಡಿಸಿದ್ದಾರೆ. ರಾಜ್ಯದ ಸೆನೆಟ್ ಸದಸ್ಯ ಜಾನ್ ಹಾಫ್ ಮನ್ ಹಾಗೂ ಆಕೆಯ ಪತ್ನಿಯ ಮೇಲೂ ದಾಳಿ ನಡೆದಿದ್ದು, ಹಾಫ್ ಮನ್ ತೀವ್ರವಾಗಿ ಗಾಯಗೊಂಡಿದ್ದಾರೆ ಎನ್ನಲಾಗಿದೆ.

## ಗೋದಾವರಿ ನದಿಯಲ್ಲಿ ಮುಳುಗಿ ಐವರು ಹದಿಹರೆಯದ ಯುವಕರ ಸಾವು

**ತೆಲಂಗಾಣ:** ಐವರು ಹದಿಹರೆಯದ ಯುವಕರು ಗೋದಾವರಿ ನದಿಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಕರೀಂ ನಗರದ ಬಸರಾ ಬಳಿ ಭಾನುವಾರ ನಡೆದಿದೆ. ಪ್ರಸಿದ್ಧ ಜ್ಞಾನ ಸರಸ್ವತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಹೈದರಾಬಾದಿನಿಂದ ಬಸರಾಕ್ಕೆ ಸುಮಾರು ಜನರ ತಂಡವು ಬಸರಾಕ್ಕೆ ಬಂದಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೇವಾಲಯಕ್ಕೆ ತೆರಳುವ ಮುನ್ನಾ ಐವರು ಹದಿಹರೆಯದ ಯುವಕರು ಗೋದಾವರಿ ನದಿಯಲ್ಲಿ ಪವಿತ್ರ ಸ್ನಾನ ಮಾಡುವಾಗ ಇದ್ದಕ್ಕಿಂತ ನೀರಿನ ಮಟ್ಟದಲ್ಲಿ ಹೆಚ್ಚಾಗಿದ್ದು, ಆ ಯುವಕರು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ಭೈಂಸಾದ ಸಹಾಯಕ ಪೊಲೀಸ್ ಅಧೀಕ್ಷಕ ಅವಿನಾಶ್ ಕುಮಾರ್ ಮಾಹಿತಿ ನೀಡಿದ್ದಾರೆ. ನಂತರ ರಕ್ಷಣಾ ತಂಡಗಳು ಐವರನ್ನು ಹೊರತೆಗೆದು ಸಮೀಪದ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಆದರೆ ಆಸ್ಪತ್ರೆಗೆ ಆಗಮಿಸುವ ಮುನ್ನವೇ ಐವರೂ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ.

## ಭಾರಿ ಪ್ರಮಾಣದ ಶಸ್ತ್ರಾಸ್ತ್ರ ವಶ

**ಗುವಾಹಟಿ:** ಇಂಫಾಲ್ ಕಣಿವೆಯ ಐದು ಜಿಲ್ಲೆಗಳಲ್ಲಿ ಏಕಕಾಲದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಮಣಿಪುರ ಪೊಲೀಸರು ಮತ್ತು ಭದ್ರತಾ ಪಡೆಗಳು 300ಕ್ಕೂ ಹೆಚ್ಚು ಬಂದೂಕುಗಳು ಮತ್ತು ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ವಶಪಡಿಸಿಕೊಂಡಿವೆ.

ಒಟ್ಟಾರೆಯಾಗಿ 328 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪೈಕಿ ಎಸ್‌ಎಲ್‌ಆರ್ 151, ಐಎನ್‌ಎಸ್‌ಎಎಸ್ 65, ಇತರ ರೀತಿಯ ರೈಫಲ್‌ಗಳು 73, ಕಾರ್ಬೈನ್‌ಗಳು 5, ಎಂಪಿ5 ಎರಡು, ಎಲ್‌ಎಂಜಿ 12, ಎಕೆ ಸರಣಿ ರೈಫಲ್‌ಗಳು 6, ಅಮೋಘ ರೈಫಲ್‌ಗಳು ಎರಡು, ಮಾರ್ಟರ್ ಒಂದು, ಪಿಸ್ತೂಲ್‌ಗಳು 6, ಬ್ಯಾರೆಲ್‌ಗಳು ಎರಡು, ಎಆರ್ 15 ಗನ್ ಒಂದು ಮತ್ತು ಫ್ಲೇರ್ ಗನ್‌ಗಳು ಎರಡು ಸೇರಿವೆ.


ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಲಾರಿ ದೋರ್ಜಿ ಲಾಟೂ ಅವರ ಪ್ರಕಾರ, ಇಂಫಾಲ್ ಕಣಿವೆ ಜಿಲ್ಲೆಗಳ ವಿವಿಧ ಪ್ರದೇಶಗಳಲ್ಲಿ ಅಡಗಿಸಿಟ್ಟಿದ್ದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳ ದೊಡ್ಡ ಸಂಗ್ರಹದ ಬಗ್ಗೆ ಗುಪ್ತಚರ ಮಾಹಿತಿಯ ಮೇರೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಮಣಿಪುರ ಪೊಲೀಸ್, ಕೇಂದ್ರ ಸಶಸ್ತ್ರ ಪೊಲೀಸ್ ಪಡೆ, ಸೇನೆ ಮತ್ತು ಅಸ್ಸಾಂ ರೈಫಲ್ಸ್‌ನ ಜಂಟಿ ತಂಡಗಳು ವಿವಿಧ ಸ್ಥಳಗಳಲ್ಲಿ ಏಕಕಾಲದಲ್ಲಿ ಶೋಧ ಕಾರ್ಯಾಚರಣೆ ಪ್ರಾರಂಭಿಸಿ, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿವೆ.

## ಪಾಕ್ ಸೇನಾ ಮುಖ್ಯಸ್ಥರಿಗೆ ಆಹ್ವಾನ ನೀಡಿಲ್ಲ; ಅಮೆರಿಕ

**ನ್ಯೂಯಾರ್ಕ್:** ಅಮೆರಿಕ ಮಿಲಿಟರಿ ಪರೇಡ್‌ಗೆ ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರನ್ನು ಆಹ್ವಾನಿಸಲಾಗಿದೆ ಎಂಬ ವರದಿಯನ್ನು ಶ್ವೇತಭವನ ನಿರಾಕರಿಸಿದೆ. ಇದು ಸುಳ್ಳು. ಯಾವುದೇ ವಿದೇಶಿ ಸೇನಾ ನಾಯಕರನ್ನು ಆಹ್ವಾನಿಸಲಾಗಿಲ್ಲ ಎಂದು ಶ್ವೇತಭವನದ ಅಧಿಕಾರಿಯೊಬ್ಬರು ಮುನೀರ್ ಅವರ ಆಹ್ವಾನದ ಕುರಿತಾದ ವರದಿಗಳ ಬಗ್ಗೆ ಹೇಳಿದರು.

ಈ ಮೆರವಣಿಗೆಯನ್ನು ಅಮೆರಿಕದ ಅತಿದೊಡ್ಡ ಮಿಲಿಟರಿ ಪ್ರದರ್ಶನಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ, ಇದು ತನ್ನ ರಕ್ಷಣಾ ಸಾಮರ್ಥ್ಯಗಳನ್ನು ಪ್ರದರ್ಶಿಸುವ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಷ್ಠೆಯನ್ನು ಹೆಚ್ಚಿಸುವ ಪ್ರಯತ್ನವಾಗಿದೆ.ಅಮೆರಿಕ ಸ್ವಾತಂತ್ರ್ಯ ಪಡೆಯುವ ಒಂದು ವರ್ಷದ ಮೊದಲು, ಜೂನ್ 14, 1775 ರಂದು ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಹೋರಾಡಲು ಯುಎಸ್ ಸೈನ್ಯದ ಔಪಚಾರಿಕ ಸ್ಥಾಪನೆಯನ್ನು ಈ ಮೆರವಣಿಗೆ ಸ್ಮರಿಸುತ್ತದೆ. ಈ ದಿನಾಂಕವು ಟ್ರಂಪ್ ಅವರ 79 ನೇ ಹುಟ್ಟುಹಬ್ಬದೊಂದಿಗೆ ಹೊಂದಿಕೆಯಾಗುತ್ತದೆ, ಅವರು ಗೌರವ ವಂದನೆ ಸ್ವೀಕರಿಸಲಿದ್ದಾರೆ.ಹೆಲಿಕಾಪ್ಟರ್‌ಗಳು, ಪ್ಯಾರಾಚೂಟಿಸ್ಟ್‌ಗಳ



ಜೊತೆಗೆ ಸಾವಿರಾರು ಸೈನಿಕರು, ಡಜನ್‌ಗಟ್ಟಲೆ ಟ್ಯಾಂಕ್‌ಗಳು ಇತರ ಮಿಲಿಟರಿ ಉಪಕರಣಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ.

ಭಾರತದ ಗಣರಾಜ್ಯೋತ್ಸವ ಅಥವಾ ಫ್ರಾನ್ಸ್‌ನ ಬಾಸ್ಟಿಲ್ ದಿನದ ಮೆರವಣಿಗೆಗಳಂತೆ ಅಮೆರಿಕದಲ್ಲಿ ಮಿಲಿಟರಿ ಮೆರವಣಿಗೆಗಳ ಸಂಪ್ರದಾಯವಿಲ್ಲದ ಕಾರಣ ಇದು ಒಂದು ವಿಶಿಷ್ಟ ಪ್ರದರ್ಶನವಾಗಲಿದೆ.1991 ರಲ್ಲಿ ಕುವೈತ್ ಅನ್ನು ಸ್ವತಂತ್ರಗೊಳಿಸಲು ಅಮೆರಿಕವು ಮೊದಲ ಕೊಲ್ಲಿ ಯುದ್ಧದಲ್ಲಿ ಇರಾಕ್ ಅನ್ನು ಸೋಲಿಸಿದ ನಂತರ ರಾಷ್ಟ್ರೀಯ ವಿಜಯೋತ್ಸವವನ್ನು ನಡೆಸಲಾಯಿತು, ಇದನ್ನು ಆಪರೇಷನ್ ಡಸರ್ಟ್ ಸ್ಟಾರ್ಮ್ ಎಂದೂ ಕರೆಯುತ್ತಾರೆ.

## ಬ್ರಿಟಿಷ್ ಯುದ್ಧ ವಿಮಾನ ತುರ್ತು ಭೂಸ್ಪರ್ಶ

**ತಿರುವನಂತಪುರಂ:** ಇಂಧನ ಕಡಿಮೆಯಾದ ನಂತರ ಬ್ರಿಟಿಷ್ ಎಫ್ -35 ಯುದ್ಧ ವಿಮಾನವು ತಡರಾತ್ರಿ ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಮೂಲಗಳು ತಿಳಿಸಿವೆ. ವಿಮಾನವಾಹಕ ನೌಕೆಯಿಂದ ಹಾರಿದೆ ಎಂದು ನಂಬಲಾದ ಜೆಟ್ ರಾತ್ರಿ 9.30 ರ ಸುಮಾರಿಗೆ ಸುರಕ್ಷಿತವಾಗಿ ಇಳಿಯಿತು ಎಂದು ಮೂಲಗಳು ಮಾಹಿತಿ ನೀಡಿವೆ. ಸುಗಮ ಮತ್ತು ಸುರಕ್ಷಿತ ಲ್ಯಾಂಡಿಂಗ್ ಅನ್ನು ಖಚಿತಪಡಿಸಿಕೊಳ್ಳಲು ವಿಮಾನ ನಿಲ್ದಾಣದ ಅಧಿಕಾರಿಗಳು ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೈಲಟ್ ಕಡಿಮೆ ಇಂಧನವನ್ನು ವರದಿ ಮಾಡಿದರು ಮತ್ತು ಲ್ಯಾಂಡಿಂಗ್ ಮಾಡಲು ಅನುಮತಿ ಕೇಳಿದರು. ಎಲ್ಲವನ್ನೂ ತ್ವರಿತವಾಗಿ ಮತ್ತು ವೃತ್ತಿಪರವಾಗಿ ನಿರ್ವಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ವಿಮಾನವನ್ನು ಪ್ರಸ್ತುತ ವಿಮಾನ ನಿಲ್ದಾಣದಲ್ಲಿ ನಿಲ್ಲಿಸಲಾಗಿದೆ.

## ಯುಪಿಯಲ್ಲಿ ಮೊದಲ ರಾಕೆಟ್ ಉಡಾವಣೆ ಮಾಡಿದ ಇಸ್ರೋ

**ಕುಶಿನಗರ:** ಬಾಹ್ಯಾಕಾಶ ಸಂಸ್ಥೆ ಇಸ್ರೋ ಉತ್ತರ ಪ್ರದೇಶದಲ್ಲಿ ರಾಕೆಟ್ ಉಡಾವಣಾ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತು, ಇದು ಉತ್ತರ ಪ್ರದೇಶದ ಮಣ್ಣಿನಿಂದ ರಾಕೆಟ್ ಮೂಲಕ ಪೇಲೋಡ್ ಅನ್ನು ಉಡಾಯಿಸಲಾದ ಮೊದಲ ಬಾರಿಗೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫ್ರಸ್ಟ್ ಟೆಕ್ ಇಂಡಿಯಾ ಲಿಮಿಟೆಡ್ ಸಹಯೋಗದೊಂದಿಗೆ ನಡೆಸಿದ ಪರೀಕ್ಷೆಯಲ್ಲಿ ರಾಕೆಟ್ ಸಂಜೆ 5:14:33 ಕ್ಕೆ 1.1 ಕಿ.ಮೀ. ಎತ್ತರಕ್ಕೆ ಏರಿತು, ಸಂಪೂರ್ಣ ಯಶಸ್ಸು ಕಂಡಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವಿಜ್ಞಾನಿ ಅಭಿಷೇಕ್ ಸಿಂಗ್, ರಾಕೆಟ್ ಅನ್ನು ಸಂಜೆ 5:14 ಮತ್ತು 33 ಸೆಕೆಂಡುಗಳಲ್ಲಿ ಉಡಾಯಿಸಲಾಯಿತು, ಅದು 1.1 ಕಿ.ಮೀ ಎತ್ತರಕ್ಕೆ ಏರಿತು. ಇದರ ನಂತರ, ಒಂದು ಸಣ್ಣ ಉಪಗ್ರಹ (ಪೇಲೋಡ್) ಹೊರಬಂದಿತು. ಅದು 5 ಮೀಟರ್‌ಗೆ ಬಿದ್ದ ತಕ್ಷಣ, ಅದರ ಪ್ಯಾರಾಚೂಟ್ ಸಕ್ರಿಯಗೊಂಡಿತು ಮತ್ತು ಉಪಗ್ರಹವು ನೆಲದ ಮೇಲೆ 400 ಮೀಟರ್ ಒಳಗೆ ಇಳಿಯಿತು. 15



**ಹೆಮ್ಮೆಯ ವಿಷಯ**

ಕೆಜಿ ರಾಕೆಟ್ ಸಹ ಸುರಕ್ಷಿತವಾಗಿ ಇಳಿಯಿತು. ಈ ಪರೀಕ್ಷೆಯು ಅಕ್ಟೋಬರ್-ನವೆಂಬರ್‌ನಲ್ಲಿ ನಡೆಯಲಿರುವ ದೊಡ್ಡ ಕಾರ್ಯಕ್ರಮಕ್ಕೆ ಮುನ್ನುಡಿಯಾಗಿತ್ತು, ಅಲ್ಲಿ ಸುಮಾರು 900 ಯುವ-ನಿರ್ಮಿತ ಉಪಗ್ರಹಗಳನ್ನು ಪರೀಕ್ಷಿಸಲಾಗುವುದು.

ಫ್ರಸ್ಟ್ ಟೆಕ್ ಇಂಡಿಯಾದ ನಿರ್ದೇಶಕ ವಿನೋದ್ ಕುಮಾರ್ ಕಂಪನಿಯ ಮೋಟಾರ್ ಪರೀಕ್ಷಾ ಯಶಸ್ಸನ್ನು ದೃಢಪಡಿಸಿದರು. ಈ ಪ್ರದೇಶ ಮತ್ತು ಇಡೀ ಭಾರತದಾದ್ಯಂತದ ಮಕ್ಕಳಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಅವರು ಹೇಳಿದರು.

# ಲಾಲೂ ಪ್ರಸಾದ್‌ರ ಕಾಲು ಬುಡದಲ್ಲಿ ಅಂಬೇಡ್ಕರ್ ಫೋಟೊ, ಅವಮಾನ ಆರೋಪ

### ಬಿಜೆಪಿಯಿಂದ ತೀವ್ರ ಖಂಡನೆ, ಹದಿನೈದು ದಿನದೊಳಗೆ ಉತ್ತರಿಸಲು ರಾಜ್ಯ ಪರಿಶಿಷ್ಟ ಜಾತಿಗಳ ಆಯೋಗದಿಂದ ನೋಟಿಸ್

**ಪಟನಾ:** ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ಆರೋಪದ ಮೇಲೆ, ಬಿಹಾರ ರಾಜ್ಯ ಪರಿಶಿಷ್ಟ ಜಾತಿಗಳ ಆಯೋಗವು ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೆ ನೋಟಿಸ್ ನೀಡಿ 15 ದಿನಗಳಲ್ಲಿಉತ್ತರಿಸುವಂತೆ ಸೂಚಿಸಿದೆ.

ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಮುಖ್ಯಸ್ಥ ಲಾಲೂ ಪ್ರಸಾದ್ ಯಾದವ್ ಅವರ 78ನೇ ಜನ್ಮ ದಿನದ ಸಂದರ್ಭದಲ್ಲಿ ಲಾಲೂ ಅವರು ಮನೆಯಲ್ಲಿ ಕುಳಿತಿದ್ದು ಅವರ ಕಾಲಿನ ಬಳಿ ಡಾ. ಅಂಬೇಡ್ಕರ್ ಅವರ ಫೋಟೊ ಇರುವ ವಿಡೀಯೋವನ್ನು ಬಿಜೆಪಿ ಜಾಲತಾಣಗಳಲ್ಲಿಹಂಚಿಕೊಂಡಿತ್ತು. ಪದೇಪದೆ ಲಾಲೂ ಪ್ರಸಾದ್ ಯಾದವ್ ಅವರು ಡಾ.ಅಂಬೇಡ್ಕರ್ ಮತ್ತು ದಲಿತರನ್ನು ಅವಮಾನಿಸುತ್ತಿದ್ದಾರೆ, ಎಂದು ಆಕ್ರೋಶ ವ್ಯಕ್ತಪಡಿಸಿದೆ.

ತಕ್ಷಣ ಎಚ್ಚೆತ್ತ ಬಿಹಾರ ರಾಜ್ಯ ಪರಿಶಿಷ್ಟ ಜಾತಿಗಳ ಆಯೋಗವು ಲಾಲೂ ಅವರಿಗೆ ನೋಟಿಸ್ ನೀಡಿದ್ದು, 15 ದಿನಗಳಲ್ಲಿಉತ್ತರಿಸುವಂತೆ ಸೂಚಿಸಿದೆ. ಈ ಘಟನೆ ರಾಜಕೀಯ ಆರೋಪ-ಪ್ರತ್ಯಾರೋಪಕ್ಕೆ ಕಾರಣವಾಗಿದೆ.

ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಅವರು,ಲಾಲು ಅವರಿಗೆ ಕುಟುಂಬವೇ ಸರ್ವಸ್ವ. ಈ ಘಟನೆಯು ಅಂಬೇಡ್ಕರ್ ಕುರಿತು ಆರ್‌ಜೆಡಿಯ ಮನಸ್ಥಿತಿಯನ್ನು ಬಿಂಬಿಸುತ್ತದೆ, ಎಂದು ಕಿಡಿಕಾರಿದ್ದಾರೆ. ಬಿಹಾರ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಇದೊಂದು ಕ್ಷಮಿಸಲಾಗದ ಅಪರಾಧ. ಬಿಹಾರ ರಾಜ್ಯದ ಇತಿಹಾಸದಲ್ಲಿಈ ಘಟನೆ ಕಪ್ಪು ಚುಕ್ಕೆ. ಲಾಲೂ ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

- **ವಿಡೀಯೋ ಹರಿಬಿಟ್ಟ ಬಿಜೆಪಿಯಿಂದ ತೀವ್ರ ಖಂಡನೆ**
- **ತಾಕತ್ತಿದ್ದರೆ ರಾಹುಲ್ ಖಂಡಿಸಲಿ ಎಂದ ಪ್ರಶಾಂತ್ ಕಿಶೋರ್**
- **ಹದಿನೈದು ದಿನದೊಳಗೆ ಉತ್ತರಿಸಲು ರಾಜ್ಯ ಪರಿಶಿಷ್ಟ ಜಾತಿಗಳ ಆಯೋಗದಿಂದ ನೋಟಿಸ್**



### ದಲಿತರಿಗೆ ಅವಮಾನ: ಮಾಂಝಿ ಕಿಡಿ

**ಕೇಂದ್ರ ಸಚಿವ ಜಿತನ್‌ರಾಮ್ ಮಾಂಝಿ ಅವರು, ತಮ್ಮ ಪಾದದ ಬಳಿ ಅಂಬೇಡ್ಕರ್ ಫೋಟೊ ಇಟ್ಟಿರುವುದು ಕೇವಲ ನಮ್ಮ ನಾಯಕರಿಗೆ ಮಾಡಿದ ಅವಮಾನ ಮಾತ್ರವಲ್ಲ, ಬದಲಿಗೆ ದಲಿತ ಸಮುದಾಯಕ್ಕೆ ಮಾಡಿದ ಅವಮಾನ. ಯಾದವರು ಕೂಡ ಇದನ್ನು ಒಪ್ಪಲಿಕ್ಕಿಲ್ಲ,'' ಎಂದಿದ್ದಾರೆ.**

### ಆರ್‌ಜೆಡಿಗೆ ಕಾಂಗ್ರೆಸ್ ಬಲಗೈ


**ಚುನಾವಣಾ ತಂತ್ರ ನಿಪುಣ ಪ್ರಶಾಂತ್ ಕಿಶೋರ್ ಕೂಡ ಖಂಡಿಸಿದ್ದು , ಬಿಹಾರದಲ್ಲಿಆರ್‌ಜೆಡಿಗೆ ಕಾಂಗ್ರೆಸ್ ಬಲಗೈ ಆಗಿದೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ತಾಕತ್ತಿದ್ದರೆ ಇದನ್ನು ಖಂಡಿಸಿ ಹೇಳಿಕೆ ನೀಡಲಿ, ಎಂದು ತಿವಿದಿದ್ದಾರೆ. ಆದರೆ ಆರ್‌ಜೆಡಿ ಮುಖಂಡ, ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ತಮ್ಮ ತಂದೆಯ ಪರ ಬ್ಯಾಟಿಂಗ್ ಮಾಡಿದ್ದು, ಬಿಜೆಪಿ ಘಟನೆಯನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದು, ಸುಳ್ಳನ್ನು ಹಬ್ಬಿಸುತ್ತಿದೆ. ತಮ್ಮ 78ನೇ ವಯಸ್ಸಿನಲ್ಲೂಜನರ ಒಳಿತಿಗೆ ದಿನದ 10 ಗಂಟೆ ಕೆಲಸ ಮಾಡುತ್ತಾರೆ. ಹೀಗಿದ್ದರೂ ಇಂತಹ ಅರ್ಥವಿಲ್ಲದ ಅಪವಾದ ಮಾಡಲಾಗುತ್ತಿದೆ, ಎಂದಿದ್ದಾರೆ.**

### ವೀಡಿಯೋದಲ್ಲಿ ಏನಿದೆ?

**ವೀಡಿಯೋದಲ್ಲಿ, ಲಾಲು ಪ್ರಸಾದ್ ಅವರು ಸೋಫಾದ ಮೇಲೆ ಕುಳಿತಿದ್ದಾರೆ. ಅವರ ಕಾಲುಗಳು ಹತ್ತಿರದ ಸೋಫಾದ ಮೇಲಿವೆ. ಆಗ ಒಬ್ಬ ಬೆಂಬಲಿಗ ಡಾ. ಅಂಬೇಡ್ಕರ್ ಅವರ ಭಾವಚಿತ್ರವನ್ನು ತರುತ್ತಾನೆ. ಅದನ್ನು ಪ್ರಸಾದ್ ಅವರ ಪಾದಗಳ ಬಳಿ ಇಟ್ಟು ನಮಸ್ಕರಿಸುತ್ತಾನೆ. ಈ ಘಟನೆಗೆ ರಾಜಕೀಯ ವಿರೋಧಿಗಳು ತೀವ್ರ ಟೀಕೆ ವ್ಯಕ್ತವಾಗುತ್ತಿದೆ.**

**15 ದಿನಗಳಲ್ಲಿ ಪ್ರತಿಕ್ರಿಯಿಸಲು ಎಚ್ಚರಿಕೆ:**ಲಾಲು ಪ್ರಸಾದ್ ಅವರು 15 ದಿನಗಳಲ್ಲಿ ಪ್ರತಿಕ್ರಿಯಿಸಬೇಕು. ತಪ್ಪಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಆಯೋಗ ಎಚ್ಚರಿಸಿದೆ.

**ಲಾಭಕ್ಕಾಗಿ ಆಯೋಗ ಬಳಕೆ:** ಬಿಹಾರದಲ್ಲಿ ರಾಜಕೀಯ ವಾತಾವರಣವು ಬಿಸಿ ಏರಿದೆ. ದಲಿತ ನಾಯಕನಿಗೆ ಅವಮಾನ ಮಾಡಿದ್ದಾರೆಂದು ಆರ್‌ಜೆಡಿ ಮುಖ್ಯಸ್ಥರ ವಿರುದ್ಧ ಬಿಜೆಪಿ ಆರೋಪಿಸಿದೆ. ಇದಕ್ಕೆ ಪ್ರತಿಕ್ರಿಯಿಸಿದ ತೇಜಸ್ವಿ ಯಾದವ್, ಆಯೋಗಗಳನ್ನು ಬಿಜೆಪಿ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಹೇಳಿದರು.



# ಕುಂಟುತ್ತಲೇ 100 ಕೋಟಿ ಕ್ಲಬ್ ಸೇರಿದ ಹೌಸ್‌ಫುಲ್-5

ಅಕ್ಷಯ್ ಕುಮಾರ್, ಅಭಿಷೇಕ್ ಬಚ್ಚನ್, ರಿತೇಶ್ ದೇಶಮುಖ್, ಜಾಕ್ವೆಲಿನ್ ಫರ್ನಾಂಡಿಸ್ ಸೇರಿದಂತೆ ಬಾಲಿವುಡ್ ಹಲವು ತಾರೆಯರನ್ನೊಳಗೊಂಡ ಹೌಸ್ ಫುಲ್-5 ಚಿತ್ರ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಇದೇ ಜೂನ್ 6ರಂದು ತೆರೆ ಕಂಡ ಈ ಚಿತ್ರ 8 ದಿನಗಳಲ್ಲೇ ನೂರು ಕೋಟಿಯ ಕ್ಲಬ್ ಸೇರಿದೆ. ಅಕ್ಷಯ್ ಕುಮಾರ್, ಅಭಿಷೇಕ್ ಬಚ್ಚನ್, ರಿತೇಶ್ ದೇಶಮುಖ್ ಮುಖ್ಯಪಾತ್ರದಲ್ಲಿ ನಟಿಸಿರುವ ಈ ಚಿತ್ರ ಜೂನ್ 6ರಂದು ತೆರೆ ಕಂಡಿತ್ತು. ಮೊದಲ ದಿನವೇ 24 ಕೋಟಿ ಗಳಿಕೆಯೊಂದಿಗೆ ಕುಂಟುತ್ತಾ ಸಾಗಿರುವ ಹೌಸ್‌ಫುಲ್ 5 ಚಿತ್ರ ಕೊನೆಗೂ ನೂರು ಕೋಟಿ ಕ್ಲಬ್ ಸೇರಿದೆ. 8ನೇ ದಿನ 6 ಕೋಟಿ ಗಳಿಕೆಯೊಂದಿಗೆ ವಿಶ್ವಾದ್ಯಂತ ಒಟ್ಟು 200 ಕೋಟಿ ರೂ. ಗಳಿಸಿದೆ.

**8ನೇ ದಿನದ ಗಳಿಕೆಯಲ್ಲಿ ಭಾರೀ ಕುಸಿತ:** ಈ ಹಿಂದೆ ಬ್ಲಾಕ್ ಬಸ್ಟರ್ ಚಿತ್ರಗಳನ್ನು ನೀಡುತ್ತಾ ಆಕಾಶಕ್ಕೆ ಏಣಿ ಹಾಕಿ ಕುಂತಿದ್ದರು ಅಕ್ಷಯ್ ಕುಮಾರ್. ಆದ್ರೆ.. ಹಣೆಬರಹಕ್ಕೆ ಹೊಣೆ ಯಾರು? ಅನ್ನುವಂತೆ ಕೆಲ ವರ್ಷಗಳಿಂದ ಅದೃಷ್ಟ ಕೈ ಕೊಟ್ಟಿದೆ. ಹೆಚ್ಚಾಗಿ ಕಾಮಿಡಿ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದು ಒಂದಾದ ಮೇಲೊಂದು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಸೋಲನ್ನು ಕಂಡಿವೆ. ಎಷ್ಟೇ ಕಷ್ಟಪಟ್ಟು ಚಿತ್ರ ಮಾಡಿದ್ರೂ ಪ್ರೇಕ್ಷಕರು ಕ್ಯಾರೇ ಎನ್ನುತ್ತಿಲ್ಲ. ಹೀಗಾಗಿಯೇ ಹಿಂದೆಯೆಲ್ಲ ಇವರನ್ನು ಲಕ್ಕಿ ಕುಮಾರ್ ಎಂದು ಕರೆಯುತ್ತಿದ್ದ ಬಾಲಿವುಡ್ ಈಗ ಇವರನ್ನು ಅನ್‌ಲಕ್ಕಿ ಕುಮಾರ್ ಎಂದು ಕರೆಯುತ್ತಿದೆ. ಆದ್ರೆ ಭಾರೀ ನಿರೀಕ್ಷೆ ಮೂಡಿಸಿದ್ದ ಹೌಸ್‌ಫುಲ್ ಚಿತ್ರದ ಕಲೆಕ್ಷನ್ ಕೂಡ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಮೊದಲ ವಾರದಲ್ಲಿ 127.25 ಕೋಟಿ ಗಳಿಸಿದ್ದ ಹೌಸ್‌ಫುಲ್ 5 2ನೇ ವಾರದ ಮೊದಲ ಕೇವಲ 6.07 ಕೋಟಿ ರೂ. ಗಳಿಸಿ ಭಾರೀ ನಿರಾಸೆ ಮೂಡಿಸಿದೆ. ಇದರೊಂದಿಗೆ ಚಿತ್ರದ ಒಟ್ಟು ಗಳಿಗೆ 133.32 ಕೋಟಿಗೆ ತಲುಪಿದೆ. ಈ ಹಿಂದಿನ ಹೌಸ್‌ಫುಲ್ 4 ಸಿರೀಸ್‌ಗಳನ್ನು ನೋಡಿ ಪ್ರೇಕ್ಷಕರು ಭೇಷ್ ಎಂದಿದ್ದರು. ಆದರೀಗ ಕುಂಟುತ್ತಾ ಸಾಗಿರುವ 5ನೇ ಸರಣಿ 2ನೇ ವಾರದಲ್ಲಾದರೂ ಹಿಟ್ ಆಗುತ್ತಾ ಎನ್ನುವುದನ್ನು ಕಾದು ನೋಡಬೇಕಿದೆ.


### ಯಾವ ದಿನ ಎಷ್ಟು ಕಲೆಕ್ಷನ್?

- ಮೊದಲ ದಿನ 24 ಕೋಟಿ ರೂ.
- ಎರಡನೇ ದಿನ 31 ಕೋಟಿ ರೂ.
- ಮೂರನೇ ದಿನ 32.5 ಕೋಟಿ ರೂ.
- ನಾಲ್ಕನೇ ದಿನ 13 ಕೋಟಿ ರೂ.
- ಐದನೇ ದಿನ 11.25 ಕೋಟಿ ರೂ.
- ಆರನೇ ದಿನ 8.5 ಕೋಟಿ ರೂ.
- ಏಳನೇ ದಿನ 7 ಕೋಟಿ ರೂ.
- ಎಂಟನೇ ದಿನ 6 ಕೋಟಿ ರೂ.
- ಒಟ್ಟು 133.25 ಕೋಟಿ

# ಮಕ್ಕಳೊಂದಿಗೆ ಪಲ್ಟಿ ಹೊಡೆದ ಯಶ್







ರಾಕಿಂಗ್ ಸ್ಟಾರ್ ಯಶ್ ಸುಮ್ನೆ ಅಲ್ಲ. ಜಗತ್ತಿನ ದಿ ಬೆಸ್ಟ್ ಫಾದರ್ ನೋಡಿ. ಹೀಗೆ ರಾಧಿಕಾ ಪಂಡಿತ್ ಹೇಳಿದ್ದಾರೆ. ಇದಕ್ಕೆ ಸಾಕ್ಷಿ ಅನ್ನುವ ಹಾಗೆ ಒಂದು ವಿಡಿಯೋ ಕೂಡ ಹಂಚಿಕೊಂಡಿದ್ದಾರೆ. ಫಾದರ್ಸ್ ಡೇ ದಿನ ರಾಧಿಕಾ ಪಂಡಿತ್ ಒಂದು ವಿಡಿಯೋ ಹಂಚಿಕೊಂಡಿದ್ದಾರೆ. ಈ ವಿಡಿಯೋದಲ್ಲಿ ರಾಕಿ ಭಾಯ್ ಯಶ್ ಇದ್ದಾರೆ. ಇವರ ಜೊತೆಗೆ ತಮ್ಮ ಮಕ್ಕಳಿಬ್ಬರೂ ಇದ್ದಾರೆ. ಪಕ್ಕದಲ್ಲಿ ಸ್ಪೈಡರ್‌ಮ್ಯಾನ್ ಕೂಡ ಇದ್ದಾರೆ. ಈ ಒಂದು ವಿಡಿಯೋ ನೋಡಿದ್ರೆ ಸಾಕು ನೋಡಿ. ತಮ್ಮ ಮಕ್ಕಳನ್ನ ಯಶ್ ಅದೆಷ್ಟು ಇಷ್ಟಪಡ್ತಾರೆ ಅಂತ ತಿಳಿಯುತ್ತದೆ. ಮಕ್ಕಳಿಗಾಗಿ ಅಪ್ಪ ರಾಕಿ ಭಾಯ್ ಏನಲ್ಲ ಮಾಡ್ತಾರೆ ಅನ್ನೋದು ತಿಳಿಯುತ್ತದೆ. ಎಲ್ಲಾ ಅಪ್ಪಂದಿರು ಹೀಗೆ ಇರ್ತಾರೆ. ಆದರೆ, ರಾಧಿಕಾ ಪಂಡಿತ್ ತಮ್ಮ ರಾಕಿ ಭಾಯ್ ಸ್ಟಾರ್ ಆದ್ರೂ ಅದೆಷ್ಟು ಸ್ಪೆಷಲ್ ಅನ್ನೋದನ್ನ ತಿಳಿಸಿದ್ದಾರೆ. ಫಾದರ್ಸ್ ಡೇಗೇನೆ ಹೀಗೆ ಸ್ಪೆಷಲ್ ಆಗಿಯೆ ವಿಶ್ ಮಾಡಿದ್ದಾರೆ.


**ರಾಕಿ ಭಾಯ್ ದಿ ಬೆಸ್ಟ್ ಫಾದರ್:** ಅಪ್ಪಂದಿರು ಮಕ್ಕಳ ಜೊತೆಗೆ ಮಕ್ಕಳು ಆಗೋದು ಕಾಮನ್. ಸ್ಟಾರ್ ರಾಕಿ ಭಾಯ್ ಹೀಗೆ ಇರ್ತಾರಾ? ಹೌದು, ರಾಕಿಂಗ್ ಸ್ಟಾರ್ ಯಶ್ ಕೂಡ ಅದೇ ರೀತಿನೇ ಇದ್ದಾರೆ. ಮಕ್ಕಳಾದ ಯಥರ್ವ ಮತ್ತು ಐರಾ ಜೊತೆಗೆ ಮಕ್ಕಳಂತೇನೆ ಆಟವಾಡಿದ್ದಾರೆ. ನೆಲದ ಮೇಲೆ ತಲೆ ಕೆಳಗೆ ಮಾಡಿ ಲಗಾಟಿ ಹೊಡೆದಿದ್ದಾರೆ.



# ಭಾರತದ ಧ್ವಜ ತೆಗೆಯಬೇಕು ಆಮಿರ್ ಖಾನ್‌ಗೆ ಸೂಚನೆ ನೀಡಿದ್ದ ಪಾಕಿಸ್ತಾನ

ಪಾಕಿಸ್ತಾನದಲ್ಲೂ ನಟ ಆಮಿರ್ ಖಾನ್ ಅವರಿಗೆ ಅಭಿಮಾನಿಗಳು ಇದ್ದಾರೆ. 'ದಂಗಲ್' ಸಿನಿಮಾವನ್ನು ಪಾಕಿಸ್ತಾನದಲ್ಲಿ ಬಿಡುಗಡೆ ಮಾಡಲು ಆಮಿರ್ ಖಾನ್ ಒಪ್ಪಲಿಲ್ಲ. ಅದಕ್ಕೆ ಕಾರಣ ಕೂಡ ಇದೆ. 'ಸಿತಾರೆ ಜಮೀನ್ ಪರ್' ಸಿನಿಮಾದ ಬಿಡುಗಡೆ ಹೊಸ್ತಿಲಲ್ಲಿ ಆಮಿರ್ ಖಾನ್ ಅವರು ಆ ಘಟನೆಯನ್ನು ನೆನಪಿಸಿಕೊಂಡಿದ್ದಾರೆ. ಆಮಿರ್ ಖಾನ್ ನಟನೆಯ 'ದಂಗಲ್' ಸಿನಿಮಾ ವಿಶ್ವಾದ್ಯಂತ ಅಂದಾಜು 2 ಸಾವಿರ ಕೋಟಿ ರೂಪಾಯಿ ಗಳಿಸಿತ್ತು. 2016ರಲ್ಲಿ ಬಿಡುಗಡೆ ಆದ ಆ ಚಿತ್ರಕ್ಕೆ ವಿವಿಧ ದೇಶಗಳಲ್ಲಿ ಪ್ರಶಂಸೆ ಸಿಕ್ಕಿತು. ವಿಶೇಷವಾಗಿ ಚೀನಾದ ಜನರು ಆ ಸಿನಿಮಾವನ್ನು ಸಖತ್ ಇಷ್ಟಪಟ್ಟರು. ಆದರೆ ಪಾಕಿಸ್ತಾನದಲ್ಲಿ 'ದಂಗಲ್' ಸಿನಿಮಾ ಬಿಡುಗಡೆ ಆಗಲೇ ಇಲ್ಲ. ಅದಕ್ಕೆ ಕಾರಣ ಏನು ಎಂಬುದನ್ನು ಈಗ ಆಮಿರ್ ಖಾನ್ ಅವರು ವಿವರಿಸಿದ್ದಾರೆ. ದಂಗಲ್' ಸಿನಿಮಾದಲ್ಲಿ ಇದ್ದ ಭಾರತದ ರಾಷ್ಟ್ರ ಧ್ವಜ ಮತ್ತು ರಾಷ್ಟ್ರ ಗೀತೆಯನ್ನು ತೆಗೆಯಬೇಕು ಎಂದು ಪಾಕಿಸ್ತಾನದ ಸೆನ್ಸಾರ್ ಮಂಡಲಿ ಸೂಚಿಸಿತ್ತು. ಆದರೆ ಅದಕ್ಕೆ ಆಮಿರ್ ಖಾನ್ ಒಪ್ಪಿಕೊಳ್ಳಲಿಲ್ಲ. 'ಆಪ್ ಕಿ ಅದಾಲತ್' ಕಾರ್ಯಕ್ರಮದಲ್ಲಿ ಆಮಿರ್ ಖಾನ್ ಅವರು ಈ ವಿಷಯವನ್ನು ಹಂಚಿಕೊಂಡಿದ್ದಾರೆ. 'ದಂಗಲ್ ಸಿನಿಮಾ ಬಿಡುಗಡೆ ಆದಾಗ ಡಿಸ್ನಿಯವರು ಕೂಡ ನಿರ್ಮಾಣದಲ್ಲಿ ಪಾಲುದಾರಿಕೆ ಹೊಂದಿದ್ದರು. ಅವರೇ ಸಿನಿಮಾ ಬಿಡುಗಡೆ ಮಾಡಿದರು. ಪಾಕಿಸ್ತಾನದಲ್ಲಿ ಬಿಡುಗಡೆ ಮಾಡಲು ಕೆಲವು ನಿರ್ಬಂಧ ಇದೆ ಎಂದು ತಿಳಿಸಿದರು ಎಂದು ಆ ಘಟನೆಯನ್ನು ಆಮಿರ್ ಖಾನ್ ನೆನಪಿಸಿಕೊಂಡಿದ್ದಾರೆ. ಗೀತಾ ಫೋಗತ್ ಕುಸ್ತಿ ಗೆದ್ದಾಗ ನಮ್ಮ ರಾಷ್ಟ್ರ ಧ್ವಜ ಮೇಲಕ್ಕೆ ಹಾರುತ್ತದೆ ಹಾಗೂ ನಮ್ಮ ರಾಷ್ಟ್ರ ಗೀತೆ ಕೇಳಿಸುತ್ತದೆ. ಆ ಎರಡನ್ನೂ ನೀವು ತೆಗೆದುಹಾಕಬೇಕು, ಇಲ್ಲದಿದ್ದರೆ ಸಿನಿಮಾಗೆ ಸೆನ್ಸಾರ್ ಪ್ರಮಾಣ ಪತ್ರ ನೀಡುವುದಿಲ್ಲ ಅಂತ ಪಾಕಿಸ್ತಾನದವರು ನಮಗೆ ಹೇಳಿದ್ದರು. ಹಾಗಾದರೆ ಪಾಕಿಸ್ತಾನದಲ್ಲಿ ನಮ್ಮ ಸಿನಿಮಾ ಬಿಡುಗಡೆ ಮಾಡುವುದು ಬೇಡ ಅಂದು ನಾನು ಕೂಡಲೇ ತಿಳಿಸಿದೆ ಎಂದಿದ್ದಾರೆ ಆಮಿರ್ ಖಾನ್. ಪಾಕಿಸ್ತಾನದಲ್ಲಿ ರಿಲೀಸ್ ಮಾಡದೇ ಇದ್ದರೆ ಬಿಸ್ನೆಸ್‌ಗೆ ತೊಂದರೆ ಆಗುತ್ತದೆ ಮತ್ತು ನಷ್ಟ ಆಗುತ್ತದೆ ಎಂದು ಡಿಸ್ನಿಯವರು ಹೇಳಿದರು.

# ದೈವಕ್ಕೆ ಅಪಚಾರ ಮಾಡಿದ ಕಡೆಯೆಲ್ಲ ದುರಂತ





ರಾಷ್ಟ್ರಪ್ರಶಸ್ತಿ ವಿಜೇತ ರಿಷಬ್ ಶೆಟ್ಟಿ ನಿರ್ದೇಶಿಸಿ ನಟಿಸುತ್ತಿರುವ ಬಹುನಿರೀಕ್ಷಿತ ಚಿತ್ರ ಕಾಂತಾರ ಚಾಪ್ಟರ್ 1ಗೆ ಸಾಲು ಸಾಲು ವಿಘ್ನ ಎದುರಾಗುತ್ತಲೇ ಇದೆ. ಶಿವಮೊಗ್ಗದ ಮಾಸ್ತಿಕಟ್ಟೆಯ ಮಾಣಿ ಜಲಾಶಯದಲ್ಲಿ ಶೂಟಿಂಗ್ ದೋಣಿಯೇ ಮುಗುಚಿಹೋಗಿದೆ. ನಟ ರಿಷಬ್ ಶೆಟ್ಟಿ ಸೇರಿ ಹಲವರು ಪಾರಾಗಿದ್ದಾರೆ. ಆದ್ರೆ ಇದು ಕಾಕತಾಳಿಯೊ, ದೈವಗಳಿಗೆ ಮಾಡಿದ ಅಪಚಾರದಿಂದ ಆದ ಘಟನೆಯೋ ಅನ್ನೋ ಮಾತುಕತೆ ನಡೆಯುತ್ತಿದೆ. ಈ ನಡುವೆ ಪಂಜುರ್ಲಿ ದೈವ ರಿಷಬ್‌ಗೆ ಕೊಟ್ಟಿದ್ದ ಕೇಡಿನ ಮುನ್ಸೂಚನೆ ಬಗ್ಗೆ ಸಂಶೋಧಕಿ ಡಾ. ಲಕ್ಷ್ಮಿ ಪ್ರಸಾದ್ ಮಾತನಾಡಿದ್ದಾರೆ. ದೈವಗಳು ಯಾರಿಗೂ ತೊಂದರೆ ಕೊಡಲ್ಲ. ಆದ್ರೆ ಹರಕೆ ಬಾಕಿಯಿದ್ದಾಗ ಅಥವಾ ದೈವಗಳಿಗೆ ಅಪಚಾರವಾದಾಗ ದೈವ ಮುನಿಸುಗೊಳ್ಳುತ್ತದೆ. ಕಾಂತಾರ ಸಿನಿಮಾ-2 ನಡೆಯುವ ಸಂದರ್ಭದಲ್ಲಿ ಈ ಘಟನೆ ಕಾಕತಾಳೀಯವೂ ಆಗಿರಬಹುದು, ದೈವದ ಸೂಚನೆಯೂ ಆಗಿರಬಹುದು ಅಂತಾ ಹೇಳಿದ್ದಾರೆ. ದೈವಗಳು ಶಿಷ್ಟರನ್ನ ರಕ್ಷಣೆ ಮಾಡಿ ದುಷ್ಟರನ್ನ ಶಿಕ್ಷಿಸುತ್ತವೆ. ಯಾವುದೇ ಕಾಲದಲ್ಲೂ ತೊಂದರೆ ಮಾಡುವುದಿಲ್ಲ. ಇಲ್ಲಿ ನಡೆದಿದ್ದೆಲ್ಲ ಕಾಕತಾಳೀಯೂ ಆಗಿರಬಹುದು, ಆಕಸ್ಮಿಕವೂ ಆಗಿರಬಹುದು. ರಾಕೇಶ್ ಪೂಜಾರಿ, ವಿಜುಗೆ ಹೃದಯಾಘಾತ ಆಗಿದೆ. ಅವರಿಬ್ಬರಿಗೇ ಅಲ್ಲ ಕಳೆದ ಒಂದು ವರ್ಷದಲ್ಲಿ ಸಾವಿರಾರು ಯುವಜನರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಕಾಂತಾರ ಚಾಪ್ಟರ್-1 ಚಿತ್ರದಲ್ಲಿ ಸಾವಿರಾರು ಜನ ಕೆಲಸ ಮಾಡ್ತಿದ್ದಾರೆ. ಆದ್ದರಿಂದ ಈ ಘಟನೆ ನಡೆದಿದ್ದು ಆಕಸ್ಮಿಕವೂ ಇರಬಹುದು ಎಂದು ಹೇಳಿದ್ದಾರೆ.

**ದೈವಕ್ಕೆ ಅನ್ಯಾಯವಾದಾಗ ಶಿಕ್ಷಿಸಿವೆ:** ಮುಂದುವರಿದು ಅಲೌಕಿಕ ನೆಲೆಗಟ್ಟಿನಲ್ಲಿ ಹೇಳೋದಾದ್ರೆ ದೈವಕ್ಕೆ ಅಪಚಾರ ಮಾಡಿದ ಕಡೆಯೆಲ್ಲ ದುರಂತಗಳು ಆಗಿವೆ. ದೈವಕ್ಕೆ ಹರಕೆ ತೀರಿಸದಿದ್ರೆ, ಅನ್ಯಾಯ ಮಾಡಿದ್ರೆ ದೈವಗಳು ಶಿಕ್ಷಿಸಿರುವ ಉದಾಹರಣೆಗಳಿವೆ. ಕಾಂತಾರ ಸಿನಿಮಾ ಮಾತ್ರವಲ್ಲದೇ ಈ ಹಿಂದೆಯೂ ದೈವದ ಬಗ್ಗೆ ಹಲವು ಸಿನಿಮಾಗಳಲ್ಲಿ ತೋರಿಸಿದ್ದಾರೆ. ರಿಷಬ್ ಅವರ ಚಿತ್ರದಲ್ಲಿ ತೆರೆಯ ಮೇಲೆ ದೈವಕ್ಕೆ ಎಲ್ಲಿಯೂ ಅಪಚಾರವಾಗಿಲ್ಲ. ತೆರೆಯ ಹಿಂದೆ ಏನಾಗಿದೆಯೋ ನಮಗೆ ಗೊತ್ತಿಲ್ಲ. ಅಲ್ಲದೇ ದೈವವು ಸಹ ಮುಂದಿನ ದಿನಗಳಲ್ಲಿ ತೊಂದ್ರೆ ಬರಬಹುದು ಅಂತಾ ಹೇಳಿದೆ, ದೈವಗಳು ಹೇಳಿದ ನುಡಿಗಟ್ಟುಗಳು ನಿಜವಾಗಿದೆ ಅನ್ನೋದು ಜನರ ನಂಬಿಕೆ ಎಂದು ತಿಳಿಸಿದ್ದಾರೆ.

**ದೈವ ಕಟ್ಟಿದವರು ಹೇಳಿದ ಮಾತು ನಿಜವಾಗಿದೆ:** ರಿಷಬ್ ಶೆಟ್ಟಿ ದೈವದ ಆಜ್ಞೆ ಪಡೆದೇ ಸಿನಿಮಾ ಶೂಟಿಂಗ್ ಶುರು ಮಾಡಿದ್ದಾರೆ. ದೈವ ಕೂಡ ಅಪಾಯ ಬರಬಹುದು ನಾನು ರಕ್ಷಣೆ ಕೊಡ್ತೀನಿ ಎಂದು ಹೇಳಿತ್ತು. ಕಷ್ಟ ಬಂದಾಗ ಜನ ದೈವದ ಬಳಿ ಹೋಗ್ತಾರೆ, ದೈವ ನುಡಿಗಟ್ಟು ಕೊಡುತ್ತೆ. ಆ ಕ್ಷಣಕ್ಕೆ ದೈವ ಕಟ್ಟಿದಾಗ ಅಲೌಕಿಕ ಶಕ್ತಿ ಜಾಗೃತಿಯಾಗಿರುತ್ತೆ, ದೈವ ಕಟ್ಟಿದವರು ಹೇಳಿದ ಮಾತುಗಳು ನಿಜವಾಗಿವೆ ಎನ್ನುತ್ತಾರೆ.

# ಫಾದರ್ಸ್ ಡೇ ದಿನ ಅಲ್ಲು ಅರ್ಜುನ್‌ಗೆ ಮಕ್ಕಳಿಂದ ಸರ್‌ಪ್ರೈಸ್

ಅಲ್ಲು ಅರ್ಜುನ್ ಅವರ ಮಕ್ಕಳಾದ ಅಯಾನ್ ಮತ್ತು ಅರ್ಹ, ತಮ್ಮ ತಂದೆಗೆ ಫಾದರ್ಸ್ ಡೇ ಹಬ್ಬದಂದು ಚಾಕೊಲೇಟ್ ಕೇಕ್‌ನಿಂದ ಸರ್‌ಪ್ರೈಸ್ ನೀಡಿದ್ದಾರೆ. ಅಲ್ಲು ಅರ್ಜುನ್ ಈ ವಿಚಾರವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡು ಮಕ್ಕಳಿಗೆ ಧನ್ಯವಾದ ಹೇಳಿದ್ದಾರೆ ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂದೂ ಹೇಳಿದ್ದಾರೆ.

ಅಲ್ಲು ಅರ್ಜುನ್ AA22 X A6 ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದು, ಈ ಕಾರಣಕ್ಕಾಗಿ ಮಕ್ಕಳಿಂದ ದೂರವಿದ್ದಾರೆ ಎಂದು ತಿಳಿದುಬಂದಿದೆ. ಭಾನುವಾರ ವಿಶ್ವ ತಂದೆಯರ ದಿನ. ಈ ವೇಳೆ ಜನ ಸಾಮಾನ್ಯರಿಂದ ಹಿಡಿದು ಸೆಲೆಬ್ರಿಟಿಗಳವರೆಗೆ ಎಲ್ಲರೂ ತಮ್ಮ ತಂದೆಯನ್ನು ನೆನಪು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಅಲ್ಲು ಅರ್ಜುನ್ ಮಕ್ಕಳಾದ ಅಯಾನ್ ಮತ್ತು ಅರ್ಹ ಕೂಡ ಇದಕ್ಕೆ ಭಿನ್ನವಾಗಿಲ್ಲ. ಅವರು ತಂದೆಗೆ ಫಾದರ್ಸ್ ಡೇ ಶುಭಾಶಯ ತಿಳಿಸಿದ್ದಾರೆ. ಅಲ್ಲದೆ ತಂದೆಗೆ ಒಂದು ಸರ್‌ಪ್ರೈಸ್ ಕೊಟ್ಟಿದ್ದಾರೆ. ಈ ವಿಚಾರವನ್ನು ಅಲ್ಲು ಅರ್ಜುನ್ ಅವರು ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಹಂಚಿಕೊಂಡು ಧನ್ಯವಾದ ಹೇಳಿದ್ದಾರೆ. ಅಲ್ಲು ಅರ್ಜುನ್ ಮಕ್ಕಳು ತಂದೆಗಾಗಿ ಚಾಕೊಲೇಟ್ ಕೇಕ್‌ನ ಇಟ್ಟಿದ್ದಾರೆ. ಈ ಕೇಕ್ ಮೇಲೆ ಚೆರಿ ಹಣ್ಣುಗಳನ್ನು ಇಟ್ಟಿದ್ದಾರೆ. ಈ ಕೇಕ್‌ನ ಅವರ ತಂದೆಗಾಗಿ ಅವರೇ ಮಾಡಿದಂತೆ ಕಾಣುತ್ತದೆ.



ಈ ಕೇಕ್ ಮೇಲೆ 'ಹ್ಯಾಪಿ ಫಾದರ್ಸ್ ಡೇ' ಎಂದು ಅವರು ಹೇಳಿದ್ದಾರೆ. ಈ ಫೋಟೋನ ಇನ್‌ಸ್ಟಾಗ್ರಾಮ್ ಸ್ಟೇಟಸ್‌ನಲ್ಲಿ ಹಂಚಿಕೊಂಡಿರುವ ಅವರು, ಥ್ಯಾಂಕ್‌ಯೂ ಅಯಾನ್ ಮತ್ತು ಅರ್ಹ. ನಾನು ನಿಮ್ಮನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ. ಅಲ್ಲು ಅರ್ಜುನ್ ಅವರು ಮಕ್ಕಳನ್ನು ತುಂಬಾನೇ ಪ್ರೀತಿ ಮಾಡುತ್ತಾರೆ. ಅವರು ಆಗಾಗ ಮಕ್ಕಳ ಜೊತೆ ವೆಕೇಶ್ ತೆರಳುತ್ತಾರೆ. ಸಿನಿಮಾ ಕೆಲಸಗಳಲ್ಲಿ ಬಿಡುವು ಮಾಡಿಕೊಂಡು ಅವರು ವಿದೇಶಕ್ಕೆ ತೆರಳುತ್ತಾರೆ. ಈ ವೇಳೆ ಅವರ ಪತ್ನಿ ಸ್ನೇಹಾ ರೆಡ್ಡಿ ಕೂಡ ಸಾಥ್ ನೀಡುತ್ತಾರೆ. ಈಗ ಅಲ್ಲು ಅರ್ಜುನ್ ಅವರು ಸಿನಿಮಾ ಕೆಲಸಗಳ ಕಾರಣಕ್ಕೆ ಮಕ್ಕಳ ಜೊತೆ ಇಲ್ಲ ಎಂದು ಹೇಳಲಾಗುತ್ತಿದೆ. ಈ ಕಾರಣದಿಂದಲೇ ಅವರು ಮಿಸ್ ಯೂ ಹೇಳಿದ್ದಾರೆ ಎನ್ನಲಾಗಿದೆ.

ಈ ಮೊದಲು 'ಪುಷ್ಪ 2' ಚಿತ್ರಕ್ಕೆ ಅಲ್ಲು ಅರ್ಜುನ್ ಅವರು ಉದ್ದನೆಯ ಗಡ್ಡ ಬಿಟ್ಟಿದ್ದರು. ಈ ಗಡ್ಡದಿಂದ ಅವರಿಗೆ ಸಾಕಷ್ಟು ಸಮಸ್ಯೆ ಆಗಿತ್ತಂತೆ. ಏಕೆಂದರೆ ಮಕ್ಕಳು ಮುತ್ತು ಕೊಡಲು ತಮ್ಮ ಬಳಿ ಬರುತ್ತಲೇ ಇರಲಿಲ್ಲ ಎಂದು ಹೇಳಿದ್ದರು. ಈ ಕಾರಣದಿಂದಲೇ ಗಡ್ಡ ಶೇವ್ ಮಾಡಲು ಅವರು ಬಯಸಿದ್ದರು. ಅಲ್ಲು ಅರ್ಜುನ್ ಅವರು 'AA22 X A6' ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಇದ್ದಾರೆ. ಇದಕ್ಕಾಗಿ ಅವರು ಟ್ರಾನ್ಸ್‌ಫಾರ್ಮೇಷನ್ ಮಾಡಿಕೊಳ್ಳುತ್ತಿದ್ದಾರೆ. ಅವರು ಈ ಚಿತ್ರಕ್ಕಾಗಿ ತಮ್ಮ ಬಾಡಿಯನ್ನು ಬಲ್ಕ್ ಮಾಡಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ. ಇತ್ತೀಚೆಗೆ ಈ ಸಿನಿಮಾಗಾಗಿ ದೀಪಿಕಾ ಪಡುಕೋಣೆ ಎಂಟ್ರಿಕೊಟ್ಟಿದ್ದಾರೆ. ಈ ವಿಡಿಯೋನ ಅವರು ಇತ್ತೀಚೆಗೆ ಹಂಚಿಕೊಂಡಿದ್ದಾರೆ.

# ಐಸಿಸಿ 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ವೇಳಾಪಟ್ಟಿ ಬಿಡುಗಡೆ

ಐಸಿಸಿ 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ವೇಳಾಪಟ್ಟಿ ಬಿಡುಗಡೆ ಆಗಿದೆ. ಈ ಆವೃತ್ತಿಯಲ್ಲಿ ಭಾರತ ತಂಡ 18 ಟೆಸ್ಟ್ ಪಂದ್ಯಗಳನ್ನು ಆಡಲಿದ್ದು, ಇಂಗ್ಲೆಂಡ್, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಶ್ರೀಲಂಕಾ ಮತ್ತು ನ್ಯೂಜಿಲೆಂಡ್ ವಿರುದ್ಧದ ಪಂದ್ಯಗಳನ್ನು ಆಡಲಿದೆ. ಆಸ್ಟ್ರೇಲಿಯಾ ವಿರುದ್ಧದ 5 ಪಂದ್ಯಗಳ ಸರಣಿ ಪ್ರಮುಖವಾಗಿದೆ. ಆಸ್ಟ್ರೇಲಿಯಾ 22 ಪಂದ್ಯಗಳನ್ನು ಆಡಲಿದ್ದು, ಇಂಗ್ಲೆಂಡ್ 21 ಪಂದ್ಯಗಳನ್ನು ಆಡಲಿದೆ. ಜೂನ್ 17 ರಂದು ಶ್ರೀಲಂಕಾ ಮತ್ತು ಬಾಂಗ್ಲಾದೇಶ ನಡುವಿನ ಪಂದ್ಯದೊಂದಿಗೆ ಚಾಂಪಿಯನ್‌ಶಿಪ್ ಆರಂಭವಾಗುತ್ತದೆ.

### ಟೀಂ ಇಂಡಿಯಾ ವೇಳಾಪಟ್ಟಿ

- ಇಂಗ್ಲೆಂಡ್: 5 ಪಂದ್ಯಗಳು
- ವೆಸ್ಟ್ ಇಂಡೀಸ್: 2 ಪಂದ್ಯಗಳು
- ದಕ್ಷಿಣ ಆಫ್ರಿಕಾ: 2 ಪಂದ್ಯಗಳು
- ಆಸ್ಟ್ರೇಲಿಯಾ: 5 ಪಂದ್ಯಗಳು
- ಶ್ರೀಲಂಕಾ: 2 ಪಂದ್ಯಗಳು
- ನ್ಯೂಜಿಲೆಂಡ್: 2 ಪಂದ್ಯಗಳು

ಲಾರ್ಡ್ಸ್‌ನಲ್ಲಿ ನಡೆದ ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ನಡುವಿನ ಫೈನಲ್ ಪಂದ್ಯದೊಂದಿಗೆ ಮೂರನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂತ್ಯವಾಗಿದೆ. ದಕ್ಷಿಣ ಆಫ್ರಿಕಾ ತಂಡ ಮೂರನೇ ಆವೃತ್ತಿಯ ಚಾಂಪಿಯನ್ ಆಗಿ ಹೊರಹೊಮ್ಮುವಲ್ಲಿ ಯಶಸ್ವಿಯಾಗಿದೆ. ಇದೀಗ ನಾಲ್ಕನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ವೇಳಾಪಟ್ಟಿಯನ್ನು ಐಸಿಸಿ ಪ್ರಕಟಿಸಿದೆ. ಇದರಲ್ಲಿ 9 ತಂಡಗಳ ನಡುವೆ ಒಟ್ಟು 71 ಪಂದ್ಯಗಳು ನಡೆಯಲಿವೆ. ಜೂನ್ 17 ರಿಂದ ನಾಲ್ಕನೇ ಆವೃತ್ತಿ ಪ್ರಾರಂಭವಾಗಲಿದ್ದು, ಮೊದಲ ಪಂದ್ಯ ಶ್ರೀಲಂಕಾ ಮತ್ತು ಬಾಂಗ್ಲಾದೇಶ ನಡುವೆ ಶ್ರೀಲಂಕಾದ ಗಾಲೆಯಲ್ಲಿ ನಡೆಯಲಿದೆ. ವೇಳಾಪಟ್ಟಿಯ ಪ್ರಕಾರ, ಆಸ್ಟ್ರೇಲಿಯಾ ಈ ಬಾರಿ ಗರಿಷ್ಠ 22 ಪಂದ್ಯಗಳನ್ನು ಆಡಲಿದ್ದು, ಇಂಗ್ಲೆಂಡ್ 21 ಪಂದ್ಯಗಳನ್ನು ಆಡಬೇಕಾಗುತ್ತದೆ. ಈ ವರ್ಷದ ಕೊನೆಯಲ್ಲಿ ಆಶಸ್ ಸರಣಿಯ ಸಮಯದಲ್ಲಿ ಎರಡೂ ತಂಡಗಳು ಪರಸ್ಪರ ಮುಖಾಮುಖಿಯಾಗಲಿವೆ. ಜೂನ್ 20 ರಿಂದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದೊಂದಿಗೆ ಟೀಂ ಇಂಡಿಯಾ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ. ಈ ಪಂದ್ಯ ಲೀಡ್ಸ್‌ನಲ್ಲಿ ನಡೆಯಲಿದೆ.



**ಆಸ್ಟ್ರೇಲಿಯಾ ವಿರುದ್ಧ 5 ಪಂದ್ಯಗಳು:** 2023-25ರ ಡಬ್ಲ್ಯುಟಿಸಿಯಲ್ಲಿ, ಟೀಂ ಇಂಡಿಯಾ ಮೂರನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು, ಆದರೆ ಈ ಬಾರಿ ಗಿಲ್ ಪಡೆಯ ಹೆಚ್ಚಿನ ಪಂದ್ಯಗಳು ತವರಿನಲ್ಲಿ ನಡೆಯುತ್ತವೆ, ಆದ್ದರಿಂದ ಯಾವುದೇ ಬೆಲೆ ತೆತ್ತಾದರೂ ಗೆಲ್ಲುವ ಇರಾದೆಯಲ್ಲಿರುವ ಭಾರತಕ್ಕೆ ತಂಡಕ್ಕೆ ಪ್ರಮುಖ ಸವಾಲೆಂದರೆ ಅದು ಆಸ್ಟ್ರೇಲಿಯಾ ತಂಡ. ಆಸ್ಟ್ರೇಲಿಯಾ ಈ ಬಾರಿ ಭಾರತ ಪ್ರವಾಸ ಮಾಡಬೇಕಾಗಿದ್ದು, ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಟೀಂ ಇಂಡಿಯಾವನ್ನು ಎದುರಿಸಲಿದೆ. ಈ ಐದು ಪಂದ್ಯಗಳನ್ನು ಗೆಲ್ಲುವ ಮೂಲಕ ಭಾರತ ತನ್ನ ಹಳೆಯ ಸೋಲಿಗೆ ಸೇಡು ತೀರಿಸಿಕೊಳ್ಳುವ ಸಾಧ್ಯತೆಗಳಿವೆ.

### 18 ಟೆಸ್ಟ್ ಪಂದ್ಯಗಳನ್ನು ಆಡಲಿದೆ ಭಾರತ

**ಶುಭ್‌ಮನ್ ಗಿಲ್ ನೇತೃತ್ವದ ಭಾರತ ತಂಡವು 2025-27ರ ಡಬ್ಲ್ಯುಟಿಸಿ ಅವಧಿಯಲ್ಲಿ ಒಟ್ಟು 18 ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಜೂನ್ 20 ರಿಂದ ಇಂಗ್ಲೆಂಡ್ ವಿರುದ್ಧ 5 ಟೆಸ್ಟ್ ಸರಣಿಯೊಂದಿಗೆ ಇದು ಪ್ರಾರಂಭವಾಗಲಿದೆ. ಇದರ ನಂತರ ಟೀಂ ಇಂಡಿಯಾ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ಟೆಸ್ಟ್ ಸರಣಿಗಳನ್ನು ಆಡಲಿದೆ. ಇದಲ್ಲದೆ, ಟೆಸ್ಟ್ ಪಂದ್ಯಗಳನ್ನು ಆಡಲು ಶ್ರೀಲಂಕಾ ಮತ್ತು ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿದೆ.**

**ಅಕ್ಟೋಬರ್‌ನಲ್ಲಿ ಆಫ್ರಿಕಾದ ಮೊದಲ ಪಂದ್ಯ:** ಹಾಲಿ ಚಾಂಪಿಯನ್ ದಕ್ಷಿಣ ಆಫ್ರಿಕಾ ಅಕ್ಟೋಬರ್‌ನಲ್ಲಿ ತಮ್ಮ ಅಭಿಯಾನವನ್ನು ಪ್ರಾರಂಭಿಸಲಿದ್ದು, ಪಾಕಿಸ್ತಾನದಲ್ಲಿ ಟೆಸ್ಟ್ ಸರಣಿಯನ್ನು ಆಡಲಿದೆ. ಆ ಬಳಿಕ ದಕ್ಷಿಣ ಆಫ್ರಿಕಾ ತಂಡವು ಸೆಪ್ಟೆಂಬರ್ 2026 ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಮೂರು ಪಂದ್ಯಗಳ ಟೆಸ್ಟ್ ಸರಣಿಯನ್ನು ತವರಿನಲ್ಲಿ ಆಡಲಿದೆ.

**ಮಾಜಿ ಚಾಂಪಿಯನ್‌ಗೆ ಹೆಚ್ಚಿನ ಪಂದ್ಯಗಳು:** 2025-27ರ ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್‌ನಲ್ಲಿ ಆಸ್ಟ್ರೇಲಿಯಾ ಗರಿಷ್ಠ 22 ಟೆಸ್ಟ್ ಪಂದ್ಯಗಳನ್ನು ಆಡಿದರೆ, ಇಂಗ್ಲೆಂಡ್ 21 ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಇದಲ್ಲದೆ, ನ್ಯೂಜಿಲೆಂಡ್ 16, ವೆಸ್ಟ್ ಇಂಡೀಸ್ 14, ದಕ್ಷಿಣ ಆಫ್ರಿಕಾ 14, ಪಾಕಿಸ್ತಾನ 13, ಶ್ರೀಲಂಕಾ 12 ಮತ್ತು ಬಾಂಗ್ಲಾದೇಶ 12 ಟೆಸ್ಟ್ ಪಂದ್ಯಗಳನ್ನು ಆಡಲಿವೆ.

# ಅನುಮಾನಿಸಿದವರಿಗೆ ಈ ಟ್ರೋಫಿಯೇ ಉತ್ತರ



ಟೀಕಾಕಾರರಿಗೆ ಬವುಮಾ ಉತ್ತರ

ದಕ್ಷಿಣ ಆಫ್ರಿಕಾ ತಂಡದ ನಾಯಕ ಬವುಮಾ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಗೆದ್ದ ನಂತರ ತಮ್ಮ ಗೆಲುವಿನ ಭಾಷಣದಲ್ಲಿ ಟೀಕೆಗಳಿಗೆ ಉತ್ತರಿಸಿದ್ದಾರೆ. ಕಗಿಸೊ ರಬಾಡ ಮತ್ತು ಮಾರ್ಕ್ರಮ್ ಅವರನ್ನು ಹೊಗಳಿ, ಹಿಂದಿನ ಸೋಲುಗಳನ್ನು ನೆನಪಿಸಿಕೊಂಡಿದ್ದಾರೆ. ಈ ಗೆಲುವು ತಮ್ಮ ತಂಡದ ಸಾಮರ್ಥ್ಯವನ್ನು ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾ ಮಣಿಸಿರುವ ದಕ್ಷಿಣ ಆಫ್ರಿಕಾ ತಂಡ ಮೊದಲ ಬಾರಿಗೆ ಚಾಂಪಿಯನ್ ಪಟ್ಟಕ್ಕೇರಿದೆ. ಈ ಮೂಲಕ ಐಸಿಸಿ ಟೂರ್ನಿಗಳಲ್ಲಿ ಬರೋಬ್ಬರಿ 27ವರ್ಷಗಳ ಬಳಿಕ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಐತಿಹಾಸಿಕ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 74ರನ್‌ಗಳ ಹಿನ್ನಡೆ ಅನುಭವಿಸಿದ್ರೂ ನಂತರ ಮೈಗೊಡವಿ ಎದ್ದ ಹರಿಣಗಳ ಪಡೆ ದಾಖಲೆಯ ಮೊತ್ತ ಬೆನ್ನತ್ತಿ ಗೆದ್ದುಬೀಗಿದೆ. ಗೆಲುವಿನ ನಂತರ ಮಾತನಾಡಿದ ತಂಡದ ನಾಯಕ ಟೆಂಬಾ ಬವುಮಾ, ಈ ಹಿಂದೆ ತಂಡವನ್ನು ಕೆಣಕಿದ ಟೀಕಾಕಾರರಿಗೆ ತಕ್ಕ ಉತ್ತರ ನೀಡಿದ್ದಾರೆ. ಅಲ್ಲದೆ ಈ ಗೆಲುವಿನ ಶ್ರೇಯವನ್ನು ಇಬ್ಬರು ಆಟಗಾರರಿಗೆ ನೀಡಿದ್ದಾರೆ.

**ದುರ್ಬಲ ತಂಡದ ವಿರುದ್ಧ ಗೆದ್ದಿದ್ದಾರೆ ಎಂದಿದ್ದ ವಾನ್:** ವಾಸ್ತವವಾಗಿ ಜನವರಿ 2, 2025ರಂದು ದಕ್ಷಿಣ ಆಫ್ರಿಕಾ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್‌ಗೆ ಅರ್ಹತೆ ಪಡೆದ ಬಗ್ಗೆ ಮಾತನಾಡಿದ್ದ ಇಂಗ್ಲೆಂಡ್‌ನ ಮಾಜಿ ನಾಯಕ ಮೈಕೆಲ್ ವಾಘನ್, 'ದಕ್ಷಿಣ ಆಫ್ರಿಕಾ ತಂಡವನ್ನು ನೋಡಿದರೆ, ಅವರು ಬಹುತೇಕ ಯಾರನ್ನೂ ಸೋಲಿಸದೆ ಫೈನಲ್ ತಲುಪಿದ್ದಾರೆ. ದುರ್ಬಲ ತಂಡವನ್ನು ಸೋಲಿಸುವ ಮೂಲಕ ದಕ್ಷಿಣ ಆಫ್ರಿಕಾ ಪ್ರಶಸ್ತಿ ಪಂದ್ಯಕ್ಕೆ ಅರ್ಹತೆ ಪಡೆದಿದೆ ಎಂದು ಹೇಳಿಕೊಂಡಿದ್ದರು. ಇದೀಗ ಫೈನಲ್ ಗೆದ್ದ ನಂತರ ಪಂದ್ಯದ ಪ್ರಸ್ತುತಿ ಸಮಾರಂಭದಲ್ಲಿ ಮಾತನಾಡಿದ ಬವುಮಾ, 'ನಾವು ಒಂದು ತಂಡವಾಗಿ ಫೈನಲ್‌ಗೆ ಅರ್ಹತೆ ಪಡೆದವು. ನಾವು ನಡೆದುಬಂದ ಹಾದಿಯನ್ನು ಅನುಮಾನಿಸುವ ಜನರಿದ್ದರು, ನಾವು ದುರ್ಬಲ ತಂಡಗಳನ್ನು ಸೋಲಿಸಿ ಈ ಹಂತಕ್ಕೆ ಬಂದಿದ್ದೇವೆ ಎಂದು ಜರಿದರು. ಆದರೆ ಹಾಗೆ ಟೀಕಿಸಿದವರಿಗೆ ಈ ಟ್ರೋಫಿ ಉತ್ತರವಾಗಿದೆ ಎಂದರು.

**ಗೆಲುವಿನ ಶ್ರೇಯ ಇಬ್ಬರು ಆಟಗಾರರಿಗೆ ಸಲ್ಲುತ್ತದೆ:** ಫೈನಲ್ ಪಂದ್ಯಕ್ಕೂ ಮುನ್ನ ಸಾಕಷ್ಟು ಟೀಕೆಗಳನ್ನು ಎದುರಿಸಿದ್ದ ದಕ್ಷಿಣ ಆಫ್ರಿಕಾ ತಂಡದ ನಾಯಕ, ಆಸ್ಟ್ರೇಲಿಯಾ ವಿರುದ್ಧದ ಗೆಲುವಿಗೆ ತಮ್ಮ ಇಬ್ಬರು ಆಟಗಾರರನ್ನು ಶ್ಲಾಘಿಸಿದ್ದಾರೆ. ಮೊದಲನೆಯದಾದಗಿ ರಬಾಡರನ್ನು ಹೊಗಳಿದ ಬವುಮಾ, 'ಕಗಿಸೊ ರಬಾಡ ಒಬ್ಬ ಶ್ರೇಷ್ಠ ಆಟಗಾರ. ಕೆಲವು ವರ್ಷಗಳಲ್ಲಿ ಅವರನ್ನು ಐಸಿಸಿ ಹಾಲ್ ಆಫ್ ಫೇಮ್‌ಗೆ ಸೇರಿಸಲಾಗುವುದು. ಅವರ ಸುತ್ತ ಎಷ್ಟೇ ವಿವಾದಗಳಿದ್ದರೂ ಅವುಗಳಿಗೆ ತಲೆಕೆಡಿಸಿಕೊಳ್ಳದೆ ಅವರು ಮಾಡುವುದನ್ನು ಮಾಡಿದರು' ಎಂದರು. ಹಾಗೆಯೇ ಮಾರ್ಕ್ರಮ್ ಅವರನ್ನು ಹೊಗಳಿದ ಬವುಮಾ, 'ಮಾರ್ಕ್ರಮ್ ಒಬ್ಬ ಶ್ರೇಷ್ಠ ಆಟಗಾರ, ಅವರ ಅಂಕಿಅಂಶಗಳೇ ಇದಕ್ಕೆ ಸಾಕ್ಷಿ ಎಂದರು.

**ಕೆಟ್ಟ ದಿನಗಳನ್ನು ನೆನಪಿಸಿಕೊಂಡ ಬವುಮಾ:** ಇದರ ಜೊತೆಗೆ ಐಸಿಸಿ ಪ್ರಶಸ್ತಿಯನ್ನು ಕಳೆದುಕೊಂಡ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಬವುಮಾ, 'ನಾವು ಪದೇ ಪದೇ ಐಸಿಸಿ ಟ್ರೋಫಿ ಗೆಲ್ಲುವ ಸನಿಹಕ್ಕೆ ಬಂದು ಅದರಲ್ಲಿ ವಿಫಲರಾಗುತ್ತಿದ್ದೇವು. ನಾವು ಅನೇಕ ನೋವು ಮತ್ತು ನಿರಾಶೆಗಳನ್ನು ಎದುರಿಸಿದ್ದೇವೆ, ಆದರೆ ಈಗ ಎಲ್ಲವೂ ನಿಧಾನವಾಗಿ ಬದಲಾಗುತ್ತಿದೆ. ಈ ಗೆಲುವು ನಮಗೆ ತುಂಬಾ ವಿಶೇಷವಾಗಿದೆ, ಇದನ್ನು ವರ್ಣಿಸಲು ಸಾಧ್ಯವಿಲ್ಲ ಎಂದಿದ್ದಾರೆ.

# ಟಿ20 ಲೀಗ್‌ನಲ್ಲಿ ಶಿವಂ ಸಿಂಗ್ ಆರ್ಭಟ



ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಬಲಗೈ ದಾಂಡಿಗ ಶಿವಂ ಸಿಂಗ್ ಭರ್ಜರಿ ಪ್ರದರ್ಶನ ನೀಡುತ್ತಿದ್ದಾರೆ. ದಿಂಡಿಗಲ್ ಡ್ರ್ಯಾಗನ್ಸ್ ತಂಡದ ಆರಂಭಿಕನಾಗಿ ಕಣಕ್ಕಿಳಿಯುತ್ತಿರುವ ಶಿವಂ ಈಗಾಗಲೇ 12 ಸಿಕ್ಸ್, 17 ಫೋರ್‌ಗಳನ್ನು ಬಾರಿಸಿ ಸಂಚಲನ ಸೃಷ್ಟಿಸಿದ್ದಾರೆ. ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಬ್ಯಾಟರ್‌ಗಳ ಅಬ್ಬರ ಮುಂದುವರೆದಿದೆ. ಈ ಲೀಗ್‌ನಲ್ಲಿ ಕಣಕ್ಕಿಳಿಯುತ್ತಿರುವ ಶಿವಂ ಸಿಂಗ್ ಸಿಕ್ಸರ್‌ಗಳ ಸುರಿಮಳೆಗೈಯ್ಯುತ್ತಿದ್ದಾರೆ. ಈ ಹಿಂದೆ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದ ಶಿವಂ ಅವರಿಗೆ ಒಂದೇ ಒಂದು ಚಾನ್ಸ್ ಸಿಕ್ಕಿರಲಿಲ್ಲ. ಇಡೀ ಟೂರ್ನಿ ಬೆಂಚ್ ಕಾದಿದ್ದ ಆಟಗಾರ ಇದೀಗ ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ತನ್ನ ಬ್ಯಾಟಿಂಗ್ ಪರಾಕ್ರಮವನ್ನು ತೆರೆದಿಟ್ಟಿದ್ದಾರೆ. ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ದಿಂಡಿಗಲ್ ಡ್ರ್ಯಾಗನ್ಸ್ ತಂಡದ ಪರ ಕಣಕ್ಕಿಳಿಯುತ್ತಿರುವ ಶಿವಂ ಸಿಂಗ್ ಕಳೆದ ಮೂರು ಪಂದ್ಯಗಳಲ್ಲಿ 2 ಭರ್ಜರಿ ಅರ್ಧಶತಕ ಬಾರಿಸಿದ್ದಾರೆ. ಈ ಮೂಲಕ ಮೂರು ಪಂದ್ಯಗಳಿಂದ ಕಲೆಹಾಕಿರುವುದು ಬರೋಬ್ಬರಿ 198 ರನ್‌ಗಳು. ಇದೇ ವೇಳೆ ಶಿವಂ ಸಿಂಗ್ ಅವರ ಬ್ಯಾಟ್‌ನಿಂದ ಸಿಡಿದ ಸಿಕ್ಸರ್‌ಗಳ ಸಂಖ್ಯೆ ಬರೋಬ್ಬರಿ 12. ಸಿಕ್ಸ್-ಫೋರ್‌ಗಳೊಂದಿಗೆ ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಸಂಚಲನ ಸೃಷ್ಟಿಸಿರುವ ಶಿವಂ ಸಿಂಗ್ ಮೂರು ಪಂದ್ಯಗಳಲ್ಲಿ ಎರಡು ಬಾರಿ ಅಜೇಯರಾಗಿ ಉಳಿದಿದ್ದಾರೆ. ಅದರಲ್ಲೂ ಮಧುರೈ ಪ್ಯಾಂಥರ್ಸ್ ವಿರುದ್ಧದ ಪಂದ್ಯದಲ್ಲಿ ಆರಂಭಿಕನಾಗಿ ಕಣಕ್ಕಿಳಿದ ಶಿವಂ 41 ಎಸೆತಗಳಲ್ಲಿ 8 ಬೌಂಡರಿ ಮತ್ತು 6 ಸಿಕ್ಸರ್‌ಗಳೊಂದಿಗೆ ಅಜೇಯ 86 ರನ್ ಬಾರಿಸಿದ್ದರು. ಶಿವಂ ಸಿಂಗ್ ಅವರ ಈ ಸ್ಫೋಟಕ ಬ್ಯಾಟಿಂಗ್ ನೆರವಿನಿಂದಾಗಿ ದಿಂಡಿಗಲ್ ಡ್ರ್ಯಾಗನ್ಸ್ ತಂಡವು ಈ ಪಂದ್ಯವನ್ನು 45 ಎಸೆತಗಳು ಬಾಕಿಯಿರುವಂತೆ ಗೆದ್ದುಕೊಂಡರು. ಇದಕ್ಕೂ ಹಿಂದಿನ ಎರಡು ಪಂದ್ಯಗಳಲ್ಲಿ ಶಿವಂ ಸಿಂಗ್ 30 ಮತ್ತು ಅಜೇಯ 82 ರನ್ ಬಾರಿಸಿದ್ದರು. ಅಲ್ಲದೆ ಈ ಬಾರಿಯ ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಆಡಿದ ಮೂರು ಪಂದ್ಯಗಳಲ್ಲಿ 12 ಭರ್ಜರಿ ಸಿಕ್ಸ್, 17 ಫೋರ್‌ಗಳನ್ನು ಸಿಡಿಸಿ ಅಬ್ಬರಿಸಿದ್ದಾರೆ.

12 ಸಿಕ್ಸ್
17 ಫೋರ್
198 ರನ್

# ಸೋಲಿನ ನಡುವೆಯೂ ಸ್ಟಾರ್ಕ್ ವಿಶ್ವ ದಾಖಲೆ

ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿ ಸೌತ್ ಆಫ್ರಿಕಾ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಮೂಲಕ 27 ವರ್ಷಗಳ ಬಳಿಕ ಸೌತ್ ಆಫ್ರಿಕಾ ತಂಡವು ಐಸಿಸಿ ಟೂರ್ನಿಯಲ್ಲಿ ಟ್ರೋಫಿ ಗೆದ್ದುಕೊಂಡಿದೆ. ಇದಕ್ಕೂ ಮುನ್ನ ಸೌತ್ ಆಫ್ರಿಕಾ 1998 ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಫೈನಲ್ ಪಂದ್ಯದಲ್ಲಿ ಭರ್ಜರಿ ಬೌಲಿಂಗ್ ಪ್ರದರ್ಶನ ನೀಡಿರುವ ಆಸ್ಟ್ರೇಲಿಯಾ ವೇಗಿ ಮಿಚೆಲ್ ಸ್ಟಾರ್ಕ್ ವಿಶೇಷ ವಿಶ್ವ ದಾಖಲೆ ಬರೆದಿದ್ದಾರೆ. ಅದು ಕೂಡ ದಿ ಲೆಜೆಂಡ್ ಮುತ್ತಯ್ಯ ಮುರಳೀಧರನ್ ಅವರ ಹೆಸರಿನಲ್ಲಿದ್ದ ವಿಶ್ವ ದಾಖಲೆಯನ್ನು ಮುರಿಯುವ ಮೂಲಕ ಎಂಬುದು ವಿಶೇಷ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಭರ್ಜರಿ ಬೌಲಿಂಗ್ ಪ್ರದರ್ಶನ ನೀಡಿರುವ ಆಸ್ಟ್ರೇಲಿಯಾ ವೇಗಿ ಮಿಚೆಲ್ ಸ್ಟಾರ್ಕ್ ವಿಶೇಷ ವಿಶ್ವ ದಾಖಲೆ ಬರೆದಿದ್ದಾರೆ.

ಅದು ಕೂಡ ದಿ ಲೆಜೆಂಡ್ ಮುತ್ತಯ್ಯ ಮುರಳೀಧರನ್ ಅವರ ಹೆಸರಿನಲ್ಲಿದ್ದ ವಿಶ್ವ ದಾಖಲೆಯನ್ನು ಮುರಿಯುವ ಮೂಲಕ ಎಂಬುದು ವಿಶೇಷ. ಲಾರ್ಡ್ಸ್ ಮೈದಾನದಲ್ಲಿ ನಡೆದ ಸೌತ್ ಆಫ್ರಿಕಾ ವಿರುದ್ಧದ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಿಚೆಲ್ ಸ್ಟಾರ್ಕ್ 2 ವಿಕೆಟ್ ಕಬಳಿಸಿದ್ದರು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಉರುಳಿಸುವಲ್ಲಿ ಯಶಸ್ವಿಯಾಗಿದ್ದರು. ಈ ಮೂಲಕ ನಿರ್ಣಾಯಕ ಪಂದ್ಯದಲ್ಲಿ ಸ್ಟಾರ್ಕ್ 5 ವಿಕೆಟ್ ಕಬಳಿಸಿ ಮಿಂಚಿದ್ದರು. ಲಾರ್ಡ್ಸ್ ಮೈದಾನದಲ್ಲಿ ನಡೆದ ಸೌತ್ ಆಫ್ರಿಕಾ ವಿರುದ್ಧದ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಿಚೆಲ್ ಸ್ಟಾರ್ಕ್ 2 ವಿಕೆಟ್ ಕಬಳಿಸಿದ್ದರು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಉರುಳಿಸುವಲ್ಲಿ ಯಶಸ್ವಿಯಾಗಿದ್ದರು. ಈ ಮೂಲಕ ನಿರ್ಣಾಯಕ ಪಂದ್ಯದಲ್ಲಿ ಸ್ಟಾರ್ಕ್ 5 ವಿಕೆಟ್ ಕಬಳಿಸಿ ಮಿಂಚಿದ್ದರು. ಈ ಐದು ವಿಕೆಟ್‌ಗಳೊಂದಿಗೆ ಐಸಿಸಿ ನಾಕೌಟ್ ಪಂದ್ಯಗಳಲ್ಲಿ ಅತ್ಯಧಿಕ ವಿಕೆಟ್ ಕಬಳಿಸಿದ ಬೌಲರ್ ಎಂಬ ವಿಶ್ವ ದಾಖಲೆಯನ್ನು ಮಿಚೆಲ್ ಸ್ಟಾರ್ಕ್ ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಈ ಶ್ರೇಷ್ಠ ದಾಖಲೆ ಶ್ರೀಲಂಕಾದ ಸ್ಪಿನ್ ಮಾಂತ್ರಿಕ ಮುತ್ತಯ್ಯ ಮುರಳೀಧರನ್ ಅವರ ಹೆಸರಿನಲ್ಲಿತ್ತು. ಈ ಐದು ವಿಕೆಟ್‌ಗಳೊಂದಿಗೆ ಐಸಿಸಿ ನಾಕೌಟ್ ಪಂದ್ಯಗಳಲ್ಲಿ ಅತ್ಯಧಿಕ ವಿಕೆಟ್ ಕಬಳಿಸಿದ ಬೌಲರ್ ಎಂಬ ವಿಶ್ವ ದಾಖಲೆಯನ್ನು ಮಿಚೆಲ್ ಸ್ಟಾರ್ಕ್ ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಈ ಶ್ರೇಷ್ಠ ದಾಖಲೆ ಶ್ರೀಲಂಕಾದ ಸ್ಪಿನ್ ಮಾಂತ್ರಿಕ ಮುತ್ತಯ್ಯ ಮುರಳೀಧರನ್ ಅವರ ಹೆಸರಿನಲ್ಲಿತ್ತು. ಮುತ್ತಯ್ಯ ಮುರಳೀಧರನ್ ಐಸಿಸಿ ಟೂರ್ನಿಗಳಲ್ಲಿ ಒಟ್ಟು 15 ನಾಕೌಟ್ ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 23 ವಿಕೆಟ್ ಕಬಳಿಸುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದ್ದರು. ಇದೀಗ ಈ ದಾಖಲೆಯನ್ನು ಅಳಿಸಿ ಹಾಕುವಲ್ಲಿ ಆಸ್ಟ್ರೇಲಿಯಾದ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಯಶಸ್ವಿಯಾಗಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966